Registered No. M. 1393.

ಕಂಠೀರವ

KANTEERAVA

KANARESE. BI-WEEKLY

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

ಸಂಪುಟ ೨೨ | ಮಂಗಳೂರು, ೧೯೪೦ನೇ ಇಸವಿ ಜುಲೈ ತಾರೀಕು ೯ನೇ ಮಂಗಳವಾರ | ಸಂಚಿಕೆ ೨೯

VOL. XXII | MANGALORE, TUESDAY, JULY 9, 1940 | NO. 29

ಅಮೃತಾಂಜನ

(Regd.)

ಅಮೃತಾಂಜನ

ತಲೆನೋವು, ಶಿರೋನೋವನ್ನು, ಉಳುಕು, ಕುತ್ತಿಗೆ, ಭುಜ, ಹಲ್ಲು ನೋವುಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

AMRUTANJAN DEPOTS · BOMBAY. MADRAS. CALCUTTA.

ಅಮೃತಾಂಜನ, ಲಿಮಿಟೆಡ್

ಬೊಂಬಾಯಿ——ಮದ್ರಾಸ್——ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE

Bombay Life Assurance Co., Ltd.

(LTD. 1908)

LIFE INSURANCE DISPELS DARKNESS OF THE MIND AND BRINGS ENLIGHTENMENT AND COURAGE, IMMORTALISES MAJOR PORTION OF YOUR INCOME WHETHER YOU SURVIVE OR NOT AND THUS MAKES LIFE WORTH LIVING TO YOU AND YOUR DEPENDANTS IN REALITY.

ASK US WHAT PARTICULAR SCHEME OF INSURANCE WILL SATISFY YOUR REQUIREMENTS AND YOUR PURSE.

Agency Applications from Active and Influential Ladies and Gentlemen are invited.

To Insure or to Represent consult:—

KOCHIKAR BROTHERS, LTD.,

Madras Branch Secretaries & Chief Agents for Bombay City and Suburbs,

The Bombay Life Bldg., Sir Lalubhai Samaldas Road, Gandhi Nagar, UDIPI

OR ANY OF THEIR FOLLOWING OFFICES AT:

(1) Puthiyara, Calicut. (2) Car Street, Mangalore. (3) Central Station Road, Trivandrum.

(4) Gautam Nivas, Charni Road, Girgaum, Bombay, No. 4. (5) Post Box No. 337, Mount Road, Madras. (6) Visweshwarapuram Circle, Bangalore City.

ಈ ವಾರದ ಕಥೆ

ನೆಳಲು ಬೆಳಕು

(ಶ್ರೀ. ಕೆ. ವಿ. ಶೆಟ್ಟಿ, ಬಿ.ಎ.)

[ಕಥಾ ಸಾರಾಂಶ:—ವೇಣುವಿನ ಸಂಸಾರ; ಅವನ ಸಂಸಾರದಲ್ಲಿ ಹೆಂಡತಿ ಮೊರೆ; ಸಾಕು ತಾಯಿ ರಾಧೆ. ಮೊರೆಗೆ ಬುದ್ಧಿ ಸಾಲದು. ಆಕೆ ಕಠಿನ ರೋಗಕ್ಕೆ ತುತ್ತಾಗಿರುವ ಪತಿಯ ಸೇವೆಗಿಂತಲೂ ತಮ್ಮನ ಉಪನಯನ ಹೆಚ್ಚಿಂದು ತಿಳಿದವಳು. ವೇಣು ಇಂಥ ಅಸ್ಪಬುದ್ಧ ಹೆಂಡತಿಯ ಅವಿವೇಕದಿಂದ ಸಂಸಾರದಲ್ಲಿ ಯಾವ ಸುಖವನ್ನೂ ಕಾಣದೆ ನೊಂದವನಾದರೂ ಮೊರೆಯ ಮೇಲೆ ಅವನಿಗೆ ಅತ್ಯಧಿಕ ಪ್ರೇಮ. ಒಂದಲ್ಲ ಒಂದು ದಿನ ಅವಳೂ ತನ್ನಂತೆ ತನ್ನಲ್ಲಿ ಪ್ರೇಮವನ್ನು ಬೀರುವಳೆಂದು ನಂಬಿಗೆ. ಇಂಥ ನಂಬಿಕೆ ಕೆಡದಂತೆ, ವೇಣುವಿನ ಮನದ ಉರಿ ತಣಿಯುವಂತೆ, ಅವನ ಅಂತಿಮ ಕಾಲದ ಮನಶ್ಶಾಂತಿ ಕೆದರದಂತೆ, ರಾಧೆ ಯಾವ ರೀತಿಯಿಂದ ಸುಳ್ಳು ಹೇಳಿ, ಮೊರೆಯ ವಿಷಯದಲ್ಲಿ ವೇಣುವಿನ ಆದರವನ್ನು ಹೆಚ್ಚಿಸುವಳೆಂಬುದು ಹಿಂದಿನ ಭಾಗದಿಂದ ತಿಳಿದು ಬರುತ್ತಿದೆ.]

ದೂರದ ತಾರೆಗಳು ಕಂಬನಿಗಳ್ಳಂತೆ ಮಿನುಗಿದುವು. ತನ್ನನ್ನು ತ್ಯೆರ್ಯದಲ್ಲಿಯೇ ಬೀಳ್ಕೊಡುವ ಜೀವಕ್ಕೆ ಉಪಕಾರ ಸೂಚಿಸಲು ವೇಣುವು ಒಮ್ಮೆ ಅವನತಶಿರನಾದನು. 'ಕಾಲ'ನು ಹಸ್ತ ಲಾಘವಕ್ಕೆಂದು ವೇಣುವಿನೆಡೆಗೆ ಕೈಚಾಚಿದನು. ಅವನೂ ಅದನ್ನು ಆದರಪುರಸ್ಸರವಾಗಿ ಕುಲುಕಿದನು.

ವೇಣು ಒಂದು ನಿಟ್ಟುಸುರು ಬಿಟ್ಟ. ಸ್ವಲ್ಪ ಅಸಹನೆಯಿಂದ—

'ಅಮ್ಮಾ! ಮೊರೆ ಇನ್ನೂ ಎಚ್ಚತ್ತಿರುವಳಾದರೆ . . . . ಗೆ . . . . ಅವಳನ್ನು ಕರೆ . . . ?'

'ಆಯಿತಪ್ಪಾ! ಈಗಲೇ ಕರೆತರುವೆನು.'

'ಹೆಚ್ಚು ಸಮಯ ಇಲ್ಲಿ ನಿಲ್ಲಿಸಲಾರೆನಮ್ಮಾ. ಐದು ನಿಮಿಷ ಮಾತ್ರ. ಒಂದೆರಡು ಮಾತು ಮಾತನಾಡಲಿದೆ.'

ರಾಧಮ್ಮ ಮೊರೆಯನ್ನು ಕರೆಯ ಹೋದಳು. ಈ ಕಡೆ ವೇಣುವಿನ ನಾಡಿಯು ವೇಗದಿಂದ ಬಡಿಯ ತೊಡಗಿತು. ತನ್ನ ಇಡಿ ದಾಂಪತ್ಯ ಜೀವನದಲ್ಲಿ, ಒಮ್ಮೆಯಾದರೂ ಮೊರೆಯೊಡನೆ ಸಲಿಗೆಯಿಂದ ಮಾತನಾಡದೆ ಹೋದೆನಲ್ಲಾ ಎಂದು ಅವನು ಕೊರಗುತ್ತಿದ್ದ. ಏನೆನ್ನುವುದು?

ವೇಣು—ಮೊರೆಯರು ತೀರಾ ವಿರೋಧ ಮನೋವೃತ್ತಿಯವರು. ಅಂದ ಮೇಲೆ ಅವರ ಸಂಸಾರವು ಸುಗಮವಾಗಿ ಸಾಗುವುದಾದರೂ ಹೇಗೆ? ವೈಮನಸ್ಸಿನಿಂದಲೇ ಮುಂದಡಿ ಇಟ್ಟಿತು. ಅವರ ದಾಂಪತ್ಯ. ಸತಿಪತಿಯರೆಂದೂ ಆಶಿಸುವ ಆ ವಿನೋದಸಲ್ಲಾಪಕ್ಕೆ, ಒಂದಾದರೂ ಸಂದರ್ಭ ಮಿಂಚಲಿಲ್ಲ ಅವರ ಬಾಳಿನಲ್ಲಿ. ಮೊರೆ ತನ್ನ ಬಾಲಮತಿಗೆ ತಕ್ಕಂತೆ ಗೆಳತಿಯರ ಕೂಟದಲ್ಲೇ ಸುಖವನ್ನು ಕಂಡಳು. ವೇಣುವಾದರೋ ಆಕೆಯ ಮೇಲ್ದನಿಗಾಗಿಯೇ ಹಲುಬಿ, ಹಂಬಲಿಸಿ, ಹತಾಶನಾದ. ಅವಕಾಶ ದೊರಕಿದಾಗಲೆಲ್ಲಾ ಆಕೆಯನ್ನು ಮಾತನಾಡಿಸಲು ಯತ್ನಿಸಿದ. ಆಕೆ ಮಾತ್ರ ಎಂದು ತನ್ನ ಪತಿಯಿಂದ ವಿರಹಿತಳಾಗುವೆನೆಂಬ ಚಿಂತೆಯಲ್ಲೇ ಮುನ್ನಡೆದಳು. ಅಂತೂ ವೇಣುವು ನಿರಾಶನಾದುದು ಒಂದಲ್ಲ, ಎರಡಲ್ಲ, ಹಲವು ಸಾರಿ. ಅದು ಅವನ ಬಡುಕಿನಲ್ಲಿ ಅನುದಿನದ ಅನುಭವ.

ಈಗ ಮೊರೆ ಬಂದೊಡನೆ, ತಾನು ಏನು ನುಡಿಯಬೇಕೆಂದು ಚಿಂತಿಸ ತೊಡಗಿದ ವೇಣು. ಬೇಕೆಂದು ಆಕೆಯನ್ನು ಮಾತನಾಡಿಸುವ ಇಷ್ಟ ಆತನಿಗಿರಲಿಲ್ಲ. ಹಾಗೆಂದು ಎಲ್ಲಿ ಆ ಐದು ನಿಮಿಷಗಳು ನಿರರ್ಥಕವಾಗುವವೋ ಎಂಬ ಬಲವಾದ ಶಂಕೆಯೂ ಅವನ ಅಂತರಂಗದಲ್ಲಿ ಕಾಲೂರಿದ್ದಿತು. ಎಷ್ಟೆಂದರೂ ಸಲಿಗೆಯ ಆ ಮಾತುಕಥೆಗೆ ವೇಣುವಿಗೆ ಉಳಿದಿರುವ ಅಲ್ಪಾವಧಿಯೆಂದರೆ, ಈ ಐದೇ ನಿಮಿಷಗಳು ತಾನೆ!

೩

'ಏನಿದು? ಎಲ್ಲಿಗೂ ಹೊರಟಿಲ್ಲವಷ್ಟೆ! ಮೊರಾ.'

'ಹೊರಟೇ ಇರುವೆನು, ಶಿವಪುರಕ್ಕೆ'

'ಏನೆಂದೆ? ಸಂಗಡ ಯಾರು?'

'ಶಂಕರ ಭಾವ'

'ಇಂದು ಬೇಡ ಮಗೂ, ಸ್ವಲ್ಪ ದಿನ ಹೋಗಲಿ.'

'ರೈಲಿನಲ್ಲಿ ಎಂದೊ ಸೀಟು ಕಾದಿಟ್ಟಾಯಿತು.'

'ಅದರಿಂದ ಹೆಚ್ಚಿಗೇನೂ ನಷ್ಟವಿಲ್ಲವೆನ್ನು. ನಾಳೆ ಬೆಳಿಗ್ಗೆ ಹೊರಟರಾಯಿತು.'

'ಸಾಕು! ನಿಮ್ಮ ಶಕುನ ಗಿಕುನ; ಇಂದೇ ಹೋದರೆ ವಿಪತ್ತೇನು?'

'ವೇಣುವಿಗೆ ನಿನ್ನೊಡನೆ ಒಂದಿಷ್ಟು ಮಾತನಾಡಲಪೇಕ್ಷೆ.'

'ಅಷ್ಟಕ್ಕಾಗಿಯೆ? ಅಷ್ಟು ಸಾವಕಾಶವಿದೆ. ಹೋಗಿ ಒಮ್ಮೆ ನೋಡಿ ಬರಬಹುದು.'

'ಆದರೆ ನೀನು ಹೊರಟಿರುವದು ಅವನಿಗೆ ತಿಳಿಯಬಾರದು.'

'ಆಯಿತು, ನಾನಾಗಿ ಹೇಳಲಾರೆ. ಹೆಚ್ಚು ಕಾಲ ಮಾತ್ರ ಅಲ್ಲಿರಲು ನನಗೆ ಸಾಧ್ಯವಿಲ್ಲ. ನಾಳೆ ತಮ್ಮನ ಉಪನಯನ. ಈ ರಾತ್ರಿ ಹೊರಡಲೇ ಬೇಕು.'

ಹಾಯ್! ಮೊರಾ! ಇಷ್ಟೊಂದು ಮನ್ನಿಸು! ಸ್ವಲ್ಪ ಶಾಂತ[illegible]ನಿಂದ ಅವನ ಮಗ್ಗುಲಲ್ಲಿ ಕೂತುಕೊಳ್ಳಮ್ಮಾ! ಹೊರಟ ಸನ್ನಾಹ ಗೊತ್ತಾಗದಿರಲಿ.'

'ನಾನೇನು ಮಾಡಲಾದೀತು? ರೈಲು ನನಗಾಗಿ ಕಾದು ನಿಲ್ಲದಷ್ಟೆ! ಒಳ್ಳೆಯ ಮಾತು! ಭಾವ ಇನ್ನೊಂದು ಕಾಲು ತಾಸಿನಲ್ಲೇ ಬರುವವನಿದ್ದಾನೆ. ಅಷ್ಟರ ವರೆಗೆ ಸಾವಕಾಶವಿದೆ'

'ಇದು ಯುಕ್ತವಲ್ಲ ಮೊರಾ! ಈ ಮನೋಭಾವದಿಂದ ವೇಣುವಿನೊಡನೆ ಹೋದರೆ ಕೆಡುಕೇನೊ ಖಂಡಿತ ಎಂಥ ಕಟುಕು ಕಲ್ಲೆದೆಯವಳಪ್ಪಾ ನೀನು? ಈ ರೀತಿಯಲ್ಲಿ ಪರಿಪರಿ ಹಿಂಸಿಸುತ್ತಿರುವ ಈ ಮುದ್ದು ಮಗು ಕಣ್ಮರೆಯಾಗಲು ಅವಧಿ ಹೆಚ್ಚಿಲ್ಲ, ಬಲ್ಲೆಯಾ? . . . ಇರಲಿ! ಇಂದಿನ ಈ ರಾತ್ರಿಯ ನೆನಹು, ಕೊನೆತನಕ ನಿನ್ನ ಮನಸ್ಸನ್ನು ಕೊರೆಯದಿರಲಾರದು. ಒಂದಲ್ಲೊಂದು ದಿನ ಅರಿವಾದೀತು ನಿನಗೆ—'ನೆಮ್ಮೆ ನೈಮೆಗಳನ್ನೆಲ್ಲ ಎಡೆಬಿಡದೆ ಕಾಯುತ್ತಿರುವ ಭಗವಂತನೊಬ್ಬನಿದ್ದಾನೆಂದು'.

'ಅಮ್ಮಾ, ಹೀಗೆ ನನ್ನನ್ನು ಶಪಿಸಬಾರದು ತಿಳಿಯಿತೇ?'

'ಅಯ್ಯೋ! ಕಂದಾ ವೇಣೂ! ಇನ್ನೂ ಏಕೆ ಆ ಜೀವವನ್ನು ತಳೆದಿರುವೆ? ಈ ಪಾಪಕ್ಕೆ ಕೊನೆಯಿಲ್ಲ. ಅದು ನನ್ನ ಹಿಡಿತಕ್ಕೆ ಸಿಲುಕದು.'

ಮರಳಿ ವೇಣುವಿನ ಮಂಚದೆಡೆಗೆ ಬಂದಳು ರಾಧಮ್ಮ. ಅವನಿಗೆ ನಿದ್ದೆಯ ಜೊಂಪು ಹಿಡಿದಿರಬೇಕೆಂದೆ ಆಕೆ ನಿರೀಕ್ಷಿಸಿದ್ದಳು. ಇಲ್ಲ! ಕಾಲದನಿಯೊಂದು ಕೇಳಿದುದೇ ಸೈ; ಅವನು ಹಾಸಿಗೆಯ ಒಂದು ಪಕ್ಕದಿಂದ ಇನ್ನೊಂದಕ್ಕೆ ಸರಿದ.

'ನೋಡಿದೆಯಾ ಅವಳ . . . . ?'

'ಏನಾಯಿತಮ್ಮಾ! ಮೊರೆ ಬರಲಿಲ್ಲವೆ? ನೀನು ಬರಲೂ ಏಳಂಬವಾಯಿತೇನು?'

'ನೋಡಪ್ಪಾ, ಮೊರೆ ನಿನಗೆಂದು ಒಲೆಯ ಮೇಲೆ ಕುದಿಯಲು ಹಾಲಿಟ್ಟದ್ದು ಉಕ್ಕಿ ಚೆಲ್ಲಿ ಹೋದುದು ಗೊತ್ತೇ ಇಲ್ಲ. ಒಲೆಯೆಲ್ಲ ಹಾಲಾಯಿತು. 'ಅದಕ್ಕೇಕೆ ಚಿಂತೆ? ಬೇರೆ ಇಟ್ಟರಾಯಿತು' ಎಂದೆ. ಕೇಳುತ್ತಾಳೆಯೆ? ನಿನ್ನ ಕೆಲಸದಲ್ಲಿ ತಾನು ಅಜಾಗರೂಕಳಾದೆನಲ್ಲಾ! ಎಂದು ಅವಳಿಗೆ ತನ್ನಲ್ಲೇ ಕೋಪ. ಶಾಂತಗೊಳಿಸಲು ಇಷ್ಟು ಕಾಲ ಹಿಡಿಯಿತು. ಈಗ ತಾನೇ ಅವಳನ್ನು ಮಲಗಿಸಿ ಬಂದೆ. ಅದು ಕಾರಣ ಕರೆತರಲಾಗಲಿಲ್ಲ ವೇಣು! ನಿದ್ದೆಯಲ್ಲಾದರೂ ಪ್ರಕ್ಷುಬ್ಧವಾದ ಮನಸ್ಸು ತಣ್ಣಗಾಗಲಿ.'

ಮೊರೆ ಬರಲಿಲ್ಲವೆಂದೊಡನೆ ವೇಣುವಿನ ಮನಸ್ಸು ಅಲ್ಲೋಲಕಲ್ಲೋಲವಾಯಿತು. ಆದರೆ ಅಲ್ಲೇ ಶಾಂತವಾಯಿತು. ಆಕೆ ಬಂದಿದ್ದರೆ, ತಾನು ಅಂತರಂಗದಲ್ಲಿ ಚಿತ್ರಿಸಿದ್ದ ಆ ಪ್ರತಿಬಿಂಬಕ್ಕೆ ಆಕೆಯ ನಿಜರೂಪಿನಿಂದ ಅಪಾರ ಹಾನಿಯಾಗುತ್ತಿತ್ತೆಂದು ಮನವರಿಕೆಯಾಯಿತವನಿಗೆ. ಈ ಮೊದಲು ಹಲವೊಮ್ಮೆ ಅವನಿಗಾಗಿತ್ತು ಅಂಥ ಅನುಭವ. ತನ್ನ ಕೆಲಸದಲ್ಲಿ ನಿರಾಶಳಾದುದರಿಂದ ಮನನೊಂದಳೆಂಬ ಮಾತೇ, ವೇಣುವಿಗೆ ಅಮೃತ ಸಮಾನವಾಯಿತು.

'ಅಮ್ಮಾ!'

'ಏನಪ್ಪಾ?'

'ನನಗಿನ್ನೂ ಹೆಚ್ಚು ದಿನ ಉಳಿದಿಲ್ಲ. ಆದರೂ ಮನಸ್ಸು ಒಂದಿಷ್ಟೂ ನೋಯುವುದಿಲ್ಲ. ನೀನಾದರೂ ನನಗಾಗಿ ಕಣ್ಣೀರು ಸುರಿಸಬಾರದಮ್ಮಾ.'

'ಇಲ್ಲ ವೇಣು, ನಾನೆಂದೂ ಅಳಲಾರೆ. 'ಸಂಸಾರದಲ್ಲೇ ಸಾರವಿದೆ, ಸಾವಿನಲ್ಲಿಲ್ಲ'ವೆಂದರೆ ನಾನು ನಂಬಲಾರೆ.'

'ಸರಿಯಮ್ಮಾ! ಮರಣದಿಂದಲೇ ಸಂಸಾರ ಬಂಧನ ವಿಮೋಚನೆಯಲ್ಲವೆ? ಅದೇ ನನಗೆ ಎಷ್ಟೋ ಪಾಲಿಗೆ ಸುಖವೆಂದು ತೋರುತ್ತದೆ.'

ವೇಣುವಿನ ದೃಷ್ಟಿಯು ಅಂತರಿಕ್ಷದೆಡೆಗೆ ಹರಿಯಿತು. ಮೊರೆಯೇ ಕಾಲದೇವತೆಯ ಪೋಷಾಕಿನಲ್ಲಿ ತನ್ನೆಡೆಗೆ ಬರುವಂತೆ ಅವನಿಗೆ ಭಾಸವಾಯಿತು. ಹೌದು! ಆಕೆಯೇ ಇಂದು ನಿರ್ಜರದೇವತೆಯಾಗಿ ಬಂದಿರುವಳಿಲ್ಲಿ, ನೋಡು! ಆ ಜಗಜ್ಜನನಿಯೇ, ತನ್ನ ವರದ ಹಸ್ತಗಳಿಂದ ಆಕೆಯ ಮಸ್ತಕದ ಮೇಲೆ ಸುರಿಯುವ ಪ್ರಸಾದ ಪುಷ್ಪಗಳಂತೆ ಕಾಣುತ್ತಿವೆ—ಜೆಲುವಿನ ಆ ತಾರೆಗಳು! ಲಗ್ನ ಮಂಟಪದಲ್ಲಿ ಆ ಮೊದಲ ನೋಟದಂತೆ, ಇಂದೊಮ್ಮೆ ಇರುಳ ತೆರೆಯ ಮುಸುಕಿನಲ್ಲಿ ನಸುಕಾಗಿ ತೋರುತ್ತಿದೆ,—ಪ್ರೇಮವು.

[ಪುಟ ೧೩ ನೋಡಿ]

ಮಕ್ಕಳ ಪ್ಲೀಹ ಮತ್ತು ಯಕೃತ್ತಿನ ದೋಷಗಳು

ಮಕ್ಕಳ ಪ್ಲೀಹ ಮತ್ತು ಯಕೃತ್ತಿನ ದೋಷಗಳ ಆಕ್ರಮಣವು ಹೆಚ್ಚಾಗಿ ಅಪಾಯಕಾರಕವಾದುದು

ಈ ಕೆಳಗಣ ಸೂಚನೆಗಳು ಅಂತೂ ರೋಗದ ಪ್ರಥಮ ಪಾದದಲ್ಲಿ ಕಂಡುಬರುವುವು.

(1) ಕಾರಣವಿಲ್ಲದೆ ಆಗಾಗ ವಿಪರೀತ ಜ್ವರವೇರುವುದು. (2) ಮಲಬದ್ಧತೆ ಅಥವಾ ಅತಿಸಾರ. (3) ಕಾರಣವಿಲ್ಲದ ವಾಂತಿ. (4) ಮಣ್ಣು ಅಥವಾ ಕೆಸರು ವರ್ಣದ ಮಲ. (5) ಬಾಯಿ ರುಚಿ ಇಲ್ಲದಿರುವಿಕೆ. (6) ತುಸು ಹೊಟ್ಟೆಯುಬ್ಬು. (7) ಮೂತ್ರವನ್ನು ನೆಲದ ಮೇಲೆ ಆರಲು ಬಿಟ್ಟರೆ ಬಿಳಿ ಬಿಳಿಯಾಗಿ ಕಾಣುವಿಕೆ. (8) ತಣ್ಣಗಾದ ನೆಲದ ಮೇಲೆ ಕವಚಿ ಮಲಗಲು ಮಗು ಇಷ್ಟಪಡುವುದು. (9) ಮಗು ಹೆಚ್ಚಾಗಿ ಉತ್ಸಾಹವಿರದೆ, ಸೋಮಾರಿ, ಚಟುವಟಿಕೆಹೀನ, ನಗೆಯಿಲ್ಲದಾಗಿರುತ್ತದೆ. ಮಗು ಉದಮೋರೆಯದಾಗುತ್ತದೆ.

ಬೆಳೆದ ರೋಗವಾದರೆ ಈ ಕೆಳಗಣ ಕುರುಹುಗಳು ಕಂಡುಬರುವುವು.

(1) ಪ್ಲೀಹದ ಭಾಗದಲ್ಲಿ ನೋವು. (2) ಹೆಚ್ಚಿನ ಜ್ವರ. (3) ಅರಸಿನ ಮುಂಡಿಗೆ (ಚರ್ಮ, ಕಣ್ಣುಗಳು ಮತ್ತು ಮೂತ್ರ ಹಳದಿಯಾಗಿರುವಿಕೆ). (4) ಹೊಟ್ಟೆಯಲ್ಲಿ ದ್ರವಪದಾರ್ಥದ ಶೇಖರಣ (ಹೊಟ್ಟೆ ಉಬ್ಬಿನಿಂದಾಗಿ ತಿಳಿಯಬಹುದು). (5) ಹೊಟ್ಟೆಯ ಪ್ರಮುಖ ನರಗಳು ಕಂಡುಬರುವವು. (6) ಕಾಲುಗಳು, ಕೈಗಳು ಮತ್ತು ಮುಖ ಬಾತಂತೆ ಕಂಡುಬರುವುದು.

ಈ ವಿಧದ ಪ್ಲೀಹ ಮತ್ತು ಯಕೃತ್ತಿನ ರೋಗಗಳು ಗುಣಕಾರಿಯಾಗಲು ಕಷ್ಟವೆಂದು ಸಾಮಾನ್ಯವಾಗಿ ಅಭಿಪ್ರಾಯವಿದೆ. ಜಮ್ಮಿ ವೆಂಕಟ್ರಮಣಯ್ಯಗಾರುರವರಿಂದ ಕಂಡುಹಿಡಿದು ಪರಿಶೋಧಿಸಲ್ಪಟ್ಟ ಅಸಮಾನ ಔಷಧಿ ಜಮ್ಮಿ ವೆಂಕಟ್ರಮಣಯ್ಯನವರ ಲಿವರ್ ಕ್ಯೂರ್ (ರಿಜಿಸ್ಟರ್ಡ್)ನಿಂದ ರೋಗವನ್ನು ಪರಿಣಾಮಕಾರಕ ರೀತಿಯಲ್ಲಿ ಗುಣಪಡಿಸಬಹುದೆಂದು ಹೆಚ್ಚಿನ ವೈದ್ಯರು ಸಂಪೂರ್ಣವಾಗಿ ಭರವಸೆ ಹೊಂದಿದ್ದಾರೆ.

ಸೂಚನೆ:—ಕೃತಕಗಳಿಂದ ದೂರವಾಗಲು "ಲಿವರ್ ಕ್ಯೂರ್" ಎಂಬ ಟ್ರೇಡ್ ಮಾರ್ಕ್ ಮತ್ತು ಜಮ್ಮಿ ವೆಂಕಟ್ರಮಣಯ್ಯನವರ ಫೋಟೋವನ್ನು ಮುದ್ರೆಮಾಡಲ್ಪಟ್ಟ ವಿಕ್ರಿತವಾಗುವ ಹಳದಿ ರಟ್ಟಿನ ಪೆಟ್ಟಿಗೆಯ ಪ್ಯಾಕೆಟ್‌ಗಳನ್ನು ನೋಡಿರಿ. ಹೆಚ್ಚಿನ ವಿಚಾರಗಳಿಗೆ ಬರೆಯಿರಿ:—

ಜಮ್ಮಿ ವೆಂಕಟ್ರಮಣಯ್ಯ ಎಂಡ್ ಸನ್ಸ್,
ಲಿವರ್ ಕ್ಯೂರ್ ಆಫೀಸ್,
2 & 8 ಫಲಾಯಿ ಸ್ಟ್ರೀಟ್, ಮೈಲಾಪುರ, ಮದ್ರಾಸ್.
ಪೋಸ್ಟ್ ಬೋಕ್ಸ್ ನಂ. 608.

ಕಾಮಿನಿಯ ಸೌಂದರ್ಯದ ಕೀರ್ತಿಯ ಕಲಶ

ಮೃದು ಮತ್ತು ವೈಭವದಿಂದ ಬೆಳೆವ ಕೂದಲು. ನಿಮ್ಮ ಚೆಲುವನ್ನು ಹೆಚ್ಚಿಸಲು ಮತ್ತು ರಕ್ಷಿಸಲು ಮರೆಯದೆ ಕೊಳ್ಳಿರಿ—



ಕಾಮಿನಿಯಾ ಓಯ್ಲ್
(ರಿಜಿಸ್ಟರ್ಡ್)

ಪರಿಶುದ್ಧವೂ ಆತ್ಯುತ್ತಮವೂ ಆದ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಇದು ತಲೆಯ ತೊಡರುಗಳಿಗೆಲ್ಲ ದಿವ್ಯ ಔಷಧಿ. ಅಲ್ಲದೆ ಕೂದಲ ಬೇರನ್ನು ಬೆಳೆಯಿಸಿ, ಕೂದಲು ಉದುರುವುದನ್ನು ತಡೆಯುವುದಲ್ಲದೆ, ಇದರ ಪ್ರಿಯವಾದ ಸುಗಂಧ ಮನಸ್ಸನ್ನು ಆಹ್ಲಾದಕರವಾಗಿ ಇರಿಸುವುದು.

ಕಾಮಿನಿಯಾ ತೈಲ

ಬಹುಪದಕಗಳನ್ನೂ ಪ್ರಶಂಸಾ ಪತ್ರಗಳನ್ನೂ ಸಂಭಾವನಾ ಪತ್ರಗಳನ್ನೂ ಅದರ ಅತ್ಯುತ್ಕೃಷ್ಟತೆಗಾಗಿ ರಾಷ್ಟ್ರದ ಸಕಲರಿಂದಲೂ ಪಡೆದಿದೆ.

ಬಾಟ್ಲಿಯೊಂದರ ಬೆಲೆ ರೂಪಾಯಿ 1. 3 ಬಾಟ್ಲಿಗಳಿಗೆ ರೂ. 2-10-0. ವಿ. ಪಿ. ಖರ್ಚು ಬೇರೆ. ಮುಖ್ಯ ಆಣೆ ಅಂಚೆ ಚೀಟಿ ಕಳುಹುವವರಿಗೆ ಮಾದರಿ ಸೀಸೆ ಪುಕ್ಕಟೆ. ಎಲ್ಲೆಲ್ಲೂ ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್ ಹಾಗೂ ಜೀನಸು ಅಂಗಡಿಗಳಲ್ಲೂ ಇದು ಮಾರಲ್ಪಡುತ್ತದೆ.

ಸುಗಂಧಗಳ ರಾಜ - ಒಟ್ಟೋ ದಿಲ್‌ಬಹಾರ್
(ರಿಜಿಸ್ಟರ್ಡ್)

ವಿಶಾಲ ಜಗತ್ತಿನಲ್ಲಿ ಇದಕ್ಕಿರುವ ಆದರವೇ ಇದರ ಶ್ರೇಷ್ಠತೆಯನ್ನು ವ್ಯಕ್ತಪಡಿಸುತ್ತದೆ. ನಿಮ್ಮ ಕರವಸ್ತ್ರದ ಮೇಲೆ ಬಿದ್ದ ಇದರ ಕೆಲವೇ ಬಿಂದುಗಳು ಮನಮೋಹಕ ಹಾಗೂ ಅಚ್ಚಳಿಯದ ಡೈಲಿ ಮತ್ತು ಜಾಜಿ ಹೂಗಳ ಸುಗಂಧವನ್ನು ಹೊರಸೂಸುವುದು. $\frac{1}{4}$ ಔನ್ಸ್ ಬಾಟ್ಲಿಯ ಬೆಲೆ ರೂ. $1\frac{1}{4}$ ಮತ್ತು ಒಂದು ಡ್ರೇವ್ ಬಾಟ್ಲಿಯ ಬೆಲೆ 12 ಆಣೆಗಳು. ವಿ. ಪಿ. ಚಾರ್ಜು ಬೇರೆ. ಪುಕ್ಕಟೆ ಮಾದರಿ ಸೀಸೆಗಾಗಿ 2 ಆಣೆ ಅಂಚೆ ಚೀಟಿ ಕಳುಹಿಸಿ. ಸುಗಂಧ ಕಾರ್ಡಿನ ಬೆಲೆ 1 ಆಣೆ.

ಪ್ರಧಾನ ಏಜಂಟರು:—

ಎಂಗ್ಲೋ ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂಪೆನಿ, ಬೊಂಬಾಯಿ 2.

ಇಂದಿಗೆ ಭಾರತದ ಬಾಳುವೆ ಪಾವನವಾಯಿತು!

ಜಗತ್ತಿನ ಏಳಿಗೆಯ ಸರ್ವಶಕ್ತನ ಅವತಾರವಾಗಿದೆ!!

ಪ್ರಪಂಚದ ಭವಿಷ್ಯವನ್ನರುಹಿದ ಮಹಾತ್ಮ.

"೧೮೯೩ರಲ್ಲಿ ದಕ್ಷಿಣ ಆಫ್ರಿಕೆಗೆ ಕೆಲಸಗಾರರಾಗಿ, ಅಥವಾ ವ್ಯಾಪಾರಿಗಳಾಗಿ ಹಾಗೂ ಅವರ ಕೈಕೆಳಗಿನವರಾಗಿ ಹೋಗಿದ್ದ ನನ್ನ ನಾಡಿನವರ ಪರವಾಗಿ ಅಲ್ಲಿನ ಪ್ರತಿಯೊಬ್ಬ ಬ್ರಿಟಿಷನನ್ನೂ ವಿನಂತಿಸಿಕೊಂಡಿದ್ದೆ. ಅದು ಪರಿಣಾಮವನ್ನುಂಟುಮಾಡಿತು. ಅಂದಿನ ವಿಚಾರವು ನನ್ನ ದೃಷ್ಟಿಯಿಂದ ಅದೆಷ್ಟು ಪ್ರಮುಖವಾಗಿದ್ದರೂ, ಈ ವಿನಂತಿಗೆ ಕಾರಣವಾದ ವಿಚಾರದ ಮುಂದೆ ಅದು ಅತ್ಯಲ್ಪ.

"ರಾಷ್ಟ್ರಗಳೊಳಗಣ ಹಾಗೂ ಇತರ ವಿಚಾರಗಳ ಸಂಬಂಧವನ್ನು ಸರಿಪಡಿಸುವದಕ್ಕಾಗಿ ನಡೆಯುತ್ತಿರುವಇಂದಿನ ಯುದ್ಧವನ್ನುಳಿದುಅಹಿಂಸೆಯ ವಿಧಾನವನ್ನು ಕೈಕೊಳ್ಳಬೇಕೆಂದು ಆತನಲ್ಲಿಯೇ ಈಗ ಇರಲಿ–ಪ್ರತಿಯೊಬ್ಬ ಬ್ರಿಟಿಷನನ್ನೂ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

"ನಿಮ್ಮ ರಾಜಕಾರಣಿಗಳು ಇಂದಿನ ಯುದ್ಧವು 'ಡೆಮೊಕ್ರೆಸಿ'ಗಾಗಿ ಎಂದಿದ್ದಾರೆ. ಅಲ್ಲದೆ ಇದನ್ನು ಬಲಪಡಿಸುವದಕ್ಕಾಗಿ ಹಲವಾರು ವಿಚಾರಗಳನ್ನೂ ಕೊಡಲಾಗಿದೆ. ಅವೆಲ್ಲವನ್ನೂ ನೀವು ಬಾಯಿಪಾಠ ಮಾಡಿಕೊಂಡಿರುವಿರಿ.

"ಇಂದಿನ ಯುದ್ಧವು ಯಾವ ರೀತಿಯಿಂದ ಕೊನೆಯಾದರೂ ಕೂಡ, ಈ ಯುದ್ಧಾಂತ್ಯದಲ್ಲಿ "ಡೆವೊಕ್ರೆಸಿ"ಯ ಪ್ರತಿನಿಧಿಯೆನ್ನುವ 'ಡೆವೊಕ್ರೆಸಿ' ಉಳಿಯಲಾರದು. ಈ ಯುದ್ಧವು ಎಚ್ಚರಿಕೆಯ ರೂಪದಿಂದ, ಶಾಪವಾಗಿ ಜನಾಂಗಕ್ಕೆ ದೊರೆತಿದೆ. ಇದು ಶಾಪ ಮಾತ್ರವಲ್ಲದೆ ಇದುವರೆಗೆ ತಿಳಿದುಬರದ ರೀತಿಯಲ್ಲಿ ಮಾನವನನ್ನು ಅಮಾನುಷವಾಗಿ ಮಾರ್ಪಡಿಸುವುದು.

"ಕಾದಾಡುವವ— ಕಾದಾಡದವ ಎಂಬ ವ್ಯತ್ಯಾಸ ಅಳಿದಿದೆ. ಯಾರೂ, ಯಾವುದೂ ಉಳಿಯುವಂತಿಲ್ಲ. ಸುಳ್ಳು ಹೇಳುವುದೊಂದು ಕಲೆಯಾಗಿ ಮಾರ್ಪಟ್ಟಿದೆ. ಬ್ರಿಟನ್ನು ಚಿಕ್ಕ ರಾಷ್ಟ್ರಗಳನ್ನು ರಕ್ಷಿಸಬೇಕಾಗಿತ್ತು. ಆದರೆ ಪ್ರಕೃತಕ್ಕಾದರೂ ಒಂದೊಂದಾಗಿ ಅವು ಕಾಣೆಯಾಗಿವೆ.

"ಇದು ಕೂಡಾ ಒಂದು ಎಚ್ಚರಿಕೆ. ಗೋಡೆಯಲ್ಲಿ ಬರೆಯಲ್ಪಟ್ಟುದನ್ನು ಯಾರೂ ಓದದಿದ್ದರೆ, ಮಾನವನು ತಾನಿಂದು ನಾಚಿಸುತ್ತಿರುವ ಆ ಪ್ರಾಣಿಗಳ ಸ್ಥಿತಿಯನ್ನು ಹೊಂದುತ್ತಾನೆ ಎಂಬುದನ್ನು ತಿಳಿಸುವ ಎಚ್ಚರಿಕೆ! ಈ ಬರೆಹವನ್ನು ಯುದ್ಧಾರಂಭದಲ್ಲೇ ನಾನು ಓದಿದ್ದೆ; ಆದರೆ ಒಂದು ಶಬ್ದವನ್ನೂ ನುಡಿವ ಧೈರ್ಯವೂ ನನಗಿರಲಿಲ್ಲ. ಕಾರ್ಯ ಮಿಂಚಿಹೋಗುವ ಮೊದಲೇ ಅದನ್ನು ತಿಳಿಸುವ ಧೈರ್ಯವನ್ನಿಂದು ದೇವರು ನನಗೆ ಕೊಟ್ಟಿದ್ದಾನೆ!

"ಕೂಡಲೇ ಯುದ್ಧವನ್ನು ನಿಲ್ಲಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ; ನೀವು ಬಳಲಿರುವಿರೆಂಬ ಕಾರಣದಿಂದಲ್ಲ, ಬದಲು ಯುದ್ಧವು ನಿಶ್ಚಯವಾಗಿಯೂ ಅತಿ ಕೆಟ್ಟುದು. 'ನಾಜಿ' ತತ್ವವನ್ನು ಕೊಲ್ಲಲು ನೀವೆಳಸಿರುವಿರಿ. ಆದರ ವಿಚಿತ್ರ ರೀತಿಯಿಂದಾಗಿ ಅವನ್ನು ನೀವೆಂದೂ ಕೊಲ್ಲಲಾರಿರಿ.

"ಜರ್ಮನರಂತೆ ನಿಮ್ಮ ಸೈನಿಕರಾದರೂ ನಾಶದ ಕೆಲಸವನ್ನೇ ಮಾಡುತ್ತಿದ್ದಾರೆ. ಒಂದೇ ಒಂದು ವ್ಯತ್ಯಾಸವೆಂದರೆ, ಪ್ರಾಯಶಃ ನಿಮ್ಮದು ಜರ್ಮನರದರಷ್ಟೇ ಪರಿಣಾಮಕಾರಿಯಾಗಿಲ್ಲ. ಹಾಗಿದ್ದರೆ, ಅದಕ್ಕಿಂತ ಹೆಚ್ಚಲ್ಲದಿದ್ದರೂ ಅವರ ದರಷ್ಟೇ ಅದು ಪರಿಣಾಮಕಾರಿಯಾಗಬಹುದು. ಆದಾವ ಬೇರೆ ವಿಧದಿಂದಲೂ ನೀವು ಯುದ್ಧವನ್ನು ಗೆಲಲಾರಿರಿ!

"ಇನ್ನೊಂದು ಮಾತಿನಲ್ಲಿ ಹೇಳುವುದಿದ್ದರೆ, ನೀವು ನಾಜಿಗಳಿಗಿಂತಲೂ ನಿಷ್ಕರುಣಿಗಳಾಗಬೇಕು. ಆದರೆ ನಿಮಿಷ ನಿಮಿಷವೂ ಸಾಗುತ್ತಿರುವ ಅವ್ಯಾಹತವಾದ ಕೊಲೆಗೆ ಅದಾವ ಧ್ಯೇಯವೂ ನ್ಯಾಯಸಮ್ಮತವಾದುದಾಗದು. ಇಂದು ನಡೆಯುತ್ತಿರುವ ಅಮಾನುಷೀಯತೆಯನ್ನು ನಡೆಸಬೇಕೆನ್ನುವ ಆದಾವ ಧ್ಯೇಯವೂ ನ್ಯಾಯವಾದುದಲ್ಲವೆಂದು ನನ್ನ ಮತ!

"ಬ್ರಿಟನ್ನು ಸೋಲಬೇಕೆಂಬಾಶೆ ನನಗಿಲ್ಲ; ಮಾತ್ರವಲ್ಲ; ಪ್ರಾಣಿಸಹಜವಾದ ಶಕ್ತಿಯನ್ನು ಮಿದುಳಿನ ಮೂಲಕವಾಗಲೀ, ಬಲದ ಮೂಲಕವಾಗಲೀ ತೋರಿ, ಅದು ಇಂದಿನ ಪರೀಕ್ಷೆಯಲ್ಲಿ ಗೆಲಬೇಕೆಂಬಾಶೆಯೂ ನನಗಿಲ್ಲ. ನಿಮ್ಮ ಮಾಂಸ ಖಂಡಗಳ ಶಕ್ತಿ ಸ್ವಯಂ ಸಿದ್ಧ. ಅಂದ ಮೇಲೆ ನಾಶ ಕಾರ್ಯದಲ್ಲಿ ನಿಮ್ಮ ಮಿದುಳೂ ಮಾಂಸ ಖಂಡದಂತೆಯೇ ಅಸಮಾನವೆಂಬುದನ್ನು ನೀವು ಪ್ರದರ್ಶಿಸಬೇಕೇ?

"ನಾಜಿಗಳೊಡನೆ ಅಂತಹ ಅಭಿಮಾನಶೂನ್ಯ ಸ್ಪರ್ಧೆಯಲ್ಲಿ ಭಾಗವಹಿಸಲು ನೀವು ಆತಿಸಲಾರಿರೆಂದು ನನ್ನ ನಂಬುಗೆ. ಆದುದರಿಂದ ಅಭಿಮಾನಾಸ್ಪದವೂ, ಹೆಚ್ಚಿನ ಶಕ್ತಿಯುತ್ತವೂ ಆದ ಅಸಮಾನ ವೀರ ಸೈನಿಕನಿಗೆ ಯೋಗ್ಯವಾದ ಉಪಾಯವೊಂದನ್ನರುಹಲು ನಾನು ಇಚ್ಛಿಸಿದ್ದೇನೆ.

"ಶಸ್ತ್ರಾಸ್ತ್ರರಹಿತರಾಗಿ ನೀವು ನಾಜಿ ತತ್ವವನ್ನಿದಿರಿಸಬೇಕೆಂದು ಅಥವಾ ಅಹಿಂಸಾ ಅಸ್ತ್ರದಿಂದವರನ್ನು ವಿರೋಧಿಸಬೇಕೆಂದು ನನ್ನ ಸೂಚನೆ. ನಿಮ್ಮನ್ನೂ, ಜನಾಂಗವನ್ನೂ ಶಸ್ತ್ರಾಸ್ತ್ರಗಳು ಉಳಿಸಲಾರವಾದುದರಿಂದ ಅವುಗಳನ್ನು ಕೆಳಗಿರಿಸಿಬೇಕೆಂದು ನನ್ನ ಸಲಹೆ!

'ಹಿಟ್ಲರ್-ಮುಸಲಿನಿಯರನ್ನಾಮಂತ್ರಿಸಿ ಅವರಿಗೆ ನಿಮ್ಮದೆನ್ನುವ ರಾಷ್ಟ್ರಗಳಲ್ಲಿ ಬೇಕಾದುದನ್ನು ಒಯ್ಯಲು ಬಿಡಿರಿ. ನಿಮ್ಮ ಸುಂದರ ದ್ವೀಪವನ್ನು, ಸುಂದರ ಕಟ್ಟಡಗಳ ಸಹಿತ ಅವರು ವಶಪಡಿಸಿಕೊಳ್ಳಲಿ. ನೀವು ಎಲ್ಲವನ್ನೂ ಕೊಡಿ,— ನಿಮ್ಮ ಆತ್ಮ ನಿಮ್ಮ ಮನಸ್ಸು ಹೊರತಾಗಿ ಇವೆಲ್ಲವನ್ನೂ ನೀವು ಕೊಡಿರಿ.

"ಈ ವ್ಯಕ್ತಿಗಳು ನಿಮ್ಮ ಮನೆಗಳಲ್ಲಿ ವಾಸಿಸಲೆಳಸಿದರೆ— ಮನೆ ಬಿಟ್ಟು ನಡೆಯಿರಿ. ನಿಮಗೆ ಹೊರಹೋಗಲು ಆಸ್ಪದವೀಯದಿದ್ದರೆ, ಹೆಂಗಸು, ಗಂಡಸು, ಮಗು— ಎಲ್ಲರೂ ಕೊಲೆ ಮಾಡಲ್ಪಡಲು ಎಡೆಕೊಡಿರಿ. ಆದರೆ ಹಂಗಿಕರಾಗಿರಲು ನಿರಾಕರಿಸಿ!

"ಈ ವಿಧಾನ ಅಥವಾ ರೀತಿಯನ್ನು ನಾನು ಅಹಿಂಸೆ, ಸತ್ಯಾಗ್ರಹವೆಂದುದು. ಭಾರತದಲ್ಲಿ ಇದರ ಪ್ರಯೋಗದಿಂದ ತಕ್ಕಷ್ಟು ಜಯಶೀಲವಾಗಿದೆ ಅಲ್ಲಿ. ಭಾರತದ ನಿಮ್ಮ ಪ್ರತಿನಿಧಿಗಳು ಇದನ್ನು ನಿರಾಕರಿಸಬಹುದು. ಹಾಗವರು ಮಾಡಿದರೆ ನಾನು ಅವರಿಗಾಗಿ ಬೇಸರಿಸಬೇಕಾಗಿದೆ!

"ನಮ್ಮ ಸತ್ಯಾಗ್ರಹವು ಸಂಪೂರ್ಣವಾಗಿ ಅಹಿಂಸೆಯದಲ್ಲ, ಅದು ದ್ವೇಷದಿಂದ ಉತ್ಪನ್ನವಾದುದೆಂದು ಅವರು ಹೇಳಬಹುದು. ಅವರು ಈ ಮಾನಪತ್ರವನ್ನದಕ್ಕೀಯುವದಿದ್ದರೆ ನಾನು ಅಲ್ಲವೆನ್ನಲಾರೆ. ಅದು ಸಂಪೂರ್ಣವಾಗಿ ಅಹಿಂಸಾತ್ಮಕವಾಗಿದ್ದಿದ್ದರೆ, ಎಲ್ಲಾ ಸತ್ಯಾಗ್ರಹಿಗಳ ಹೃದಯದಲ್ಲೂ ನಿಮ್ಮ ಮೇಲ್ಮೈಯೇ ತುಂಬಿದ್ದಿದ್ದರೆ, ಇಂದು ಭಾರತದ ಒಡೆಯರಾಗಿರುವ ನೀವು ಭಾರತದ ಶಿಷ್ಯರಾಗಿ, ಅಹಿಂಸೆಯಲ್ಲಿ ಅಸಮಾನ ಜಾಣರಾಗಿ ಹೆಚ್ಚಿನ ಜಾಣ್ಮೆಯಿಂದ ಈ ಅಸಮಾನ ಅಸ್ತ್ರದಿಂದ ಜರ್ಮನ್ ಹಾಗೂ ಇಟೆಲಿಗಳ ತೊಡಕನ್ನು. ಇದಿರಿಸುತಿದ್ದಿರೆಂದು ನಾನು ಧೈರ್ಯವಾಗಿ, ಎದೆತಟ್ಟಿ ಹೇಳಬಲ್ಲೆ!

"ನಿಜಕ್ಕೂ ಕಳೆದ ಕೆಲ ತಿಂಗಳ ಯುರೋಪಿನ ಇತಿಹಾಸವು ಬೇರೆ ರೀತಿಯಿಂದಲೇ ಬರೆಯಲ್ಪಡುತಿತ್ತು. ನಿರಪರಾಧಿಗಳ ರಕ್ತದ ಸಾಗರಗಳನ್ನು, ನಿರಪರಾಧಿ ರಾಷ್ಟ್ರಗಳ ಮೇಲಿನ ಅತ್ಯಾಚಾರಗಳನ್ನು, ವೈರತ್ವದ ಹುಟ್ಟನ್ನು ಅದು ನಿಲ್ಲಿಸುತಿತ್ತು.

"ತನ್ನ ಕರ್ತವ್ಯವನ್ನು ಅರಿಯದವನಿಂದ ಮಾಡಲ್ಪಟ್ಟ ಪ್ರಾರ್ಥನೆ ಇದಲ್ಲ! ಅಹಿಂಸೆ ಹಾಗೂ ಅದರ ಫಲಗಳ ವಿಚಾರವಾಗಿ ಕಳೆದ ೫೦ ವರ್ಷಗಳಿಂದ ವಿಜ್ಞಾನದೃಷ್ಟಿಯ ಶೋಧನವನ್ನು ನಾನು ನಡೆಸಿದ್ದೇನೆ. ಸಂಸಾರಿಕ, ಸಾಂಘಿಕ, ಆರ್ಥಿಕ ಹಾಗೂ ರಾಜಕೀಯ ವಿಚಾರದ ಪ್ರತಿಯೊಂದು ಪಥದಲ್ಲೂ ನಾನದನ್ನು ಪ್ರಯೋಗಿಸಿದ್ದೇನೆ. ಇದು ಜಯಶೀಲವಾಗದ ಒಂದೇ ಒಂದು ಉದಾಹರಣೆಯೂ ನನಗೆ ದೊರೆತಿಲ್ಲ.

"ಈ ಪ್ರಯೋಗವು ಅಪ್ರಯೋಜಕವಾಗಿ ಕಂಡು ಬಂದಾಗ, ಅದು ನನ್ನ ತಪ್ಪೆಂದು ನನಗೆ ತಿಳಿದುಬಂದಿದೆ. ನನ್ನ ಮಟ್ಟಿಗೆ ನಾನೂ ಪೂರ್ಣವಾಗಿ ಇದರಲ್ಲಿ ಯಶಸ್ವಿಯಾಗದಿದ್ದರೂ, ದೇವರ ಇನ್ನೊಂದು ಹೆಸರಾದ ಆ ಸತ್ಯದ ಶೋಧಕನೆಂದು ನಾನು ಹೇಳಿಕೊಳ್ಳಬಲ್ಲೆ. ಆ ಸತ್ಯದ ಅಥವಾ ಪರಮಾತ್ಮನ ಶೋಧನೆಯ ಕಾಲದಲ್ಲಿ ನಾನು ಅಹಿಂಸೆಯನ್ನು ಕಂಡುಕೊಂಡೆ. ಅದರ ಪ್ರಚಾರವೇ ನನ್ನ ಜೀವನದ ಧ್ಯೇಯ. ನನಗೆ ನನ್ನ ಧ್ಯೇಯದ ಪೂರೈಕೆಗಾಗಿ ಹೊರತು ಬಾಳುವೆಯಲ್ಲಿ ಇತರ ಆಶೆಯಿಲ್ಲ.

"ಬ್ರಿಟನ್ನಿನಲ್ಲಿ ಆಸಕ್ತಿ ಇರದ ಅದರ ಆಜೀವ ಮಿತ್ರನೆಂದು ನಾನು ಹೇಳಿಕೊಳ್ಳುತ್ತೇನೆ. ಒಂದು ಕಾಲದಲ್ಲಿ ನಾನು ನಿಮ್ಮ ಸಾಮ್ರಾಜ್ಯವನ್ನು ಪ್ರೀತಿಸುವವನು ಆಗಿದ್ದೆ. ಆಗ ಅದು ಭಾರತಕ್ಕೆ ಒಳ್ಳೆಯದನ್ನು ಮಾಡುತ್ತಿದೆ ಎಂದು ತಿಳಿದಿದ್ದೆ.

[ಪುಟ ೧೨ ನೋಡಿ]



ಕಳೆದ ವಾರ

ಶ್ರೀ. ವಾಲ್ಟಂದ್ ಹೀರಾಚಿಲುಚ್ಚರಿಕೆಗಳು

ಇಂಡಿಯದ ಆರ್ಥಿಕ ಹಾಗೂ ಕೈಗಾರಿಕೆಗಳ ವಿಚಾರದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿರುವರು. ಆದರಲ್ಲಿ ಅವರು ಇಂಡಿಯದ ಕೈಗಾರಿಕೆಗಳು ಅಂದರೆ ಹಿಂದೀಯರೇ ಮೂಲಕರಾಗಿ ನಡೆಸುತ್ತಿರುವ ಕಾರ್ಖಾನೆಗಳಿಗೆ ಸರಕಾರದಿಂದ ದೊರೆಯುತ್ತಿರುವ ಪ್ರೋತ್ಸಾಹವೂ ಸಹಾಯವೂ ಸಾಲದೆಂದು ಅಭಿಪ್ರಾಯ ಪಟ್ಟಿರುವರು. "ಜಗತ್ತೂ ಅದರೊಂದಿಗೆ ಇಂಡಿಯವೂ ಬಹಳ ಸಂದಿಗ್ಧವಾದ ಸಂದರ್ಭಗಳಿಗೇ ಈಗ ಒಳಗಾಗಿದೆ. ಈ ದುಷ್ಕಾಲದಲ್ಲಿ ಇಂಡಿಯದಲ್ಲಿ ಹಿಂದೀಯರ ಕೈಗಾರಿಕೆಗಳ ಸ್ಥಾಪನೆಗೂ ಅಭಿವೃದ್ಧಿಗೂ ಸಹಾಯ ಕೊಡುವಲ್ಲಿ ಇಂಡಿಯಾ ಸರಕಾರವು ಯಥೋಚಿತವಾದ ಆತುರವನ್ನೂ, ಕಾರ್ಯೋತ್ಸಾಹವನ್ನೂ ತೋರದೆ ಔದಾತೀನ್ಯವನ್ನೇ ತೋರುವ ಹಾಗಿದೆ. ಇಂದಿನ ಯುದ್ಧವು ಇಂಡಿಯದಲ್ಲಿ ಹೊಸ ಕೈಗಾರಿಕೆಗಳ ನಿರ್ಮಾಣಕ್ಕಾಗಿ ಇಂಡಿಯಾ ಸರಕಾರಕ್ಕೊಂದು ಉತ್ತಮ ಸಂದರ್ಭವನ್ನೊದಗಿಸಿ ಕೊಟ್ಟಿದೆ. ಆರ್ಥಿಕ ಪರಿಸ್ಥಿತಿಯ ಸುಧಾರಣೆಗೆ ಇದೇ ಒಂದು ಅಮೂಲ್ಯ ಸಂಧಿಯಾಗಿದೆ. ಆಪೆರೆ ಕೆಲವು ಹೊಸ ಸಮಿತಿಗಳ ಸ್ಥಾಪನೆ ಮತ್ತು ಅವುಗಳ ವಿೂಟಿಂಗ್ ಇವಿಷ್ಟಲ್ಲದೆ ಇನ್ನೇನೂ ಇದುವರೆಗೆ ಆದ ಹಾಗಿಲ್ಲ" ಎಂದವರ ಮಾತು.

* * *

ಈ ಮಹನೀಯರ ಅಭಿಪ್ರಾಯದ ಹಲವು ಅಂಶಗಳನ್ನು

ನಾವೂ ಒಪ್ಪಬೇಕಾಗಿದೆ. ಆದರೆ ಸರಕಾರವು ನಮ್ಮ ಕೈಗಾರಿಕೆಗಳ ವೃದ್ಧಿಯ ವಿಚಾರದಲ್ಲಿ ಹಿಂದಿನಷ್ಟು ಔದಾಸೀನ್ಯ ವೃತ್ತಿಯನ್ನು ತೋರುತ್ತಿಲ್ಲವೆಂಬುದು ಕೆಲ ಕೆಲವು ನಿದರ್ಶನಗಳಿಂದ ತೋರಿಬರುತ್ತದೆ. ಸರಕಾರವು ಇಲ್ಲಿ ಸ್ಥಾಪಿಸಿರುವ ಕೈಗಾರಿಕೆಯ ಪರಿಶೋಧನೆಯ ಸಮಿತಿಯು ಆಗಲೇ ಎರಡು ಸಲ ಸೇರಿದೆ; ಏನೋ ಕೆಲ ಕೆಲವು ಕಾರ್ಯಕ್ರಮಗಳನ್ನು ಜರುಗಿಸುತ್ತಿದೆ. ಆದರೆ ಅದರ ಕೆಲಸ ಕಾರ್ಯಗಳು, ಸರಕಾರದ ಇತರ ಶಾಖೆಗಳಂತೆ, ನಿಧಾನವಾಗಿ ಸಾಗುತ್ತಿವೆ ಎಂಬುದನ್ನೂ ಯುದ್ಧಾರಂಭವಾದ ಈ ೧೦ ತಿಂಗಳಲ್ಲಿ ಅದರ ಕೆಲಸಕಾರ್ಯಗಳೇನೂ ವಿಶೇಷವಾಗಿ ನಡೆದುದು ಕಂಡು ಬರುವುದಿಲ್ಲವೆಂಬುದನ್ನೂ ಒಬ್ಬನು ಒಪ್ಪಲೇ ಬೇಕಾಗಿದೆ. ಆದುದರಿಂದ ಸರಕಾರವು ಈ ಕಡೆಗೆ ಗಮನ ಕೊಟ್ಟು, ಇಂಡಿಯದ ಕೈಗಾರಿಕೆಯ ಪ್ರಪಂಚವು ಆದಷ್ಟು ಬೇಗನೇ ಮುಂದುವರಿಯುವಂತೆ ಯತ್ನಿಸಿದಲ್ಲಿ ಇಂದಿನ ಯುದ್ಧಕಾರ್ಯಕ್ಕೂ ಇಂಡಿಯದ ಸಾಂಪತ್ತಿಕ ಸ್ಥಿತಿಗೂ ಬಹಳ ಮಟ್ಟಿನ ಸಹಾಯವಾದೀತೆಂಬುದರಲ್ಲಿ ಸಂದೇಹವಿಲ್ಲ.

* * *

ರಷ್ಯಾ ಮತ್ತು ಜರ್ಮನಿ

ಒಂದು ಕಡೆ ಘೋರ ಯುದ್ಧವು ನಡೆಯುತ್ತಿರುವಾಗಲೇ ಬಾಲ್ಕನ್ ರಾಷ್ಟ್ರಗಳಲ್ಲಿ ಅನಿರೀಕ್ಷಿತ ವಿದ್ಯಮಾನಗಳು ಸಂಭವಿಸಿ ಅದರ ಪರಿಣಾಮ ಆ ಘೋರ ಯುದ್ಧದ ಮೇಲೂ ಆಗುವಂತೆ ತೋರುತ್ತಿದೆ. ಈ ಸಂದರ್ಭದಲ್ಲಿ ರಷ್ಯಾ—ಜರ್ಮನಿಗಳ ನಿಜವಾದ ಬಾಂಧವ್ಯವೇನೆಂದು ಗೊತ್ತು ಹಚ್ಚುವುದು ಕಷ್ಟ. ನಿಜವಾಗಿಯೂ ರಷ್ಯಾ ರುಮೇನಿಯವನ್ನು ಆಕ್ರಮಿಸಿರುವ ಈ ಕಾರ್ಯದ ಕುರಿತು ಜರ್ಮನಿ ತನ್ನ ಅಂತರಂಗದಲ್ಲಿ ಯಾವ ಅಭಿಪ್ರಾಯವನ್ನು ಇಟ್ಟುಕೊಂಡಿದೆ? "ಪ್ರಾಯಶಃ ಜರ್ಮನಿಗೆ ರಷ್ಯದ ಈ ನುಗ್ಗಾಟದಿಂದ ಸಂತೋಷವಾಗಿರಲಾರದು. ಆದರೆ ರಷ್ಯನನ್ನು ಈ ಸಮಯದಲ್ಲಿ ಕೆಣಕುವುದು ಸರಿಯಲ್ಲವೆಂದು ಜರ್ಮನಿ ಸುಮ್ಮನೆ ಬಿದ್ದಿರಬಹುದು." ಇದು ಕೆಲವರ ಅಭಿಪ್ರಾಯವಾದರೂ, ರಷ್ಯಕ್ಕೂ ಜರ್ಮನಿಗೂ ಈ ವಿಷಯದಲ್ಲಿ ಮೊದಲೇ ಮಾತುಕಥೆಗಳಾಗಿ ಅದರಂತೆ, ಜರ್ಮನಿಯ ಒಪ್ಪಿಗೆಯಂತೆ, ರಷ್ಯ ಈ ಕಾರ್ಯ ನಡೆಸಿರಬಹುದೆಂದು ಅನ್ನುವವರೂ ಇಲ್ಲದಿಲ್ಲ. ಅದರಿಂದಲೇ ಹಿಟ್ಲರ್, ತನಗೆ ಆದ ಕರೊಲನಿಗೆ ಅವನ ರುಮೇನಿಯಕ್ಕೆ ಈ ತಾನು ಯಾವ ಸಹಾಯವನ್ನೂ ಕೊಡಲಾರೆನೆಂದು ತಿಳಿಸಿದುದರಲ್ಲಿಯಾದರೂ ಆಶ್ಚರ್ಯವಿಲ್ಲ. ಒಟ್ಟನಲ್ಲಿ ಈ ಕಲ್ಲಪ್ಪ ಗುಂಡಪ್ಪನವರ ನಡುವೆ, "ಏಕ್ಸಿಸ್" ರಾಷ್ಟ್ರಗಳನ್ನು ನಂಬಿ ಬದುಕುವೆನೆಂದು ಹಾರೈಸಿಕೊಂಡಿದ್ದ ರುಮೇನಿಯಕ್ಕೆ ತ್ರಿಶಂಕು ಸ್ವರ್ಗವೇ ಪ್ರಾಪ್ತವಾದಂತಾಯಿತು. ಅತ್ತ ಇಟೆಲಿ ಜರ್ಮನಿಗಳ ಸಹಾಯವೂ ಇಲ್ಲ; ಇತ್ತ ರಷ್ಯದ ಆಮೇಲೆ ಹಂಗೇರಿ—ಬಲ್ಗೇರಿಯಗಳ ಕಾಟವೂ ತಪ್ಪಲಿಲ್ಲ. ಮುಂದೆ ರುಮೇನಿಯವೇನಾಗಬಹುದೆಂದು ಯಾರಿಂದಲೂ ಹೇಳಲ್ಕಾಗದು; ಹಾಗೂ ರುಮೇನಿಯದ ಎಣ್ಣೆಯ ಭಾವಿಗಳ ಮೇಲೆ ಕಣ್ಣಿರುವ ಜರ್ಮನಿಯ ಮನಸ್ಸು ರಷ್ಯದ ಕುರಿತು ಹೇಗೆ ತಿರುಗಬಹುದೆಂದೂ ತಿಳಿಯದು. ಏನಂಚ ಜರ್ಮನಿಯ ಕೈ ಈ ಯುದ್ಧದಲ್ಲಿ ಸಡಿಲವಾಗುವ ವರೆಗೆ, ಅದು ಚಕಾರ ಶಬ್ದವನ್ನೂ ರಷ್ಯದ ವಿರುದ್ಧ ಎತ್ತಲಾರದೆಂಬುದು ಸ್ವಯಂ ಸಿದ್ಧ.

* * *

ಕಾಂಗ್ರೆಸ್ ಮುಖಂಡರು,—

ಮುಸ್ಲಿಂ ಲೀಗ್‌ನಂತೆಯೇ ಹಿಂದೂ ಮಹಾಸಭೆಯೂ ಒಂದು ಧಾರ್ಮಿಕ ಸಂಸ್ಥೆಯೇ ಎಂದು ಅಡಿಗಡಿಗೂ ಸಾರುವಲ್ಲಿ, ಹಿಂದೂ ಮಹಾಸಭೆಯ ವಿಷಯದಲ್ಲಿ ನ್ಯಾಯವಾದ ಮಾತುಗಳನ್ನೇ ಆಡಿರುವರೆನ್ನಲು ಬಾರದು. ಮಹಾತ್ಮಾಜಿಯವರಾದರೂ, ತಮ್ಮ "ಹರಿಜನ" ಪತ್ರಿಕೆಯಲ್ಲಿ, ಮುಸ್ಲಿಮರ ಪರವಾದ ಲೀಗ್ ನಂತೆಯೇ, ಈ ನುಹಾಸಭೆಯೂ ಹಿಂದೂಗಳನ್ನು ಅನುಗ್ರಹಪೂರ್ವಕವಾಗಿ ನಡೆಸಬೇಕೆನ್ನುವ ಪಂಥವನ್ನು ಸಾಧಿಸುವ ಧ್ಯೇಯವನ್ನಿಟ್ಟುಕೊಂಡಿದೆ ಎಂದಿಷ್ಟೇ ಹೇಳಿರುವರು. ಈ ಸಂದರ್ಭದಲ್ಲಿ ಈ ಮಹಾಸಭೆಯ ಅಧ್ಯಕ್ಷರಾದ ಶ್ರೀ. ಸಾವರ್‌ಕಾರರು ಈ ತಪ್ಪು ಗ್ರಹಿಕೆಯನ್ನು ತಿದ್ದಲು ಮುಂದಾಗಿರುವುದು ಕಾಲೋಚಿತವಾಗಿದೆ. ವಸ್ತುತಃ ಹಿಂದೂ ಮಹಾಸಭೆ, ಯಾವುದೊಂದು ಅಲ್ಪ ಸಂಖ್ಯಾಕ ಸಮಾಜಕ್ಕೂ ಪ್ರತ್ಯೇಕ ರಿಯಾಯಿತಿಗಳನ್ನು ಕೊಡುವ ಕಾರ್ಯಕ್ಕೆ ವಿರೋಧವಾಗಿದ್ದರೂ, ಹಿಂದೂಗಳಿಗೆ, ಅದರಲ್ಲಿಯೂ ಹಿಂದುಗಳು ಅಲ್ಪ ಸಂಖ್ಯೆಯಿಂದಿರುವ ಪ್ರಾಂತಗಳಿಗೆ ಕೂಡ, ತಾವು ಪ್ರತ್ಯೇಕ ರಿಯಾಯಿತಿಗಳನ್ನು ಕೇಳುವುದೇನೂ ಅದು ಅಪೇಕ್ಷಿಸಿಲ್ಲ. ಅದು ಅಪೇಕ್ಷಿಸುತ್ತಿರುವುದೇನೆಂದರೆ, ಜಾತಿ ಮತಗಳ ಭೇದವಿಲ್ಲದೆ, ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕುಬಾಧ್ಯತೆಗಳು ದೊರಕಬೇಕೆಂಬುದೇ. ಇದನ್ನು ನೋಡುವಾಗ ಈ ಮಹಾಸಭೆಯ ಕಾರ್ಯನೀತಿಯು ದೃಷ್ಟಿ, ರಾಷ್ಟ್ರೀಯ ಮಹಾಸಭೆಗಿಂತ ವಿಶಾಲವಾದುದೆಂದು ತೋರದೇ?

* * *

ಬ್ರಿಟನು ಸಂದಿಗ್ಧ ಸಮಯದಲ್ಲಿ

ಇಂಡಿಯದ ಅಪಾರವಾದ ಸಾಧನ ಸಂಪತ್ತಿಯನ್ನೂ, ಜನಬಲವನ್ನೂ ಸ್ವಾತಂತ್ರ್ಯ ಹಾಗೂ ಡೆಮೊಕ್ರೆಸಿಗಳ ತತ್ತ್ವಗಳ ಪಾಲನೆಯ ದೃಷ್ಟಿಯಿಂದ, ಸಂಪೂರ್ಣವಾಗಿ ಉಪಯೋಗಿಸುವ ಮನಸ್ಸು ಮಾಡಿದಲ್ಲಿ ಇಂಡಿಯವು ಬ್ರಿಟನಿಗೊಂದು ಕಾಮಧೇನುವಿನಂತಾಗುವುದೆಂಬುದು ನಿರ್ವಿವಾದ. ಆದರೆ ಬ್ರಿಟನಿನ ಇದುವರೆಗಿನ ಇಂಡಿಯದ ಕಾರ್ಯಧೋರಣೆಯು ಈ ವಿಷಯದಲ್ಲಿ ಅಷ್ಟೊಂದು ಅನುಕೂಲವಾಗಿರುವಂತೆ ತೋರುವುದಿಲ್ಲ. ಇಂಡಿಯದಲ್ಲಿ ಭಿನ್ನಾಭಿಪ್ರಾಯಗಳಿಷ್ಟೋ ಇವೆ ಎಂಬುದು ನಿಜ. ಕಾಂಗ್ರೆಸೂ, ಮುಸ್ಲಿಂ ಲೀಗೂ ಒಂದನ್ನೊಂದು ನಂಬುವುದಿಲ್ಲವೆಂಬುದು ನಿಜ, ಆದರೆ ಇಂಡಿಯದ ಸ್ವಾತಂತ್ರ್ಯ ಲಾಭದ ವಿಷಯದಲ್ಲಿ ಭಾರತದಲ್ಲಿ ಎಲ್ಲಿಯಾದರೂ ಭಿನ್ನಾಭಿಪ್ರಾಯವಿದೆಯೇ? ಹಾಗೆಯೇ ಇಂಡಿಯದ ಯಾವ ರಾಜಕೀಯ ಪಂಗಡವಾದರೂ "ಮೈನಾರಿಟಿ"ಗಳ ಹಕ್ಕುಬಾಧ್ಯತೆಗಳ ರಕ್ಷಣೆಯ ಕಾರ್ಯದಲ್ಲಿ ವಿರೋಧಿಯಾಗಿ ನಿಂತಿದೆಯೇ? ಮೇಲಾಗಿ ರಾಷ್ಟ್ರೀಯ ಸ್ವಯಂ ನಿರ್ಧಾರದ ವಿಷಯದಲ್ಲಿಯಾದರೂ ಆಕ್ಷೇಪ ಹೇಳುವವರು ಇಂಡಿಯದಲ್ಲೆಲ್ಲಿ ಹುಡುಕಿದರೂ ಕಾಣಿಸಿಕ್ಕುವುದು ದುರ್ಲಭವಾದೀತಲ್ಲ! ಆನ್ನುವಾಗ ಇಂಡಿಯದ 'ಭಿನ್ನಾಭಿಪ್ರಾಯ'ವನ್ನು ಭೂತಗನ್ನಡಿಯಲ್ಲಿ ಇಟ್ಟಂತೆ ಅಷ್ಟು ದೊಡ್ಡದು ಮಾಡಿ, ರಾಜಕೀಯ ವೃದ್ಧಿಗತಿಯನ್ನು ಹಾಗೆ ತಡೆಯಬೇಕೆ? ಅಧಿಕಾರವನ್ನು ಬಿಟ್ಟುಕೊಡುವ ಮನಸ್ಸು ಬ್ರಿಟನಿಗೆ ಇದ್ದರೆ, ಈ 'ಭಿನ್ನಾಭಿಪ್ರಾಯ'ಗಳೆಲ್ಲ, ಮಹಾ ಪ್ರವಾಹದಲ್ಲಿ ಬಳಿದುಕೊಂಡು ಹೋಗುವ ಹುಲ್ಲು ಕಡ್ಡಿಯಂತಾಗದೇ?

* * *

ಫ್ರಾನ್ಸ್ ಮತ್ತು ಜರ್ಮನಿಗಳೊಳಗೆ

ಸಂಧಿಯಾದ ಬಳಿಕ, ಫ್ರಾನ್ಸಿನ ನೌಕಾಬಲವು ಜರ್ಮನರ ವಶವಾಗಿ, ಅವು ಬ್ರಿಟನಿನ ವಿರುದ್ಧ ಉಪಯೋಗವಾಗುವ ಸಂಭವ ಕಂಡು ಬಂದುದರಿಂದ, ಬ್ರಿಟಿಷ್ ಸರಕಾರವು ತನ್ನ ಬಂದರುಗಳಲ್ಲಿ ಇರುವ ಫ್ರಾನ್ಸಿನ ಯುದ್ಧದ ಹಡಗುಗಳನ್ನೆಲ್ಲ ತನ್ನ ವಶಮಾಡಿಕೊಳ್ಳುವ ಯತ್ನ ನಡೆಸಿದೆ. ಅಲ್ಲದೆ ಈ ಯತ್ನದಲ್ಲಿ ಬಹು ಮಟ್ಟಿಗೆ ಕೃತಾರ್ಥವಾಗಿಯೂ ಇದೆ. ಆದರೆ ಉತ್ತರ ಆಫ್ರಿಕದ ಬಂದರುಗಳಲ್ಲಿದ್ದ ಫ್ರೆಂಚರ ಹಡಗುಗಳನ್ನು ಬ್ರಿಟಿಷರು ಎಚ್ಚರಿಕೆ ಕೊಟ್ಟರೂ ಆ ಸೇನಾ ನಾಯಕನು ಬ್ರಿಟಿಷರಿಗೊಪ್ಪಿಸಲು ಒಪ್ಪದ ಕಾರಣ ಮುಂದೇನೆಂದು ನೋಡಬೇಕಾಗಿದೆ. ಓರಾನಿನಲ್ಲಿ ಬ್ರಿಟಿಷರ ಅಪ್ಪಣೆಯನ್ನು ತಿರಸ್ಕರಿಸಿದ ಫಲವಾಗಿ ಅಲ್ಲಿ ಇತ್ತಟ್ಟಿಗೂ ಕಾಳಗ ನಡೆದಿದೆ. ಈ ವಿಚಾರಗಳನ್ನು ಸದ್ಯದಲ್ಲಿಯೇ ಪಾರ್ಲಿಮೆಂಟನಲ್ಲಿ ಬ್ರಿಟಿಷ್ ಪ್ರಧಾನರು ತಿಳಿಸುವರು. ಫ್ರೆಂಚರ ಪ್ರಬಲವಾದ ನೌಕಾಬಲವು ಬ್ರಿಟನಿನ ಪದರದಲ್ಲಿ ಬೀಳುವ ಆದೃಷ್ಟ ಒದಗಿದರೆ ಬ್ರಿಟನಿನ ಯುದ್ಧಕಾರ್ಯಕ್ಕೆ ಇನ್ಮಡಿ ಲಾಭ ದೊರಕಿದಂತಾಗುವುದು.

ಶಾಸ್ತ್ರೀಯ ಅಮೂಲ್ಯ

ಔಷಧಗಳು

ಅಮೃತಾಕುಂಕುಮ ತೈಲ:— ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟಿದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1–2–0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:— ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3–0–0. ಅಂಚೆವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ: ಬಾಟ್ಲಿ 1ಕ್ಕೆ ರೂ. 2–0–0.

ಪೋಸ್ಟೇಜು ವಗೈರೆ ಬೇರೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

ಶ್ರೀ। ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯದೆ.



ರಾಜಾ ಸ್ನೋ

ಅಂದಕ್ಕಾಗಿ

ಮಣ್ಯಂ ಅಂಡ್ ಕೋ.,
ಮದರಾಸು ಮತ್ತು ಬೆಂಗಳೂರು

You Can Write a Book.

"Certainly not" you will probably say. But hear this. A great author was once asked to name his favourite work. He replied immediately "My bank pass book".

You too can write a book; not a novel perhaps or a poem but one like this author's favourite—the true story of a man who keeps his money matters in order. And a very interesting story it will prove.

Estd. 1906

RESOURCES OF A CRORE

CANARA BANK LIMITED

ವಿದೇಶ

ಅಮೆರಿಕವೂ, ಬ್ರಿಟನೂ

ಫ್ರೆಂಚ್ ನೌಕೆಗಳ ವಿಚಾರದಲ್ಲಿ ಬ್ರಿಟಿಷರು ಕೈಕೊಂಡ ಕಾರ್ಯಕ್ರಮಗಳು ವಿಷಾದಕರ ವಾದರೂ ಅಗತ್ಯವೆಂದು ಅಲ್ಲಿನವರ ಅಭಿಪ್ರಾಯ ವಾಗಿದೆ ಹಿಟ್ಲರನು ಫ್ರೆಂಚ್ ನೌಕೆಗಳನ್ನು ಬ್ರಿಟಿಷರ ಮೇಲೆ ಉಪಯೋಗಿಸದಂತೆ ಮಿ. ಚರ್ಚ್‌ಹಿಲರು ಕಾಲೋಚಿತ ಧೋರಣೆಯನ್ನು ಕೈಕೊಂಡುದು ಪ್ರಶಂಸನೀಯವೆಂದು ಸೆನೆಟರ್ ಪಿಟ್ಟ್‌ಮ್ಯಾನರ ಹೇಳಿಕೆ.

ನೈಗೀರದವರ ದಾನ

ನೈಗೀರದವರು ಬ್ರಿಟನಿನ ಯುದ್ಧಕಾರ್ಯದ ಸಹಾಯಕ್ಕಾಗಿ ೧೦೦ ಸಾವಿರ ಸ್ಟರ್ಲಿಂಗನ್ನು ಬ್ರಿಟಷ್ ಸರಕಾರಕ್ಕೆ ದಾನಮಾಡಿರುತ್ತಾರೆ.

ಫ್ರೆಂಚ್ ನೌಕಾ ಬಲ

ಬ್ರಿಟಿಷ್ ಬಂದರುಗಳಲ್ಲಿರುವ ಫ್ರೆಂಚ್ ಯುದ್ಧದ ಹಡಗುಗಳನ್ನು ಬ್ರಿಟಿಷರು ತಮ್ಮವರ ವಶಮಾಡಿಕೊಂಡಿದ್ದಾರೆ. ಫ್ರಾನ್ಸಿನ ಹಲವು ಯುದ್ಧದ ಹಡಗುಗಳು ಪ್ಲೀಮೌತ್ ರೇವಿಗೆ ಬಂದಿವೆ. ಓರಾನಿನ ಕಾಳಗದಲ್ಲಿ ಹಲವು ಫ್ರೆಂಚ್ ಹಡಗುಗಳು ಗಾಸಿಗೊಂಡಿವೆ. ಅಲೆಕ್ಸಾಂಡ್ರಿಯದ ಫ್ರೆಂಚ್ ನೌಕೆಯ ವಾರ್ತೆ ತಿಳಿದಿಲ್ಲ. ಬ್ರಿಟಿಷರ ಈ ಯಶಸ್ಸಿಗಾಗಿ ಅಭಿನಂದನೆಗಳನ್ನು ಸಮರ್ಪಿಸಲಾಗಿದೆ.

ಜರ್ಮನ್ ಬಲದ ಲಾಭ ನಷ್ಟ

ಇದೇ ಕಳೆದ ಮೇ ತಾ. ೧೮ರಿಂದ ಫ್ರಾನ್ಸಿನ ಯುದ್ಧ ಮುಗಿವ ವರೆಗಿನ ಜರ್ಮನ್ ಸೇನೆಯ ನಷ್ಟ,—ಗಾಯಗೊಂಡವರೆಂದೂ, ಮೃತರಾದವರೆಂದೂ,—೨½ ಲಕ್ಷ ಮಂದಿಯಾಗಬಹುದೆಂದು ಬ್ರಿಟಿಷರ ವಾರ್ತೆ. ಈ ಸಂಖ್ಯೆ, ಅಂದರೆ ಮೃತರ ಸಂಖ್ಯೆ ಸುಮಾರು ೨೭ ಸಾವಿರ ಮಂದಿಯಾಗಬಹುದೆಂದು ಜರ್ಮನರ ಹೇಳಿಕೆ.

ಬ್ರಿಟಿಷರ ವಿಮಾನದ ಆಕ್ರಮಣ

ಬ್ರಿಟಿಷ್ ವಿಮಾನಗಳು ಶತ್ರು ಪಾಳ್ಯದ ಮೇಲೆ ನುಗ್ಗಿ ಬಾಂಬು ಸುರಿಸಿ ಮದ್ದುಗುಂಡುಗಳ, ಎಣ್ಣೆಯ ಉಗ್ರಾಣಗಳಿಗೆ ನಷ್ಟವುಂಟು ಮಾಡಿರುವುದಲ್ಲದೆ, ಜರ್ಮನಿಯ ಆಚೆನ್, ಹಾಲೆಂಡಿನ ಡಿಕೋಡಿ, ಫ್ರಾನ್ಸಿನ ಮಾರ್ವಿಲ್ಲಿ ವಿಮಾನ ನಿಲ್ದಾಣಗಳನ್ನೂ ಆಕ್ರಮಿಸಿ ಹಾವಳಿ ಮಾಡಿವೆ.

ರುಮೇನಿಯದ ಹೊಸ ಸರಕಾರ

ಇಲ್ಲಿನ ಹಳೆಯ ಸರಕಾರವು ರಾಜೀನಾಮೆಯನ್ನು ಕೊಟ್ಟು, ರುಮೇನಿಯದ ಕೈಗಾರಿಕೆಯ ಮಹಾ ಪ್ರಭುಗಳಾದ ಎಂ. ಗಿಗುರ್ಟುರವರು ಒಂದು ಹೊಸ ನ್ಯಾಶನಲ್ ಸರಕಾರವನ್ನು ಸ್ಥಾಪಿಸಿರುವರು. ಇದು ಜರ್ಮನರ ಪರವಾಗಿದೆ. ಇದರ ಕಾರ್ಯನೀತಿ ತಟಸ್ಥವಾಗಿರುವುದು. ಆದರೂ ೨೨ ಮಂದಿ ಬ್ರಿಟಷ್ ಪ್ರಜೆಗಳನ್ನು ರುಮೇನಿಯದಿಂದ ಹೊರ ನೂಕಲಾಗಿದೆ.

ಅಯರ್‌ಲ್ಯಾಂಡಿನ ತಾಟಸ್ಥ್ಯ ವೃತ್ತಿ

ಅಯರ್‌ಲ್ಯಾಂಡ್ ಹಿಂದಿನಂತೆಮುಂದೆಯೂ ತಾಟಸ್ಥ್ಯ ವೃತ್ತಿಯನ್ನೇ ಈ ಯುದ್ಧದಲ್ಲಿ ವಹಿಸಲಿದೆ ಎಂದು ಡಿ. ವೆಲಾರವರು ಒಂದು ಹೇಳಿಕೆ ಕೊಡುತ್ತ "ಈ ಸರಕಾರವು ತಮ್ಮ ದೇಶರಕ್ಷಣೆಯನ್ನು ಮಾಡಿಕೊಳ್ಳುವುದು ಮಾತ್ರ ಖಂಡಿತ" ವೆಂದಿದ್ದಾರೆ.

ಬ್ರಿಟನಿನ ಯುದ್ಧಕಾರ್ಯಕ್ಕೆ ಸಹಾಯ

ಬ್ರಿಟನಿನ ಯುದ್ಧ ಸಹಾಯಕ್ಕಾಗಿ ಫಾಕ್‌ಲ್ಯಾಂಡ್ ದ್ವೀಪದ ಶಾಸನ ಸಭೆಯವರು, ೫೦ ಸಾವಿರ ಪೌಂಡುಗಳ ಬೆಲೆ ಬಾಳುವ ಸಾಮಗ್ರಿಗಳನ್ನೂ,—ಇಲ್ಲಿನ ಜನ ಸಂಖ್ಯೆ ಬರೇ ೨೪೦೦ ಮಾತ್ರ—ಬುಗಾಂಡ ಪ್ರಾಂತದವರು ೧೦ ಸಾವಿರ ಪೌಂಡುಗಳನ್ನೂ, ನೇಟಾಲಿನವರು, ವಿಮಾನಗಳಿಗಾಗಿ ನೂರು ಸಾವಿರ ಸ್ಟರ್ಲಿಂಗನ್ನೂ, ಸೀರಾಲಿಯೋನಿನವರು ೧ ಲಕ್ಷ ಪವನುಗಳನ್ನೂ ದಾನಮಾಡಿರುತ್ತಾರೆ.

ಜಿಬ್ರಾಲ್ಟರಿನ ಮೇಲೆ ವಿಮಾನ ದಾಳಿ

ಪ್ರಥಮ ಬಾರಿಗೆ ಈ ಯುದ್ಧ ಕಾಲದಲ್ಲಿ, ಜಿಬ್ರಾಲ್ಟರಿನ ಮೇಲೆ ಶತ್ರುಗಳ ವಿಮಾನ ದಿಂದ ೮ ಬಾಂಬು ಬಿದ್ದುವು. ನಷ್ಟವೇನೂ ಆಗಿಲ್ಲ, ಬಾಂಬುಗಳು ಬಿದ್ದುದು ಸಮುದ್ರದಲ್ಲಿ ಎಂದು ವಾರ್ತೆ.

ಪ್ಯಾಲಸ್ತೈನಿನಲ್ಲಿ ಅತ್ಯಾಚಾರ

ಮಿ. ಜಿ. ಎಸ್ ಬ್ಲೇಕ್ ಎಂಬ ಒಬ್ಬ ಇಂಗ್ಲಿಷ್ ಗೃಹಸ್ಥನನ್ನೂ ಮತ್ತೊಬ್ಬ ಯೆಹೂದಿ ಕಾನ್ಸ್‌ಟೇಬಲನನ್ನೂ ಜರುಸಲೇಮಿನಲ್ಲಿ ಅರಬೀ ದರೋಡೆಗಾರರು ಕೊಲೆ ಮಾಡಿದ್ದಾರೆ. ಅಪರಾಧಿಗಳ ಪತ್ತೆಗಾಗಿ ಶೀಘ್ರ ಪ್ರಯತ್ನಗಳು ನಡೆದಿವೆ.

ಯುಗೋಸ್ಲಾವಿಯಕ್ಕೂ ತುರ್ಕಿಗೂ ಎಚ್ಚರಿಕೆ

ಇವೆರಡು ದೇಶಗಳು ಸ್ವತಂತ್ರವಾದ ವಿದೇಶೀ ಕಾರ್ಯನೀತಿಯನ್ನು ಅನುಸರಿಸಿವೆ ಎಂದೂ, ತುರ್ಕಿ ಇತರ ಪಾಶ್ಚಾತ್ಯ ರಾಷ್ಟ್ರಗಳೊಡನೆ ಸೇರಿ ಬಾಕುವಿನ ಎಣ್ಣೆಯ ಗಣಿಗಳ ವಿಚಾರದಲ್ಲಿ ಏನೋ ಯೋಜನೆ ನಡೆಸುತ್ತಿದೆ ಎಂದೂ, ಯುಗೋಸ್ಲಾವಿಯವು ಮೆಡಿಟರೇನಿಯನ್ ಮತ್ತು ಆಫ್ರಿಕಗಳ ಯುದ್ಧದ ವಿಚಾರದಲ್ಲಿ ಬ್ರಿಟಿಷರ ವಾರ್ತಾ ವರದಿಯನ್ನೇ ಪ್ರಕಟಿಸುತ್ತಿದೆ ಎಂದೂ ಇಟೆಲಿ, ಜರ್ಮನಿಯ ಒಪ್ಪಿಗೆಯೆನ್ನು ಪಡೆದು, ಯುಗೋಸ್ಲಾವಿಯಕ್ಕೂ ತುರ್ಕಿಗೂ ಎಚ್ಚರಿಕೆಯ ಮಾತು ಹೇಳಿದೆ.

ಫ್ರಾನ್ಸು ಬ್ರಿಟನಿನೊಡನಿದ್ದ ಸಂಬಂಧವನ್ನು ಕಡಿದುಕೊಂಡಿತು

ಬ್ರಿಟನ್ ಫ್ರಾನ್ಸಿನ ನೌಕಾಪಡೆಯ ವಿಷಯದಲ್ಲಿ ಕೈಕೊಂಡ ಕಾರ್ಯಧೋರಣೆಯನ್ನು ಈಗಿನ ಫ್ರೆಂಚ್ ಮಂತ್ರಿಮಂಡಲವು ಒಪ್ಪದೆ, ಬ್ರಿಟನಿನೊಡನಿದ್ದ ಸಂಬಂಧವನ್ನು ಫ್ರಾನ್ಸ್ ಕಳೆದುಕೊಂಡಿರುವುದಾಗಿ ಪ್ರಕಟಿಸಿದೆ.

ರಾಯಲ್ ವಿಮಾನ ಬಲ

ರಾಯಲ್ ವಿಮಾನ ಬಲವು ತನ್ನ ನಿತ್ಯ ಕಾರ್ಯವನ್ನು ಮಾಡುತ್ತಲೇ ಇದೆ. ಈಚಿಗೆ ಶತ್ರುಗಳ ರಾಷ್ಟ್ರದಲ್ಲಿ ಕೆಲ ಕೆಲವು ಕಡೆ ವಿಮಾನ ಬಂದರು, ನೌಕಾ ನಿಲ್ದಾಣ, ಫ್ಯಾಕ್ಟರಿ, ಪೆಟ್ರೋಲಿನ ಹಡಗು ಇವುಗಳ ಮೇಲೆ ದಾಳಿ ನಡೆಸಿರುವುದಲ್ಲದೆ, ಹಾಲೆಂಡಿನ ಬಳಿ ಜರ್ಮನಿಗೆ ಆಹಾರ ಸಾಮಗ್ರಿಗಳ ಸಹಿತ ಸಾಗುತ್ತಿದ್ದ ಒಂದು ಹಡಗನ್ನೂ ಮುಳುಗಿಸಲಾಯಿತು.

ಎಂ. ರೈನಾಡರಿಗೆ ಗುಣವಾಗುತ್ತಿದೆ

ಫ್ರಾನ್ಸಿನ ಮಾಜಿ ಪ್ರಧಾನರಾದ ಎಂ. ರೈನಾಡರು ಒಂದು ಕಾರಿನ ಅವಘಡದಲ್ಲಿ ಗಾಸಿಗೊಂಡವರು ಈಗ ಗುಣಮುಖರಾಗುತ್ತಿದ್ದಾರೆ.

ಶಾಶ್ವತ ಶಾಂತಿಯ ಮುಖ್ಯ ತತ್ವಗಳು

ಅಮೆರಿಕದ ಪ್ರೆಸಿಡೆಂಡ್ ರೂಸ್‌ವೆಲ್ಟರು ನ್ಯೂಯಾರ್ಕಿನ ಪತ್ರಿಕಾಪ್ರತಿನಿಧಿಗಳ ಒಂದು ಕಾನ್ಫರೆನ್ಸಿನಲ್ಲಿ ಪ್ರಪಂಚದ ಶಾಶ್ವತ ಶಾಂತಿಗೆ ಭಯದಿಂದ ವಿರಹಿತವಾಗಿರುವ [illegible]ತ್ಯ, ವಾರ್ತಾ ಸಂಗ್ರಹ[illegible]ಡಲಿರುವ ಸ್ವಾತಂತ್ರ್ಯ, ಅಭಿಪ್ರಾಯ ನಿವೇದನದ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ ಮತ್ತು ಸ್ವಯಂಭರಣದ ಸ್ವಾತಂತ್ರ್ಯ ಇವು ಐದು ಮುಖ್ಯವೆಂದಿರುವರು

ಬ್ರಿಟನಿನ ಮೇಲೆ ದಾಳಿ

ಶತ್ರು ವಿಮಾನಗಳು ದಕ್ಷಿಣ ಪಶ್ಚಿಮದ ಇಂಗ್ಲೆಂಡಿನ ಕರಾವಳಿಯಲ್ಲಿ ಬಾಂಬು ಸುರಿಸಿ ಹಾವಳಿಮಾಡಿದುವು. ೧೧ ಮಂದಿ ಸಿವಿಲಿನಿಯರು ಪೋರ್ಟ್‌ಲ್ಯಾಂಡ್ ಹಿಲ್ಲಿನಲ್ಲಿ ಕೊಲ್ಲಲ್ಪಟ್ಟರು. ವಿಶೇಷ ನಷ್ಟವಿಲ್ಲ. ಶತ್ರುವಿನ ಒಂದು ಬಾಂಬರು ಧ್ವಂಸವಾಯಿತು.

ಆಫ್ರಿಕದ ಯುದ್ಧ

ಸೂಡಾನ್ ಪ್ರಾಂತದಲ್ಲಿ ಇಟೆಲಿ ವಿಮಾನಗಳು ದಾಳಿ ನಡೆಸಿದುವು. ಸಿದಿಲಾರನಿಯಲ್ಲಿ ಇಟೆಲಿಯ ೯ ವಿಮಾನಗಳನ್ನು ಹೊಡೆದು ಕೆಳಗಿಳಿಸಲಾಯಿತು. ಬ್ರಿಟಿಷ್ ಮೊಯರಿಯಲ್ಲಿ ನಡೆದ ದಾಳಿಯಲ್ಲಿ ನಷ್ಟ ಹೆಚ್ಚಾಗಿಲ್ಲ.

ಚಂಕಿಂಗಿನಲ್ಲಿ

ಇಲ್ಲಿ ಜಪಾನೀಯರು ೨ ಸಾವಿರ ಬಾಂಬು ಸುರಿಸಿ ಅಲ್ಲಿನ ಯುನಿವರ್ಸಿಟಿಯ ಕಟ್ಟಡಗಳನ್ನೆಲ್ಲ ನೆಲಸಮ ಮಾಡಿದ್ದಾರೆ.

ಫ್ರೆಂಚ್ ದ್ವೀಪದಲ್ಲಿ ಬ್ರಿಟಿಷರ ಹಿಡಿತಡೆ

ಮಾರ್ಟಿನ್‌ಕ್ಯೂವಿನಲ್ಲಿ ಬ್ರಿಟಿಷರ ಹಿಡಿತಡೆ ಬಿಗಿಯಾಗಿದ್ದು ಆದು ರಾಜಿಯಿಂದ ಇತ್ಯರ್ಥವಾಗಬಹುದೆಂದು ವಾಷಿಂಗ್‌ಟನ್ ಅಧಿಕಾರಿಗಳ ಅಭಿಪ್ರಾಯವಾಗಿದೆ. ಮಾರ್ಟಿನ್‌ಕ್ಯೂ ಪಿಟೆನ್ ಸರಕಾರದ ಬೆಂಬಲಕ್ಕೆ ನಿಂತಿದೆ.

ಜರ್ಮನಿಗೆ ಅಮೆರಿಕದ ಎಚ್ಚರಿಕೆ

ಅಮೆರಿಕದ ಜರ್ಮನ್ ರಾಯಭಾರಿಗಳು ಬಹಿರಂಗವಾಗಿ ಅಮೆರಿಕದ ಕಾರ್ಯನೀತಿಯನ್ನು ಚರ್ಚಿಸಬಾರದೆಂದು ಅಮೆರಿಕವು ಎಚ್ಚರಿಸಿದೆ.

ಬ್ರಿಟಿಷ್ ಫೇಶಿಯಿಸ್ಟರ ಕೈದು

ಮಿ. ಫ್ರೆಡರಿಕ್ ಹಾಸ್ಲೆಮ್ ಎಂಬ ಬ್ರಿಟಷ್ ಫೆಶಿಯಿಸ್ಟರನ್ನು ಪೋಲೀಸರು ಕೈದುಮಾಡಿದ್ದಾರೆಂದು ವಾರ್ತೆ. ಕಳೆದ ಮಹಾ ಯುದ್ಧದಲ್ಲಿ ಇವರು ಒಂದು ಮೆಡಲಿಗೆ ಪಾತ್ರರಾಗಿದ್ದರು.

"ಕೈರೋವಿನ ಪವಿತ್ರ ನಗರವನ್ನು ಉಳಿಸಿ"

ಜಗತ್ತಿನಲ್ಲಿ ಅತ್ಯಂತ ಪ್ರಾಚೀನ ವಿದ್ಯಾಮಂದಿರವಾದ ಅಜಾರಿನ ವಿಶ್ವವಿದ್ಯಾಲಯದ ಡೈರೆಕ್ಟರರಾದ ಶೇಕ್ ಮಾಹ್ಫಿಯವರು, ಕೈರೋವಿನ ಪವಿತ್ರ ನಗರವನ್ನು ಉಳಿಸಬೇಕೆಂದು ಒಂದು ವಿನಂತಿ ಮಾಡಿಕೊಂಡಿದ್ದಾರೆ. ಕೈರೋ ಇಸ್ಲಾಂ ಧರ್ಮದ ಕೇಂದ್ರವಾಗಿದೆ.

ಬ್ರಿಟನಿಗೆ ಟ್ರಿನಿಡಾಡಿನ ಸಾಲ

ಟ್ರಿನಿಡಾಡಿನ ಶಾಸನ ಸಭೆಯ ಸದಸ್ಯರು ಯುದ್ಧ ಕಾರ್ಯಕ್ಕಾಗಿ ಬಡ್ಡಿ ಇಲ್ಲದೆ ೫೫ ವಿಲ್ಯ ಡಾಲರುಗಳ ಸಾಲ ಕೊಡುವಂತೆ ನಿರ್ಧರಿಸಿದ್ದಾರೆ.



ಮಲೇರಿಯ, ಟೈಫಾಯಿಡ್, ಅಥವಾ ಇತರ ಶಕ್ತಿನಾಶಕ ವ್ಯಾಧಿಗಳಿಂದ ಬಳಲಿ, ಖಾಯಿಲೆಯಿಂದೆದ್ದಮೇಲೆ ನಿಮ್ಮಗತ ಶಕ್ತಿಯನ್ನೂ, ಪೂರ್ಣಾರೋಗ್ಯವನ್ನೂ ಮತ್ತೆ ಸಾಧಿಸಿಕೊಳ್ಳಲು, ವಾಟರ್ ಬರೀಸ್ ಕಾಂಪೌಂಡ್ ಅತ್ಯುತ್ತಮವಾದ ಟಾನಿಕ್ ಆಹಾರವೆಂಬುದನ್ನು ನೀವು ಜ್ಞಾಪಕದಲ್ಲಿಡಿರಿ.

ವಾಟರ್ ಬರೀಸ್ ಕಾಂಪೌಂಡ್‌ನಲ್ಲಿ ಶಕ್ತಿ, ಚೈತನ್ಯ, ವೀರ್ಯಗಳನ್ನುಂಟು ಮಾಡುವ ಕಬ್ಬಿಣ ಮತ್ತು ತಾಮ್ರದ ಅಂಶಗಳೂ, ಮಾಲ್ಟ್ ಮತ್ತು ಕಾಳಜ ಸತ್ವಗಳೂ ಬೇಕಾದಷ್ಟು ಇವೆ. ಇಡೀ ದೇಹವನ್ನು ಪುನರುಜ್ಜೀವನಗೊಳಿಸಿ, ಮತ್ತು ನೀವು ಹಿಂದಿನ ಚೈತನ್ಯವನ್ನು ಪಡೆಯಲು ಸಹಾಯ ಮಾಡುತ್ತದೆ.

ಇಂದಿನಿಂದಲೆ ವಾಟರ್‌ಬರೀಸ್ ಕಾಂಪೌಂಡ್ ಸೇವಿಸಲಾರಂಭಿಸಿರಿ. ಇನ್ನು ಭಾವೀ ಆರೋಗ್ಯಸೌಖ್ಯಗಳನ್ನು ಖಚಿತ ಮಾಡಿಕೊಳ್ಳಿರಿ. ಎರಡು ಸೈಜ್—೮ ಔನ್ಸ್ ಮತ್ತು ೧೬ ಔನ್ಸ್ ಸೀಸೆಗಳಲ್ಲಿ ಸಿಗುತ್ತದೆ.

ವಾಟರ್‌ಬರೀಸ್
ಕಾಂಪೌಂಡ್
ನಿಮ್ಮನ್ನು ಆರೋಗ್ಯದಲ್ಲಿಡುತ್ತದೆ

ಕೈದುಗಳು

ಚಿತ್ತಗಾಂಗಿನಲ್ಲಿ ಬಂಗಾಳ ಲೇಬರ್ ಪಾರ್ಟಿಯ ಮತ್ತು ಫಾರ್ವರ್ಡ್ ಬ್ಲಾಕಿನ ಒಬ್ಬ ಪ್ರಮುಖ ವ್ಯವಸ್ಥಾಪಕರಾದ ಶ್ರೀ. ಪ್ರಮೋದ ಸೇನರನ್ನು ಕೈದುಮಾಡಲಾಗಿದೆ. ಕಲ್ಕತ್ತೆಯಲ್ಲಿ ಶ್ರೀ. ರಾಜೇಂದ್ರ ಚಂದ್ರದೇವ್ ಇವರನ್ನು ಪುನಃ ಸೆರೆಹಿಡಿಯಲಾಗಿದೆ. ಕಡಲೂರಿನಲ್ಲಿ, ರಾಣಿಪೇಟೆ ಲೇಬರ್ ಯೂನಿಯನಿನ ವೈಸ್ ಪ್ರೆಸಿಡೆಂಟ್ ಶ್ರೀ. ಆರ್. ಜಗನ್ನಾಥರನ್ನು ದಸ್ತಗಿರಿ ಮಾಡಲಾಗಿದೆ.

ಎಂ. ಎಲ್. ಏ.ಗಳಿಗೆ ನಿರ್ಬಂಧ

ಶ್ರೀ. ಸಿಬ್ಬನ್‌ಲಾಲ್ ಸಕ್ಸೇನಾ ಎಂ. ಎಲ್. ಎ.ರವರು ಮಹಾರಾಜಗಂಜಿನ ಒಂದು ಕೃಷಿಕರ ಪರಿಷತ್ತಿಗೆ ಒಂದು ಭಾಷಣ ಕೊಡಲು ತೆರಳುವವರಾಗಿದ್ದು, ತನ್ಮಧ್ಯೇ ಅವರು ೫–೫ ಸಾವಿರ ರೂಪಾಯಿಗಳ ಜಾಮೀನುಗಳೆರಡನ್ನು, ಒಂದು ವರ್ಷದ ವರೆಗೆ ಶಾಂತಿ ಕಾಪಾಡುವ ಸಂಬಂಧ, ಕೊಡಬೇಕಾಗಿ ವಾರಾಂಟು ಹೊರಡಲು ಅವರದನ್ನು ತಿರಸ್ಕರಿಸಿ ಈಗ ಸಾದರದ ಲಾಕಪ್ಪಿನಲ್ಲಿರುವರು.

ಸಿಲೋನಿಗೆ ಇಂಡಿಯದ ಏಜೆಂಟರು

ಶ್ರೀ. ಎ. ವಿಠಲ ಪೈಗಳವರ ಸ್ಥಾನಕ್ಕೆ, ಸಿಲೋನಿನ ಇಂಡಿಯನ್ ಏಜಂಟರಾಗಿ, ಶ್ರೀ. ಟಿ. ಎನ್. ಎಸ್. ರಾಘವನ್ ಇವರು ನೇಮಕ ಹೊಂದಿರುವರು. ಇವರ ಮದ್ರಾಸ್ ಗವರ್ನಮೆಂಟ್ ಫೈನೆನ್ಸ್ ಶಾಖೆಯಲ್ಲಿನ ಡೆಪ್ಯುಟಿ ಸೆಕ್ರೆಟರಿಗಳ ಸ್ಥಾನಕ್ಕೆ, ತಂಜಾವೂರಿನ ಹೆಡ್ ಕ್ವಾರ್ಟರ್ಸ್ ಕಲೆಕ್ಟರರಾದ ಶ್ರೀ. ಜೆ. ಪಿ. ಎಲ್. ಶೇಷ್ಣೈಯವರು ನೇಮಕಹೊಂದಿರುವರು.

Ford

10 H. P. Four Cylinder Sedan

The Medium sized Car



U. Subraya Nayak,
FORD DEALER,
MANGALORE.

ದುರ್ಬಲವಾದ ಹುಡುಗನು ಅತಿ ಶೀಘ್ರದಲ್ಲಿಯೇ ಹೆಚ್ಚು ತೂಕವನ್ನು ಮತ್ತು ಬಲವನ್ನು ಹೊಂದುವನು



ದುರ್ಬಲನಾದ ಹುಡುಗನು ಅತಿ ಶೀಘ್ರದಲ್ಲಿಯೇ ಹೆಚ್ಚು ತೂಕವನ್ನು ಮತ್ತು ಬಲವನ್ನು ಹೊಂದುವನು. ಸ್ಕಾಟ್ಸ್ ಕಾಡ್ ಲಿವರ್ ಆಯಿಲ್ ಎಮಲ್ಷನ್ ಸೇವನೆಯಿಂದ ನಿಮ್ಮ ಹುಡುಗನಿಗೆ ಹೊಸತನ ಶಕ್ತಿಯು, ಚೈತನ್ಯವು ಲಭಿಸುವುವು. ಆ ಆಹಾರರೂಪಕವಾದ ಟಾನಿಕ್‌ನ್ನು ಕ್ರಮವಾಗಿ ಸೇವಿಸುವುದರಿಂದ ಮಗುವು ಶಾಲೆಯಲ್ಲಿ ಪಾಠವನ್ನು ಚೆನ್ನಾಗಿ ಅಭ್ಯಸಿಸುವುದಲ್ಲದೆ ಮನೆಯಲ್ಲಿ ಸಹ ತನ್ನನ್ನು ಸುಲಭವಾಗಿ ಸುಧಾರಿಸಬಹುದು.

ಕಾಡ್ ಲಿವರ್ ಆಯಿಲ್ ಶೀಘ್ರವಾಗಿ ಜೀರ್ಣಿಸುವಂತೆ ಮಾಡುವ ಗುಣವು ಸ್ಕಾಟ್ಸ್ ಎಮಲ್ಷನ್‌ನಲ್ಲಿದೆ. ಇದು ಮುಖ್ಯವಾಗಿ ಜೀರ್ಣಶಕ್ತಿಯನ್ನು ಹೆಚ್ಚಿಸಿ, ಇತರ ಆಹಾರಪದಾರ್ಥಗಳನ್ನು ಹೆಚ್ಚು ರುಚಿತ್ವವನ್ನು ಕೊಡುವಂತೆ ಮಾಡುವುದು. ಕೆನೆಯಂತಿರುವ ಇದರ ರುಚಿಯನ್ನು ಎಲ್ಲ ಮಕ್ಕಳು ಪ್ರೀತಿಸುವರು.

ಎಲುಬಿನ ಬೆಳವಣಿಗೆ: ಒಂದು ಫಲ ಚಂಚ ಸ್ಕಾಟ್ಸ್ ಎಮಲ್ಷನ್ ಎರಡು ಔನ್ಸು ಜೆಣ್ಣೆ ಅಥವಾ ತುಪ್ಪಕ್ಕೆ ಸಮಾನ.

ಈ ಕೆಳಗೆ ಕಂಡ ಗುಣಗಳನ್ನುಂಟುಮಾಡಲು ಸಹಾನುಭೂತವಾದ ಆಹಾರವು ಕಾಡ್ ಲಿವರ್ ಆಯಿಲ್ ಎಂದು ಎಲ್ಲಾ ಡಾಕ್ಟರುಗಳು ಅಂಗೀಕರಿಸುತ್ತಾರೆ:

1. ಭದ್ರವಾದ ಹಲ್ಲುಗಳನ್ನು, ಎಲುಬುಗಳನ್ನು, ಮಾಂಸಖಂಡಗಳನ್ನು ವೃದ್ಧಿಪಡಿಸುವುದು.
2. ಎದೆ ಮತ್ತು ಶ್ವಾಸಕೋಶಗಳನ್ನು ಬಲಪಡಿಸುವುದು.
3. ನೆಗಡಿ ಮತ್ತು ಅಂಟುರೋಗಗಳನ್ನು ಎದುರಿಸುವುದು.

ಸ್ಕಾಟ್ಸ್-ಎಮಲ್ಷನ್
ಜೀವಾಂತರ ಶಕ್ತಿಯನ್ನುಂಟುಮಾಡುವುದು

SCOTT'S Emulsion

8 ಮತ್ತು 16 ಔನ್ಸುಗಳ ಸೀಸಾಗಳಲ್ಲಿ ಮಾರಲ್ಪಡುತ್ತದೆ. ದೊಡ್ಡ ಸೀಸಾದಿಂದ ಲಾಭ ಹೆಚ್ಚು.

ರಖಂ ವ್ಯಾಪಾರಿಗಳು:—ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್, (ಇಂಡಿಯಾ) ಲಿಮಿಟೆಡ್ ಕಲ್ಕತ್ತ, ಬೊಂಬಯಿ, ಮದ್ರಾಸ್, ಕರಾಚಿ, ರಂಗೂನ್, ಕೊಲಂಬೊ ಕಾನ್ಪೂರ್, ಪಾಟ್ನಾ, ಅಹಮ್ಮದಾಬಾದ್, ಕೊಚ ಜಿನ್, ಕಾಲಿಕಟ್ ವಿಶಾಖಪಟ್ಟಣ, ಆಗ್ರಾ ಹೂರ್, ಅಮೃತಸರ್.

ಗ್ರೇಂಡ್ ಆಕ್ಷನ್ ಸೇಲ್

ತಾ. 10–7–1940ರಿಂದ
ಕೆಲವೇ ದಿವಸಗಳ ವರೆಗೆ ಮಾತ್ರ
ಪ್ರತಿ ಆದಿತ್ಯ ಬುಧ ಶುಕ್ರವಾರಗಳಲ್ಲಿ

ಅನೇಕ ತರದ ಜವುಳಿಗಳನ್ನು ಬಹು ಕಡಿಮೆ ಬೆಲೆಯಲ್ಲಿ ಏಲಂ ಮಾಡಲಾಗುವುದು.

ಏಲಂ ಸಂಜೆ ಘಂಟೆ 5ಕ್ಕೆ ಪ್ರಾರಂಭ.

ಏಲಂ ಇಲ್ಲದ ಸಮಯಗಳಲ್ಲಿ ಅತೀ ಕಡಿಮೆ ಬೆಲೆಯಲ್ಲಿ ರಖಂ ಮತ್ತು ಚಿಲ್ಲರೆ ವಿಕ್ರಿತವು ಮಾಡಲಾಗುವುದು.

ಸೇಲಂಕಾರ್,
ಎ. ವರದರಾಜು ಚೆಟ್ಟಿಯಾರ್,
ಜವುಳಿ ಅಂಗಡಿ ಮಾರ್ಕೆಟ್ ರೋಡು,
ಮಂಗಳೂರು.

For Sale

H. M. V. Cabinet Size Gramophone, in perfect order with many latest Film Records. Price Rs. 125/—or nearabout.

Apply sharp:
B. B.,
C/o Kanteerava.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

THE CANARA BANKING CORPORATION, LTD.
(Incorporated in British India)

ಕಂಠೀರವ
KANTEERAVA
KANARESE, BI-WEEKLY

XXII] ಮಂಗಳೂರು, ತಾರೀಕು ೯—೭—೧೯೪೦ [೨೯
೧೮೬೨ ವಿಕ್ರಮ ಸಂವತ್ಸರದ ಆಷಾಢ ಶು। ೪ ಕುಜವಾರ

ಬಡವನ ಜೀವ ಉಳಿದು ದೊಡ್ಡವನ ಜೀವ ಉಳಿಯುತ್ತಿದೆ. ಕಿರಿಯ ಹಳ್ಳ ಕೂಡಿ ಗಂಗೆಯಾಯಿತು. —ಸೂಕ್ತಿಮಾಲೆ.

ಪ್ರಚಲಿತ ಪರಿಸ್ಥಿತಿ

ಫ್ರೆಂಚರು ಜರ್ಮನರಿಗೆ ಶರಣಾಗತರಾಗಿ, ಜರ್ಮನರು ಫ್ರೆಂಚರಿಗೆ ಕೊಟ್ಟ ಶರ್ತಗಳ ಮೇರೆಗೆ, ಫ್ರೆಂಚರ ನೌಕಾ ಬಲವೇ ಮೊದಲಾದುವು ಬ್ರಿಟಿಷರ ಮೇಲೆ ಉಪಯೋಗಿಸಲಾಗುವುದೆಂಬ ಈ ಸಂಭವವು ಉಂಟಾದ ಮೇಲೆ, ಬ್ರಿಟಿಷರು ಯಾವ ಕಾರ್ಯಕ್ರಮಗಳನ್ನು ನಡೆಸಿ ಆ ಅಪಾಯದಿಂದ ಮುಕ್ತರಾಗಲೆತ್ನಿಸಿದರು ಎಂಬೀ ಅಂಶವು ಎಲ್ಲರೂ ಅರಿಯತಕ್ಕುದಾಗಿದೆ. ಅದನ್ನೇ ನಮ್ಮ ಬ್ರಿಟಿಷ್ ಪ್ರಧಾನರಾದ ಮಿ. ಚರ್ಚ್‌ಹಿಲ್ಲರೂ, ಈಚಿಗೆ ಕಾಮನ್ಸ್ ಮಂದಿರದಲ್ಲಿ, ಸವಿಸ್ತಾರವಾದ ಒಂದು ಭಾಷಣದ ಮೂಲಕ ತಿಳಿಯಪಡಿಸಿರುವರು.

ಪ್ರಧಾನರು ಆದಿಯಲ್ಲಿ ಮಿತ್ರರಾಗಿದ್ದ ಫ್ರೆಂಚರ ವಿಚಾರದಲ್ಲಿ ಉಗ್ರವಾದ ಕಾರ್ಯಧೋರಣೆಯನ್ನೇ ಕೈಕೊಳ್ಳಬೇಕಾಗಿ ಬಂದುದಕ್ಕೆ ತುಂಬ ವಿಷಾದಿಸಿ, ಫ್ರೆಂಚ್ ನೌಕೆಯು ಜರ್ಮನರ ಕೈಗೆ ಬೀಳುವುದರಿಂದ ಬ್ರಿಟನಿಗೊದಗುವ ಮಹಾ ವಿಪತ್ತುಗಳ ಸೂಚನೆ ಮಾಡಿದರು. ಬೋಡೋರ್ ಸರಕಾರವು ಬ್ರಿಟನಿನ ಮೇಲೆ ಹೇಗೆ ವೈರ ಸಾಧಿಸುತ್ತಿದೆ ಎಂಬುದಕ್ಕೆ ಕೆಲ ಕೆಲವು ಉದಾಹರಣೆಗಳನ್ನು ಕೊಟ್ಟರು. ಮತ್ತೆ ಪ್ಲೋಟ್ಸ್‌ಮತ್‌ನ ಬಳಿಯಲ್ಲಿದ್ದ ೨ ಯುದ್ಧದ ಹಡಗುಗಳೂ, ಎರಡು ಕ್ರುಯಿಜರುಗಳೂ, ಕೆಲವು ಸಬ್‌ಮೆರೈನುಗಳೂ, ಮೈನುಗಳನ್ನು ಗುಡಿಸುವ ೨೦೦ ಸಣ್ಣ ಪುಟ್ಟ ಹಡಗುಗಳೂ ವಿಶೇಷ ರಗಳೆಯಿಲ್ಲದೆ ಬ್ರಿಟಿಷರ ವಶವಾದುವೆಂದೂ, ಆಫ್ರಿಕದ ಒರಾನಿನಲ್ಲಿ ಮಾತ್ರ ಕಾಳಗ ನಡೆಯುವ ಸಂದರ್ಭ ಒದಗಿ, ಕೆಲ ಕೆಲವು ಫ್ರೆಂಚ್ ಹಡಗುಗಳಿಗೆ ಪೆಟ್ಟಾದುವೆಂದೂ, ಕೆಲವು ಮುಳುಗಿಹೋದುವೆಂದೂ ಒಟ್ಟಿನಲ್ಲಿ ಫ್ರೆಂಚ್ ನೌಕಾಬಲದಲ್ಲಿ ಹಲವು ಅಂಶ ಬ್ರಿಟಿಷರ ವಶವಾಗಿ, ಹಲವು ಅಂಶ ನಷ್ಟವಾಗಿ ಹಾಗೆ ಅವುಗಳಿಂದ ಉಂಟಾಗುವ ವಿಪತ್ತು ಕಡಿಮೆಯಾಗಿದೆ ಎಂದೂ ಪ್ರಧಾನರು ತಿಳಿಸಿದರು. ಫ್ರೆಂಚ್ ನೌಕಾಬಲ ತಮಗೆ ದೊರಕೀತೆಂದು ಬಾಯಿ ಕಳೆದು ಕೊಂಡಿದ್ದ ಜರ್ಮನರಿಗೆ, ಇಂದಿನ ಈ ವ್ಯವಹಾರದಿಂದ ಎಂತಹ ನಿರಾಶೆಯುಂಟಾಗಿದೆ ಎಂದೂ ಅವರು ಅದೊಂದು ರೀತಿಯಲ್ಲಿ ಮಾರ್ಮಿಕವಾಗಿ ವ್ಯಕ್ತಗೊಳಿಸಿದರು.

ಫ್ರಾನ್ಸಿನ ಈಗಿನ ಸರಕಾರವು ಬ್ರಿಟಿಷರ ಈ ಧೋರಣೆಯನ್ನು ಮೆಚ್ಚದೆ, ತಮಗೂ ಬ್ರಿಟನಿಗೂ ಇರುವ ಬಾಂಧವ್ಯವು ಕಡಿಯಿತೆಂದು ಸಾರಿರುವುದಾದರೂ, ಅಮೆರಿಕವೇ ಮೊದಲಾದ ರಾಷ್ಟ್ರಗಳೂ ಬ್ರಿಟಿಷ್ ಪತ್ರಿಕೆಗಳೂ ಬ್ರಿಟಿಷರ ಈ ಕಾರ್ಯನೀತಿಯನ್ನು ಕೊಂಡಾಡಿವೆ. ವಸ್ತುತಃ ಏಕಾಂಗಿಯಾಗಿ ಹೋರಾಡಬೇಕಾದ ಬ್ರಿಟನ್, ಈ ಸಮಯದಲ್ಲಿ ನ್ಯಾಯನೀತಿಗೆ ವಿರೋಧವಾಗದಂತೆ ಈ ಬಗೆಯ ಕಾರ್ಯನೀತಿಯನ್ನು ಅನುಸರಿಸಿರುವುದು ಸರ್ವಪ್ರಕಾರದಿಂದಲೂ ವಿವೇಕಿಗಳು ಒಪ್ಪತಕ್ಕ ಮಾತಾಗಿದೆ.

ಆಯರ್‌ಲ್ಯಾಂಡ್ ಒಂದು ಇನ್ನೂ ತಾನು ತಟಸ್ಥವಾಗಿರುವೆನೆಂದೇ ಸಾರುತ್ತಿದೆ! ಈ ದೇಶವು ಬ್ರಿಟನಿನ ರಕ್ಷಣಾ ಕಾರ್ಯದಲ್ಲಿ, ಅತ್ಯಂತ ಪ್ರಾಮುಖ್ಯ ಭಾಗವನ್ನೇ ವಹಿಸಿ ನಿಂತಿರುವ ಒಂದು ರಾಷ್ಟ್ರವಾಗಿದೆ. ಈ ರಾಷ್ಟ್ರದ ಮೇಲೆ ಬ್ರಿಟನಿನ ಶತ್ರುಗಳ ಕಣ್ಣು ಅಂದಿನಿಂದಲೂ—ನೆಪೋಲಿಯನ್ ಕಾಲದಿಂದಲೂ—ಇದ್ದೇ ಇದೆ ಎನ್ನಲು ಸರಿಯಾದ ದಾಖಲಿಗಳೇ ಇವೆ. ಕಳೆದ ಮಹಾಯುದ್ಧದಲ್ಲಿ ಜರ್ಮನಿ ಆಯರ್‌ಲ್ಯಾಂಡಿನಲ್ಲಿ ದಂಗೆಯನ್ನು [illegible]ಸಲು ಅಲ್ಲಿಗೆ ಆಯುಧಗಳನ್ನೂ, ಹಣವನ್ನೂ ಕಳುಹಿದುದು ಇದು ಈಚಿಗಿನ ಸಂಗತಿಯೇ. ಹೀಗಿರುವಲ್ಲಿ ಯಾವುದಾದರೊಂದು ಯುಕ್ತಿಯಿಂದ ಆಯರ್‌ಲ್ಯಾಂಡಿನ ತೀರವು, ಶತ್ರುಗಳಿಂದ ಆಕ್ರಮಿಸಲ್ಪಟ್ಟರೆ, ಬ್ರಿಟನಿನ ರಕ್ಷಣಾ ಕಾರ್ಯವು ವಿಶೇಷ ಚಿಂತೆಗೀಡಾಗುವುದೆನ್ನುವಲ್ಲಿ ಸಂದೇಹವಿಲ್ಲ. ಡಿ ವೇಲರಾರವರೇನೋ, ಆಯರ್‌ಲ್ಯಾಂಡು ಬ್ರಿಟಿಷರ ಶತ್ರುಗಳಿಂದ ಉಪಯೋಗಿಸಲ್ಪಡದಂತೆ, ತಾವು ರಕ್ಷಿಸುವುದಾಗಿ ಭರವಸೆ ಹೇಳಿರುವುದೇನೋ ನಿಜ. ಯದ್ಯಪಿ, ಆಯರ್‌ಲ್ಯಾಂಡ್ ತನ್ನ ಇಂದಿನ ಕಾರ್ಯನೀತಿಯ ಅನುಸರಣೆಯಲ್ಲಿ, ದೊಡ್ಡದೊಂದು ಜವಾಬುದಾರಿಯನ್ನೇ ಹೊತ್ತಿದೆ ಎಂಬುದು ನಿರ್ವಿವಾದ. ಇಂದಿನ ದಿನಗಳಲ್ಲಿ, ಆಯರ್‌ಲ್ಯಾಂಡ್ ತನ್ನ ಈ ಭಾರವನ್ನು ಎಷ್ಟು ಮಟ್ಟಿಗೆ ಹೊರಬಲ್ಲುದೋ, ಶತ್ರುಗಳ ಆಕ್ರಮಣವದ್ದು ಹಿಂದಟ್ಟುವಲ್ಲಿ ಎಷ್ಟು ಮಟ್ಟಿಗೆ ಕೃತಕೃತ್ಯವಾಗುವುದೋ ಅದು ಮುಂದಿನ ಮಾತು.

ಇನ್ನೊಮ್ಮೆಯೂ, "ಸಂಧಾನ ಮಾತಿಲ್ಲ; ಯುದ್ಧವೇ ಸಿದ್ಧ"ವೆಂದು ಬ್ರಿಟನಿನಲ್ಲಿ ಸಾರಲಾಗಿದೆ. ಶತ್ರುಗಳ ಗುಪ್ತಚಾರ ದಳದವರು, ಇಟೆಲಿ ಹಾಗೂ ಜರ್ಮನ್ ಸರಕಾರಗಳೊಡನೆ ಬ್ರಿಟನ್ ಸಂಧಾನದ ವ್ಯವಹಾರಗಳನ್ನು ನಡೆಸಬಹುದೆಂದು ಅಪಪ್ರಚಾರ ನಡೆಸುತ್ತಿದ್ದರೂ, ಅದು ನಿರಾಧಾರವೆಂದು ಬ್ರಿಟಿಷ್ ಪ್ರಧಾನರೇ ಪುನಃ ಈಚಿಗೆ ಪ್ರಸಿದ್ಧಿಗೊಳಿಸಿರುವುದರಿಂದ, ಬ್ರಿಟಿಷ್ ಸಾಮ್ರಾಜ್ಯವು ವಿಜಯಲಾಭವಾಗುವ ವರೆಗೂ ಕಾದಾಡುವುದೇ ಸರಿ ಎಂದು, ಸಾಮ್ರಾಜ್ಯದ ಪ್ರಜೆಗಳೆಲ್ಲರೂ, ಏಕ ಮನಸ್ಸಿನಿಂದ ಆ ಯುದ್ಧಕ್ಕೆ ಸರ್ವತೋಮುಖವಾದ ಸಹಾಯವನ್ನು ನೀಡುವುದು ಯುಕ್ತವೆನ್ನಿಸಿದೆ.

ಬೊಂಬಯಿಯಲ್ಲೂ ಮದ್ಯ ನಿಷೇಧವೂ

ಬೊಂಬಯಿ ಹೈ ಕೋರ್ಟ್, ಮದ್ಯ ನಿಷೇಧದ ಕಾರ್ಯದ ಕುರಿತು ತನ್ನ ತೀರ್ಮಾನವನ್ನು ಕೊಟ್ಟ ಮೇಲೆ, ಅಲ್ಲಿನ ಸರಕಾರವೂ ಮದ್ಯನಿಷೇಧದ ಕಾರ್ಯನೀತಿಯನ್ನು ಇಷ್ಟರಲ್ಲೇ ಕೈಬಿಡುವ ಯೋಚನೆ ಮಾಡಿದೆ. ಬೊಂಬಯಿ ಸರಕಾರವು, ಆದಿಯಲ್ಲಿ, ಆ ಹೈಕೋರ್ಟಿನ ತೀರ್ಮಾನವನ್ನು ಆಚೆಗೆ ಸರಿಸಲು ಕೆಲವಷ್ಟಿನ ಪ್ರಯತ್ನಗಳನ್ನು ಮಾಡಿತೆಂಬುದೇನೋ ನಿಜ; ಆದರೆ ಈಚಿಗಿನ ಅದರ ಆಜ್ಞೆಗಳನ್ನು ನೋಡಿದರೆ, ಪಾನ ಪ್ರತಿಬಂಧಕದ ವಿಚಾರದಲ್ಲಿ ಮೊದಲಿದ್ದ ಉತ್ಸಾಹವೆಲ್ಲ ತಣ್ಣಗಾಗಿ, ಇನ್ನು ಮದ್ಯ ನಿಷೇಧದ ಮಾತೇ ಬೇಡವೆಂದು ಅದು ನಿರ್ಧರಿಸಿದ ಹಾಗೆ ತೋರುತ್ತದೆ.

ಕಾಂಗ್ರೆಸ್ ಮಂತ್ರಿಮಂಡಲದವರು ಜನತೆಯ ಹಿತದೃಷ್ಟಿಯಿಂದ, ಎಷ್ಟೋ ಕಷ್ಟಪಟ್ಟು, ಮದ್ಯ ನಿಷೇಧದ ಕಾನೂನನ್ನು ಜಾರಿಗೆ ತಂದಿದ್ದರು. ಹಾಗೆ ಆ ಬಾಬಿನ ರಾಜಭಂಡಾರದ ನಷ್ಟದ ಭರ್ತಿಗಾಗಿಯೋ ಎಂಬಂತೆ, ಕೆಲಕೆಲವು ಹೊಸ ತೆರಿಗೆಗಳನ್ನೂ ಏರ್ಪಡಿಸಿದ್ದರು. ಈಗ ಮದ್ಯ ನಿಷೇಧ ಹೋಯಿತು; ಹೊಸ ತೆರಿಗೆ ಮಾತ್ರ ಹಾಗೇ ಉಳಿಯಿತು.

ಇನ್ನು ಮದ್ಯ ನಿಷೇಧದ ಇತರ ಪ್ರಾಂತಗಳಲ್ಲಿಯೂ ಮದ್ಯಪಾನದ ಸ್ಥಿತಿ ಹೇಗಾಗಬಹುದೋ! "ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ" ವ್ಯಾಸಿಸಬಹುದೇ?

ಡಿಲ್ಲಿಯ ವರ್ಕಿಂಗ್ ಕಮಿಟಿಯ ಅಧಿವೇಶನ

ಡಿಲ್ಲಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಧಿವೇಶನ ನಡೆಯುತ್ತಿದೆ; ಮುಗಿದಿಲ್ಲ! ದೀರ್ಘ ಅಧಿವೇಶನ.

ಈ ಕಮಿಟಿಯ ಮುಂದಿರುವ ಪ್ರಶ್ನೆಗಳನ್ನು ಸುಲಭವಾಗಿ ತೀರ್ಮಾನಿಸಲು ಸಾಧ್ಯವಿಲ್ಲವಾದುದರಿಂದಲೇ ಈ ವಿೂಟಿಂಗ್ ಇಷ್ಟು ದೀರ್ಘವಾಗಿದೆಯೆಂದು ಹೇಳಲಾಗಿದೆ.

ಮಹಾತ್ಮರು ಈ ವಿೂಟಿಂಗಿನ ಕಾಲದಲ್ಲಿ ಹಾಜರಿದ್ದರು. ವಿಶೇಷವೆಂದರೆ ಪಂಡಿತ ಮಾಳವ್ಯರೂ ಅಲ್ಲಿಗೆ ಬಂದುದೇ.

ಈ ಬಾರಿ ಹಿಂದೂ ಮಹಾಸಭೆಯ ಅಭಿಪ್ರಾಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲಾಗಿದೆ ಎಂದು ವಾರ್ತೆ; ಅಲ್ಲದೆ ಎಷ್ಟೇ ಅಸಮರ್ಪಕವಾಗಿದ್ದರೂ ವೈಸರಾಯರು ಸಮರ್ಪಿಸಿರುವುದನ್ನು ವರ್ಕಿಂಗ್ ಕಮಿಟಿಯವರು, ಏಕಾಏಕಿ ಕೈಬಿಡಬಾರದೆಂದೂ ಮಾಳವ್ಯರು ಅಭಿಪ್ರಾಯ ಪಟ್ಟಿರುವುದಾಗಿಯೂ ಪ್ರಕಟವಾಗಿದೆ.

ಶ್ರೀ. ಸಾವರ್ಕಾರರವರೂ, ಶ್ರೀ. ಅಣೆಯವರೂ ತಮ್ಮ ಅಭಿಪ್ರಾಯಗಳನ್ನು ಆರುಹಿ, ವರ್ಕಿಂಗ್ ಕಮಿಟಿಯ ತೀರ್ಮಾನವನ್ನು ಶೀಘ್ರದಲ್ಲಿ ಹೊರಬೀಳುವಂತೆ ಮಾಡುವರೆಂದು ನಿರೀಕ್ಷಿಸಲಾಗಿದೆ.

ಆಶ್ರಿತ ಸಂಸ್ಥಾನಗಳು ಯುದ್ಧಕಾರ್ಯಕ್ಕೆ ಬೆಂಬಲ ಕೊಟ್ಟದ್ದು ಕಾಂಗ್ರೆಸಿಗೆ ಅನುಕೂಲವಾಗಿಲ್ಲವಾದುದರಿಂದ, ಆ ವಿಷಯವನ್ನೂ ವರ್ಕಿಂಗ್ ಕಮಿಟಿ ಬಹು ಜಾಗರೂಕತೆಯಿಂದ ಸಮಾಲೋಚಿಸಬೇಕಾಗಿದೆ.

ಇಷ್ಟರಲ್ಲೇ ಶ್ರೀ. ಅಣೆಯವರು ಪಂಡಿತ ಮಾಳವ್ಯರನ್ನೂ, ಗಾಂಧಿಜಿಯವರನ್ನೂ ಕಂಡು, ಕಾಂಗ್ರೆಸ್ ಮುಖಂಡರು, ತಮ್ಮ ಸೂಚನೆಗಳೊಂದಿಗೆ ವೈಸರಾಯರ ಭೇಟಿ ಮಾಡಿದಲ್ಲಿ ಹಿತವಾಗುವುದೆಂದು ಸಲಹೆ ಮಾಡಿದ್ದಾರೆ.

ಮಹಾತ್ಮರಿಗೆ ವೈಸರಾಯರು ಕೊಟ್ಟ ಸೂಚನೆಗಳ ಕುರಿತು ಇನ್ನೂ ಯಾವ ತೀರ್ಮಾನವೂ ಆಗಿಲ್ಲ. ಹಾಗಾಗಿ ಸಾರ್ವಜನಿಕರಿಗೆ ಏನೊಂದೂ ಈ ಕುರಿತು ಇದುವರೆಗೆ ತಿಳಿದು ಬಂದಿಲ್ಲ.

ಇದುವರೆಗೆ ನಡೆದ ಈ ಸಭಾಕಾರ್ಯಗಳ ವಿಚಾರದಲ್ಲಿ, 'ಈ ಕಮಿಟಿಯ ಸದಸ್ಯರಾಗಲೀ, ಆಹ್ವಾನಿತರಾಗಲೀ ಪ್ರೆಸ್ಸಿನವರಿಗೆ ಏನನ್ನೂ ತಿಳಿಸಕೂಡದೆಂಬ ಸೂಚನೆ ಇದೆ. ಅವರು ಯಾರೂ ಪತ್ರಿಕಾ ಉದ್ಯೋಗಿಗಳ ಯಾವ ಪ್ರಶ್ನೆಗೂ ಉತ್ತರ ಕೊಡಕೂಡದಾಗಿದೆ. ಹಾಗಾಗಿ ನಿಜ ವಿದ್ಯಮಾನಗಳು ಬೆಳಕಿಗೆ ಬಂದಿಲ್ಲ.



ಬೊಂಬಯಿಯಲ್ಲಿ ಎರಡನೆಯ ಬಾರಿಯಾಗಿ ಪರೀಕ್ಷಾರ್ಥವಾದ ವಿಮಾನ ದಾಳಿ ನಡೆಯಿತು. ವಿಮಾನ ದಾಳಿಯ ಶಂಖಧ್ವನಿಯಾದ ಕೂಡಲೇ ಆ ನಗರದ ಸಂಪೂರ್ಣ ಜನಸ್ತೋಮವು ಮರೆಯಲ್ಲಿ ಅಡಗಿತು. ಪ್ರಯಾಣದ ವಾಹನಗಳು ಅಲ್ಲಲ್ಲೇ ರಸ್ತೆಯ ಪಕ್ಕಗಳಲ್ಲಿ ನೆಲೆಯಾಗಿ ನಿಂತು ಆದರಲ್ಲಿದ್ದ ಪ್ರಯಾಣಿಕರೆಲ್ಲ ಸಮೀಪವಿರುವ ಕಟ್ಟಡಗಳಲ್ಲಿ ಆಶ್ರಯ ಪಡೆದರು. ಪೋಲೀಸರೂ, ವೈಮಾನಿಕ ಬಲದವರೂ ಅಲ್ಲದೆ, ಈ ಸಮಯದಲ್ಲಿ ಮತ್ತಾರೂ ಹೊರಗೆ ಕಾಣುತ್ತಿರಲಿಲ್ಲ. ಕ್ರಮಶಃ ಒಂದು ಬಾಂಬರು ಬಹಳ ತಗ್ಗಿನಲ್ಲಿ ನಗರದ ಮೇಲೆ ಓಡಾಡಿ ಈ ಪ್ರಯೋಗವನ್ನು ಪೂರೈಸಿತು. ಈ ಪ್ರಯೋಗವು ಹಿಂದಿನದಕ್ಕಿಂತ ಯಶಸ್ವಿಯಾಯಿತೆಂದು ಹೇಳಲಾಗಿದೆ.

ಕಳೆದ ತಾ. ೪ರಲ್ಲಿ ಜರುಗಿದ ಬೊಂಬಯಿ ಕಾರ್ಪರೇಶನ್ ಮೀಟಿಂಗ್ ಯಾವ ಕಾರ್ಯಗಳನ್ನೂ ನೆರವೇರಿಸದೆ, ಹಾಗೆ ಮಾಡಲು ಕಾರಣಗಳೇನೆಂದೂ ವಿವೆರಿಸದೆ, ಸಭಾ ಕಾರ್ಯಗಳನ್ನು ಮುಂದಕ್ಕೆ ಹಾಕಿತು. ಶ್ರೀ. ಸುಭಾಷ್ ಚಂದ್ರರ ಕೈದಿನ ಸಂಬಂಧವಾಗಿ ಹೀಗಾಗಿರಬಹುದೆಂದು ತಿಳಿದುಬರುತ್ತಿದೆ.

ಬೊಂಬಯಿ ಹೈಕೋರ್ಟ್, ಮದ್ಯನಿರೋಧ ಕಾರ್ಯದ ವಿಷಯದಲ್ಲಿ ತನ್ನದೊಂದು ತೀರ್ಪು ಕೊಟ್ಟ ಪರಿಣಾಮವಾಗಿ, ಅಲ್ಲಿ ಮದ್ಯದ ಅಪರಾಧಗಳನ್ನು ನ್ಯಾಯಧೀಶರು ಬಿಡಬೇಕಾಗಿ ಬಂದು ಕೊನೆಗೀಗ ಆ ಕಾನೂನೇ ಅಲ್ಲಿ ರದ್ದಾಗಿ ಹೋಗಿದೆ. ಪಾನವು ಹಿಂದಿನಂತೆಯೇ ತಲೆ ಎತ್ತುವ ಹಾಗಾಗಿದೆ. ಕಾಂಗ್ರೆಸ್ ಸರಕಾರದ ಮದ್ಯ ನಿಷೇಧದ ಈ ಕಾನೂನು ಬೊಂಬಯಿ ಆಧಿಪತ್ಯದಲ್ಲಿ ಬಾಳಿದುದೆಂದರೆ ಒಟ್ಟಿಗೆ ೧೧ ತಿಂಗಳು ೪ ದಿನಗಳಷ್ಟೇ.

ಷ್ಟನವನ್ನೈದಿದ ನಮ್ಮ ವೈಸರಾಯರು ಮದ್ರಾಸಿಗೆ ಇದೇ ಜುಲೈ ತಾ. ೨೭ಕ್ಕೆ ಭೇಟಿ ಕೊಡಲಿದ್ದಾರೆ. ಅವರಲ್ಲಿ ೪ ದಿನಗಳಿದ್ದು ಮುಂದೆ ಬೊಂಬಯಿಗೆ ತೆರಳುವರೆಂದು ನಿರ್ಧಾರವಾಗಿವೆ. ವೈಸರಾಯರ ಜತೆಯಲ್ಲಿ ಅವರ ಪತ್ನಿಯವರೂ ಮದ್ರಾಸಿಗೆ ದಯೆಮಾಡಿಸುವರು.

ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಶ್ರೀ. ವಿ. ಡಿ. ಸಾವರ್ಕಾರರು ಆಮಂತ್ರಣದಂತೆ ಸಿಮ್ಲಕ್ಕೆ ತೆರಳಿ ಅಲ್ಲಿ ವೈಸರಾಯರ ಭೇಟಿ ಪಡೆದು ೧॥ ಗಂಟೆಗಳ ಕಾಲ ಮಾತುಕಥೆ ನಡೆಸಿದರು.

ಬುಂದೀ ಸಂಸ್ಥಾನದ ಮಹಾರಾಜರು ವೈಸರಾಯರ ಯುದ್ಧನಿಧಿಗೆ ೨೦ ಸಾವಿರ ರೂ. ಗಳನ್ನೂ, ಆ ಸಂಸ್ಥಾನವು ಅದೇ ನಿಧಿಗೆ ೨೦ ಸಾವಿರ ರೂಪಾಯಿಗಳನ್ನೂ ಕೊಟ್ಟಿರುವುದಲ್ಲದೆ ಅಲ್ಲಿನ ಅಧಿಕಾರಿಗಳೂ ತಮ್ಮ ತಮ್ಮ ಸಂಬಳದ ಸೇಕಡಾ ೧೦ರಷ್ಟನ್ನೂ ಆತ್ಮಸಂತೋಷದಿಂದ ಕೊಡಲೊಪ್ಪಿರುವರು.

ನಮ್ಮ ಆಧಿಪತ್ಯದ ಮಾನ್ಯ ಗವರ್ನರರು ತಿಂಗಳಿಗೆ ರೂ. ೧೦೦ ಅಥವಾ ಅದಕ್ಕೆ ಮೇಲ್ಪಟ್ಟು ಸಂಬಳವಿರುವ ಸರಕಾರದ ಉದ್ಯೋಗಸ್ಥರು, ತಿಂಗಳಿಗೊಂದು ದಿನದ ಸಂಬಳದಂತೆ ೬ ತಿಂಗಳವರೆಗೆ ಅವರವರ ಆತ್ಮಸಂತೋಷದಂತೆ ಗವರ್ನರರ ಈ ಯುದ್ಧ ನಿಧಿಗೆ ವಂತಿಗೆಕೊಡಬಹುದೆಂದೂ ಸೂಚಿಸಿರುತ್ತಾರೆ. ಅಲ್ಲದೆ ಹಾಗೆ ಮಾಡಲು ಬಯಸುವವರ ಈ ವಂತಿಗೆ ಆ ನಿಧಿಗೆ ಮೊತ್ತವಾಗಿ ದೊರೆಯುವಂತೆ, ಸರಕಾರವು ಇದನ್ನು ಮುಂಗಡವಾಗಿ ತೆರುವುದೆಂದೂ, ಮುಂದೆ ೬ ಕಂತಿನಲ್ಲಿ ಅವರವರ ಸಂಬಳದಲ್ಲಿ ಅದನ್ನು ವಜಾ ಹಿಡಿಯಲಾಗುವುದೆಂದೂ ಪ್ರಕಟಣೆ ಹೊರಟಿದೆ.

ಗವರ್ನರ ಆಜ್ಞೆಯು ಮೇರೆಗೆ ಬರ್ಮದ ಮೌಬಿನ ಜಿಲ್ಲೆಯ ದುನುಬ್ಯಿಯೂ ನಗರದಲ್ಲಿ ಇದೇ ಜುಲೈ ತಾ. ೧೧ಂಷ್ಟಕ್ಕೆ ನಿಷೇಧದ ಆಜ್ಞೆಯು ಜಾರಿಗೆ ಬಂದಿದೆ.

ಇಂದಿನ ವಾರ್ತೆ

ಅಮೆರಿಕದವರ ನಿರ್ಧಾರ

ಪಶ್ಚಿಮ ಭೂಗೋಲದಲ್ಲಿ ಜರ್ಮನಿ ಯಾವುದಾದರೂ ಫ್ರೆಂಚ್, ಬ್ರಿಟಷ್ ಅಥವಾ ಹೊಲಿಂಡಿನ ಸ್ವಾಸ್ಥ್ಯಗಳ ಮೇಲೆ ಹಕ್ಕು ಸ್ಥಾಪಿಸಿದಲ್ಲಿ, ಆಗ ಅವುಗಳ ಆಡಳಿತದ ಅಥವಾ ಮೇಲ್ವಿಚಾರದ ತೀರ್ಮಾನ ಮಾಡುವ ಅಧಿಕಾರವು ಅಮೆರಿಕದ ಕೈಯಲ್ಲಿಯೇ ಇರಬೇಕೆಂದು ಪ್ರೆಸಿಡೆಂಟ್ ರೂಸ್‌ವೆಲ್ಟರ ಸೆಕ್ರಟರಿಗಳಾದ ಮಿ. ಸ್ಟೆಫೆನ್ ಆರ್ಲಿಯವರು ತಿಳಿಸಿರುವರು.

ಮಾರ್ಟಿನಿಕ್ವೀಯ ಹಿಡಿತಡೆ

ಇಲ್ಲಿ ಹಿಡಿತಡೆಗಳನ್ನೇನೂ ಹಾಕಿಲ್ಲವೆಂದು ಲಂಡನಿನ ವಾರ್ತೆಯಾದರೂ ಫ್ರೆಂಚ್ ವೆಸ್ಟ್ ಇಂಡೀಸಿಗೆ ಬ್ರಿಟಷ್ ಮತ್ತು ನಾರ್ವೆ ಹಡಗುಗಳು ಚಲಿಸದಂತೆ ಬ್ರಿಟಿಷರ ಆಜ್ಞೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಈ ಕಮಿಟಿಯ ಅಧಿವೇಶನಕ್ಕೆ ಪಂಜಾಬಿನ ಪ್ರಧಾನರಾದ ಸರ್ ಸಿಕಂದರ್ ಹ್ಯಯಾತ್ ಖಾನರೂ ೧೦ ಮಿನಿಟುಗಳ ಕಾಲ ದಯೆಮಾಡಿಸಿದ್ದರು. ಕಮಿಟಿಯ ಕಾರ್ಯಭಾಗಗಳಿಗೂ ಪೂರೈಸಿಲ್ಲ.

ಅಲೆಕ್ಸಾಂಡ್ರಿಯದ ಫ್ರೆಂಚ್ ನೌಕೆ

ಇಲ್ಲಿನ ಫ್ರೆಂಚ್ ನೌಕೆಯನ್ನು ವಿಸರ್ಜಿಸಲಾಗಿದೆ. ಈ ಕಾರ್ಯದಲ್ಲಿ ಅಡ್ಡಿ ಆಡಚಣೆಗಳೇನೂ ಉಂಟಾಗಲಿಲ್ಲ.

ಕೆಲವು ದಿನಗಳ ಹಿಂದೆ ಮುಚ್ಚಲಾಗಿದ್ದ ಬೊಂಬಯಿ ಬಂದರವು ಇದೇ ಕಳೆದ ತಾ. ೪ರಲ್ಲಿ ಪುನಃ ತೆರೆಯಲಾಗಿದೆ.

೧೯೩೯ನೇ ಜನವರಿ ತಾ. ೧೯ರಲ್ಲಿ ಹತೌರದ ರಾಣೀ ಸುಭದ್ರಾದೇವಿಯವರನ್ನು ಸಿಸ್ತೂಲಿನಿಂದ ಹೊಡೆಯಲಾಯಿತೆಂಬ ಈ ಮೊಕದ್ದಮೆ ಲಕ್ನೋವಿನ ಸೆಶನ್ ಜಡ್ಜರಲ್ಲಿ ೩ ತಿಂಗಳ ಕಾಲ ನಡೆದು ಸುಭದ್ರಾದೇವಿಯ ಪತಿಯಾದ ಹತೌರದ ರಾಜರಿಗೂ, ಅವರ ತಾಯಿ ರಾಜಮಾತೆಗೂ ೧೪ ವರ್ಷಗಳ ಕಠಿನ ದಂಡನೆಯೂ ಈ ಅಪರಾಧದಲ್ಲಿ ಭಾಗಿಗಳಾದ ಪುನ್ನಾ ಖಾನ್, ಅಫಕ್ ಅಹಮ್ಮದರಿಗೆ ಟಾಪೂ ಸಜೆಯೂ ವಿಧಿಸಲಾಯಿತು. ಈ ಮೊಕದ್ದಮೆಯಲ್ಲಿ ಸುಮಾರು ೬೦ ಮಂದಿ ಸಾಕ್ಷಿಗಳಿದ್ದರು.

ಇಂಡಿಯದ ಪ್ರಧಾನಸೇನಾಪತಿಗಳು ಪೂನೆಯಲ್ಲಿ ಒಂದು "ಜೂನಿಯರ್ ಕಮಾಂಡರ್ ಶಾಲೆ"ಯನ್ನು ಸ್ಥಾಪಿಸಲು ಸಮ್ಮತಿಸಿರುವರು. ಈ ಶಿಕ್ಷಣವು ಇದೇ ಸೆಪ್ಟೆಂಬರ್ ೨ರಲ್ಲಿ ಆರಂಭವಾಗಿ ನವೆಂಬರ್ ತಾ. ೧೯ಕ್ಕೆ ಮುಗಿಯುವುದು.

ಶ್ರೀ. ಎಸ್. ವಿ. ಪರ್ಲೆಕರ್ ಎಂ.ಎಲ್.ಎ. ಹಾಗೂ ಮಿಸ್ ಗೋದಾವರಿ ಗೋಖಲೆ ಇವರಿಬ್ಬರು "ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ"ಯ ಸೂಚನೆಗಳಿಗೆ ವಿರುದ್ಧವಾಗಿ ನಡೆದರೆಂದು ಅವರಿಬ್ಬರ ಹೆಸರನ್ನು ಆ ಸಂಘದ ಸದಸ್ಯರ ಪಟ್ಟಿಯಿಂದ ತೊಡೆದು ಹಾಕಲಾಗಿದೆ.

ತಿರುವಾಂಕೂರಿನ ಅಧಿಕಾರ ವರ್ಗದವರು ತಮ್ಮ ಸಂಬಳದಿಂದ ಯುದ್ಧನಿಧಿಗೆ ವಂತಿಗೆ ಕೊಡಲು ನಿರ್ಧರಿಸಿದ್ದಾರೆ. ಇದು ಅವರ ಆತ್ಮ ಸಂತೋಷದ ತೀರ್ಮಾನ. ಇದರ ಮೇರೆಗೆ ತಿಂಗಳಿಗೆ ರೂಪಾಯಿ ೩೦೦ ಅಥವಾ ಅದಕ್ಕೆ ಮೇಲ್ಪಟ್ಟು ಸಂಬಳವಿರುವವರು ಸೇಕಡಾ ೧೦ ರಂತೆ, ೨೦೦ರಿಂದ ೩೦೦ಗಳ ವರೆಗಿರುವವರು ಸೇಕಡಾ ೭½ಯಂತೆ, ರೂ. ೫೦ರಿಂದ ೧೦೦ರ ವರೆಗೆ ಸಂಬಳವಿರುವವರು ಸೇಕಡಾ ೫ರಂತೆ, ಮತ್ತೆ ೨೫ರಿಂದ ೫೦ರ ವರೆಗಿನ ಸಂಬಳದವರು ಸೇಕಡಾ ೨½ಯಂತೆ ವಂತಿಗೆ ಕೊಡಲಿರುವರು.

ಗುಂಡಿಯ ಇಂಜಿನಿಯರಿಂಗ್ ಕಾಲೇಜಿಗೆ, ಈ ಸಲ, ಇತಿಹಾಸದಲ್ಲೇ ಪ್ರಥಮ ಬಾರಿಯಾಗಿ ಇಬ್ಬರು ವಿದ್ಯಾರ್ಥಿನಿಯರನ್ನು ಸೇರಿಸಿಕೊಳ್ಳಲಾಗಿದೆ.

ಕೃಷ್ಣಾ ನದಿಯಲ್ಲಿ, ಬೆಜ್ವಾಡದ ಬಳಿಯಲ್ಲಿ, ಪ್ರಯಾಣಿಕರು ಒಂದು ದೋಣಿಯಲ್ಲಿ ದಾಟುತ್ತಿದ್ದಾಗ, ಬಿರುಗಾಳಿ ಬೀಸಿ, ದೋಣಿ ಮಗುಚಿ ಬಿದ್ದು, ೫ ಮಂದಿ ಮುಳುಗಿ ಸತ್ತರು. ಕೆಲವರು ಈಜಾಡಿ ಬದುಕಿಕೊಂಡರು.

೧೯೪೦ನೇ ಇಸವಿ ಜೂನ್ ತಾ. ೨೮ರ ವರೆಗೆ ಹಲವು ಡಿಫೆನ್ಸ್ ಲೋನುಗಳಿಗೆ ದೊರೆತ ಮೊತ್ತ ಈ ರೀತಿಯಾಗಿದೆ:—"ಇಂಟರೆಸ್ಟ್ ಫ್ರೀ ಡಿಫೆನ್ಸ್ ಬಾಂಡು"ಗಳ ಮೊತ್ತ ರೂ. ೭೧,೦೭,೦೦೦; "ತ್ರಿ ಪರ್ಸೆಂಟ್ ಡಿಫೆನ್ಸ್ ಬಾಂಡು"ಗಳ ಮೊತ್ತ ರೂ. ೨೮,೧೯,೦೦೦; "ಪೋಸ್ಟ್ ಆಫೀಸ್ ೧೦ ಇಯರ್ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟು" ಗಳ ಮೊತ್ತ ರೂ. ೧೭,೭೪,೦೦೦.

ತಿರುವಾಂಕೂರು ಸರಕಾರವು ಅಲ್ಲಿನ ಸ್ಟೇಟ್ ಕಾಂಗ್ರೆಸ್ ಇದುವರೆಗೆ ಪ್ರಕಟಿಸಿದ ಅಥವಾ ಮುಂದೆ ಪ್ರಕಟಿಸಲಿರುವ ಯಾವತ್ತು ವಹಿಗಳನ್ನೂ ಪ್ರಕಟಣೆಗಳನ್ನೂ ಆ ಸಂಸ್ಥಾನದ ಡಿಫೆನ್ಸ್ ರೂಲುಗಳ ಮೇರೆಗೆ ಬಹಿಷ್ಕರಿಸಿದೆ.

ಪಂಜಾಬಿನ ನ್ಯಾ॥ ವಿ॥ ಎಸೆಂಬ್ಲಿಗೆ ಅಲ್ಲಿನ ಗವರ್ನರರಿಂದ ಜೀವದಾನವಾಗಿದೆ. ಅದೆಷ್ಟು ಕಾಲದ ವರೆಗೆಂದು ಇನ್ನು ಮುಂದೆ ನಿರ್ಧರಿಸಲಾಗುವುದು.

ಇಂಡಿಯಾ ಸರಕಾರ

ಡಿಫೆನ್ಸ್ ಸಾಲಗಳನ್ನು ಕೊಂಡುಕೊಳ್ಳಿ

ಅತ್ಯಲ್ಪ ಹಾಗೂ ಮಧ್ಯಮ ತರಗತಿಯ ಅನುಕೂಲತೆಯ ಜನಗಳಿಗೆ ಉತ್ತಮ ಸಂಚಯ ವಿಧಾನ.

10 ವರ್ಷಗಳ ಸೇವಿಂಗ್ಸ್ ಸರ್ಟಿಫಿಕೇಟುಗಳು

6 ವರ್ಷಗಳ 3% ಡಿಫೆನ್ಸ್ ಬೋಂಡುಗಳು

ಸರಕಾರಕ್ಕೆ ನಿಬಡ್ಡಿಯಿಂದ ಸಾಲಕೊಡಲಪೇಕ್ಷಿಸುವವರಿಗೆ

3 ವರ್ಷಗಳ ಇಂಟರೆಸ್ಟ್ ಫ್ರೀ ಬೋಂಡುಗಳು

ವಿವರಗಳಿಗೆ—

ರಿಜರ್ವ್ ಬ್ಯಾಂಕ್ ಒಫ್ ಇಂಡಿಯಾ,

ಇಂಪೀರಿಯಲ್ ಬ್ಯಾಂಕ್ ಒಫ್ ಇಂಡಿಯಾ,

ಸರಕಾರಿ ಖಜಾನೆ ಯಾ ಪೋಸ್ಟಾಫೀಸಿನ ಯಾವದೇ ಕಾರ್ಯಾಲಯಕ್ಕೆ ಬರೆಯಿರಿ.

ಹೊಟ್ಟೆನೋವು, ವಾಂತಿ, ಅಜೀರ್ಣ, ಕಾಲರಾ, ಸೆಟೆಬೇನೆ, ಬವಳಿ ಮುಂತಾದ ಅನೇಕ ಬೇನೆಗಳಿಗಾಗಿ

ಜವೇರಿಯನ್ನರ ಜೀವನ ಮಿಕ್ಶ್ಚರವು

ರಾಮಬಾಣದಂಥ ಉಪಾಯವಾಗಿದೆ. ಇದನ್ನು ಹೊಟ್ಟೆಯಲ್ಲಿ ತೆಗೆದುಕೊಳ್ಳಬಹುದು. ಇಲ್ಲವೆ ಮೈ ಮೇಲೆ ಲೇಪಿಸಬಹುದು. ಡಾಕ್ಟರ ಮತ್ತು ವೈದ್ಯರು ಇಲ್ಲದ ವೇಳೆಯಲ್ಲಿ ಜವೇರಿಯನ್ನರ ಜೀವನ ಮಿಕ್ಶ್ಚರದಂಥ ನೆರವಾಗುವಂಥ ಔಷಧವು ಮತ್ತೊಂದಿಲ್ಲ.

ಪಟ್ಟಣಗಳಲ್ಲಿ ಕೆಮಿಸ್ಟರ ಅಂಗಡಿಗಳಲ್ಲಿಯೂ, ಹಳ್ಳಿಪಳ್ಳಿಗಳಲ್ಲಿ ಕಿರಾಣೀ ಅಂಗಡಿಗಳಲ್ಲಿಯೂ ಈ ಔಷಧವು ಮಾರಲಿಕ್ಕೆ ಸಿಗುತ್ತದೆ.

ಎಮ್. ಎಚ್. ಜವೇರಿಯನ ಮತ್ತು ಕಂಪೆನಿ,

ದೇವಕರಣ ಮ್ಯಾನ್ಶನ್,

ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ, ೨.

ಕಲ್ಕತ್ತೆಯಲ್ಲಿ ಹಾಲ್ವೆಲ್ ಸ್ಮಾರಕದ ವಿಸರ್ಜನೆಯ ಸಂಬಂಧವಾಗಿ ೪ ಮಂದಿ ಸತ್ಯಾಗ್ರಹವನ್ನು ಆರಂಭಿಸುವಾಗಲೇ ಅವರ ಕೈದಾಗಿದೆ. ಹಾಗೂ ಸುರಾಜದ್ದೌಲನ ದಿನಾಚರಣೆಯಂದು ಒಂದು ಸಾರ್ವಜನಿಕ ಸಭೆ, ಕಲ್ಕತ್ತೆಯ ಟೌನ್ ಹಾಲಿನಲ್ಲಿ ಸೇರಿದ್ದು, ೪ ಮಂದಿ ಎಂ.ಎಲ್.ಎ. ಗಳ ಸಹಿತ ಸುಮಾರು ೧೨ ಮಂದಿ ಕಾಂಗ್ರೆಸ್ ಹಾಗೂ ಮುಸ್ಲಿಂ ಮುಖಂಡರುಗಳು, ಈ ಸ್ಮಾರಕವನ್ನು ಅಲ್ಲಿಂದ ತೆಗೆದೂ ಬಿಡಲೇಬೇಕೆಂದು ತಮ್ಮ ಭಾಷಣಗಳಲ್ಲಿ ಒತ್ತಾಯ ಪಡಿಸಿಯೂ ಇರುವರು.

ಮೊರಾದಾಬಾದಿನ ಸಿಟಿ ಮ್ಯಾಜಿಸ್ಟ್ರೇಟರು, ಯುದ್ಧದ ಪರಿಸ್ಥಿತಿಯ ಕುರಿತು ಸುಳ್ಳು ವಾರ್ತೆ ಹಬ್ಬಿಸಿದ ಮೂವರಿಗೆ ತಲಾ ೧೪—೧೪ ತಿಂಗಳ ಕಠಿನ ಸಜೆ ವಿಧಿಸಿರುವರು.

ಕಲ್ಕತ್ತೆಯಲ್ಲಿ "ಫ್ರೊರ್ವರ್ಡ್ ಬ್ಲಾಕ್" ಆಂಗ್ಲ ವಾರಪತ್ರಿಕೆ ಅಚ್ಚಾಗುವ ಪ್ರೆಸ್ಸಿನಲ್ಲಿ ಪೋಲೀಸರು ಜಡ್ತಿ ನಡೆಸಿ, ಮುದ್ರಾಲಯದ ಚಾಲಕ, ಪ್ರಿಂಟರ್, ಮತ್ತೊಬ್ಬ ಕಂಪೊಜಿಟರ್ ಇವರಿಷ್ಟು ಮಂದಿಯನ್ನು ಸೆರೆ ಹಿಡಿದಿರುವರು. ತನ್ನ ಕೈದಿನ ಬಳಿಕ ಶ್ರೀ. ಸುಭಾಷ್‌ಚಂದ್ರ ಭೋಸರು ಮಾಡಿದ ಒಂದು ಅಪೀಲಿನ ಹಸ್ತ ಪ್ರತಿಯನ್ನೂ ಅದರ ಕರಡು ಪ್ರೂಫನ್ನೂ ಅವರು ಸೆಳೆದೊಯ್ದಿರುವರು.

ಕಲ್ಕತ್ತೆಯಲ್ಲಿ ಹಾಲ್ವೆಲ್ ಸ್ಮಾರಕದ ವಿಸರ್ಜನೆಯ ಸಂಬಂಧವಾಗಿ ಸತ್ಯಾಗ್ರಹವು ಏಕ ಪ್ರಕಾರವಾಗಿ ನಡೆಯುತ್ತಿದ್ದು ಇದುವರೆಗೆ ೨೬ ಮಂದಿ ಸತ್ಯಾಗ್ರಹಿಗಳ ಕೈದು ನಡೆದಿದೆ.

ಬಂಗಾಳದ ಪ್ರಧಾನರು ಶ್ರೀ ಸುಭಾಷ್ ಭೋಸರನ್ನು ಜೈಲಿನಲ್ಲಿ ಕಂಡು ಮಾತಾಡುವರೆಂದು ತಿಳಿದುಬಂದಿದೆ.

ಕಾತಿಯಲ್ಲಿ ದಂಡಾರ್ಥವಾದ ತೆರಿಗೆಯಿಂದ ವಸೂಲಾದ ಹಣ ೫ ಲಕ್ಷ ೫೦ ಸಾವಿರ ರೂಪಾಯಿಗಳು. ಇದರಲ್ಲಿ ೨ ಲಕ್ಷ ೭೫ ಸಾವಿರ ರೂಪಾಯಿಗಳನ್ನು ದಂಗೆಯ ಕಾಲದಲ್ಲಿ ಅನಾಥರಾದವರಿಗೆ ಪರಿಹಾರದ್ರವ್ಯವಾಗಿ ಕೊಡಲಾಗಿದೆ.

ಅಹಮ್ಮದಾಬಾದ್ ಮುನಿಸಿಪಾಲಿಟಿಯವರು ದಿವಂಗತ ವಿ. ಜೆ. ಪಟೇಲರ ಪ್ರತಿಮೆಯೊಂದನ್ನು ಅಲ್ಲಿನ ಟೌನ್ ಹಾಲಿನ ಕಂಪೌಂಡಿನಲ್ಲಿ ಇರಿಸಲು ನಿರ್ಧರಿಸಿದ್ದಾರೆ ಈ ಪ್ರತಿಮೆಯನ್ನು ಉಚಿತವಾಗಿ ಕೊಟ್ಟವರು ಅಲ್ಲಿನ ಮುನಿಸಿಪಲ್ ಕೌನ್ಸಿಲರರಾದ ಶ್ರೀ. ದಾದಾ ಭಾಯ್ ಅವಿೂನ್‌ರವರು.

ಕಲ್ಲಿಕೋಟೆಯ "ಪ್ರಭಾತಂ" ಪ್ರೆಸ್ಸಿನ ಮ್ಯಾನೇಜರರಾದ ಶ್ರೀ. ಪಿ. ರಾಮುನ್ನಿ ಪುಟ್ಟ ನಾಯರರಿಗೆ, ಅವರ ಪ್ರೆಸ್ಸಿನ ಜಡ್ತಿ ಕಾಲದಲ್ಲಿ "ಆಕ್ಷೇಪಕರವಾದ ವರದಿ"ಗಳು ಸಿಕ್ಕಿತೆಂಬುದರಿಂದ ೧ ವರ್ಷದ ಕಠಿನ ಸಜೆ ವಿಧಿಸಲಾಗಿದೆ.

ಮಂಗಳೂರು

ಟ್ರೈನಿಂಗ್ ವಿದ್ಯಾರ್ಥಿಗಳು

ಮಂಗಳೂರು ಗವರ್ನಮೆಂಟ್ ಹಾ. ಎ. ಟ್ರೈನಿಂಗ್ ಶಾಲೆಯಲ್ಲಿ ಟ್ರೈನಿಂಗ್‌ಗಾಗಿ ಜಿಲ್ಲೆಯಿಂದ ೧೨೦ ಮಂದಿ ಸ್ಟೈಪೆಂಡ್ ವಿದ್ಯಾರ್ಥಿಗಳಾಗಿ ಚುನಾಯಿತರಾಗಿದ್ದಾರೆ. ಈ ವಿದ್ಯಾರ್ಥಿಗಳು ಜನರಲ್ ಎಜುಕೇಶನಲ್ ಸರ್ಟಿಫಿಕೇಟ್ ಸಹಿತ ಇದೇ ತಾ. ೧೫ನೇ ಸೋಮವಾರ ೧೨ ತಾಸಿಗೆ ಸರಿಯಾಗಿ ಟ್ರೈನಿಂಗ್ ಶಾಲಾ ಹೆಡ್‌ಮಾಸ್ತರರ ಮುಂದೆ ಹಾಜರಾಗಬೇಕು. ಈ ವಿದ್ಯಾರ್ಥಿಗಳು ತಮ್ಮ ಆರೋಗ್ಯ ಹಾಗೂ ದೇಹದಾರ್ಢ್ಯತೆಗಾಗಿ ಸರ್ಟಿಫಿಕೇಟೊಂದನ್ನು ಶಾಲೆಗೆ ಸೇರಿದ ದಿನದಿಂದ ಮೂರು ದಿನಗಳೊಳಗೆ ಹಾಜರು ಪಡಿಸಬೇಕು. ವೈದ್ಯಕೀಯ ದೃಷ್ಟಿಯಿಂದ ಉಪಾಧ್ಯಾಯರಾಗಲು ಯೋಗ್ಯರಲ್ಲವೆಂದು ಕಂಡುಬಂದವರನ್ನು ಹಿಂದಕ್ಕೆ ಕಳುಹಿಸಿ ಅವರ ಹೆಸರುಗಳನ್ನು ಪಟ್ಟಿಯಿಂದ ತೆಗೆಯಲಾಗುವುದು.

ಚುನಾಯಿತ ಟ್ರೈನಿಂಗ್ ವಿದ್ಯಾರ್ಥಿಗಳು

ಸಂಸ್ಕೃತ ಶಾಲೆಗಳಿಂದ:–ಶ್ರೀ. ಪಿ. ನಾರಾಯಣ ಕಾರಂತ. ಮಂಗಳೂರು ರೇಂಜಿನಿಂದ:–ಶ್ರೀ.ಗಳಾದ ಪಿ. ಶಿವರಾವ್, ಕುಲ್ಯೇಕರ್ ಸುಬ್ಬ, ಟಿ. ಬಾಬು, ಎ. ರಾಮಕೃಷ್ಣ, ಕೆ. ಮುದ್ದು–ಕಟ್ಟಾಪಿಡಿ, ಯಸ್. ಸಾದು ಬ್ಯಾರಿ, ಕೆ ಅಬ್ದುಲ್ಲ, ಬಿ. ಕೆ. ತ್ಯಾಂಪಣ್ಣ, ಕೆ. ಕುಂಞಪ್ಪ ಪೂಜಾರಿ, ಅನಿಲ್ ಕಣ್ಣ, ತೀನಪ್ಪ ಪೂಜಾರಿ, ವಾಮನ ನ್ಯಾಕ, ಕೆ. ಭುಜಂಗ ಶೆಟ್ಟಿ, ಮಾರಪ್ಪ ಶೆಟ್ಟಿ, ಬಿ. ಜೋಗಿ ಶೆಟ್ಟಿ, ಕೆ. ವಾಸು ಶೆಟ್ಟಿ, ಯಚ್. ಜನಾರ್ಧನ, ಜಿ. ಲಕ್ಷ್ಮಣ ಕಾಮತ್, ದಾಸ ಕಾಮತ್, ಬಿ. ಶಂಕರ್ ರಾವ್, ಯನ್. ಕೃಷ್ಣ ಮಯ್ಯ, ಟಿ. ಸುಬ್ರಾಯ ಭಟ್, ವೈ. ನಾರಾಯಣ ಭಟ್, ಎವರೆಸ್ಟ್ ಕೇಸ್ಟಲೀನೊ, ಕೊರ್ನೇಲಿಯೊ ವೀಗಾಸ್, ಅಂತೋನಿ ಜೋನ್ ತಾರೊ, ಜೋನ್ ರಿಚ್ಚಾರ್ಡ್ ರೊಡ್ರಿಗಸ್, ಅಲ್ಬರ್ಟ್ ಮಾರ್ಕ್ ಫೆರ್ನಾಂಡಿಸ್, ಜೋಜ್ರ್ ಬೆನೆಡಿಕ್ಟ್ ಲೋಬೊ, ವಿಕ್ಟರ್ ಡಿ'ಸೋಜ.

ಕಾಸರಗೋಡು ರೇಂಜಿನಿಂದ

ಟ್ರೈನಿಂಗಿಗೆ ಚುನಾಯಿತರಾದ ವಿದ್ಯಾರ್ಥಿಗಳು:–ಶ್ರೀ.ಗಳಾದ ಕೆ. ಶೇಷಪ್ಪ ಶೆಟ್ಟಿ, ಪಿ. ಸಂಕಪ್ಪ ರೈ, ವೈ. ಸಂಕಪ್ಪ ಅಡ್ಯಂತಾಯ, ಹಸ್ಸನ್ ನೈರ್ ಬ್ಯಾರಿ, ಮಾರ್ಸೆಲ್ ಎಸ್. ಡಿ'ಸೋಜ, ಟಿ. ಜಿ ಶಂಕರನ್, ಎಚ್. ವಿ ಅಚ್ಚುತನ್, ಕೆ. ಶ್ರೀನಿವಾಸ ಪುರುಷ, ಪಿ. ನಾರಾಯಣ, ಕೊಡ್ಲ ಮುಕುಂದ, ಸಿ. ಎ. ರಾಮಪ್ಪ, ಕೆ. ನರಸಿಂಹ, ಯಸ್. ಸುಬ್ಬ ನ್ಯಾಕ, ಯಂ. ಗಂಗಾಧರ, ಯನ್. ಅಂತಯ್ಯ, ಪಿ. ಸುಬ್ರಹ್ಮಣ್ಯ ಭಟ್, ಟಿ. ತಿರುಮಲೇಶ್ವರ ಭಟ್, ವೈ. ಸುಬ್ರಾಯ ಭಟ್, ಪಿ. ವೆಂಕಟ್ರಮಣ ಕೊಳತ್ತಾಯ, ಮಹಾಲಿಂಗ ಭಟ್, ವಿ. ಕೇಶವ ಭಟ್, ಯನ್. ಮಹಾಬಲೇಶ್ವರ ಭಟ್, ಯು. ರಾಮಣ್ಣ ಕೆದಿಲಾಯ. ಉಳಿದವರ ಹೆಸರುಗಳು ಕ್ರಮಶಃ ಪ್ರಕಟಿಸಲ್ಪಡುವುದು.

ಚೀನಾದಲ್ಲಿ ಜಪಾನಿಯರ ಹೊಸ ನೀತಿ

ಇದುವರೆಗೆ ಚೀನಾ ದೇಶದಲ್ಲಿ ಮಡಿದ ಮಂದಿಯ ಸಂಖ್ಯೆ ೨॥ ಮಿಲಿಯಕ್ಕೂ ಮಿಗಿಲಾಗಬಹುದೆಂದು ವಾರ್ತೆ. ಪೂರ್ವ ಆಸ್ಯದಲ್ಲಿ ಇಂದಿಗೆ ಒಂದು ಮಿಲಿಯ ಸಶಸ್ತ್ರ ಜಪಾನೀ ಸೇನೆ ಇದೆಯೆಂದೂ, ಲೆಕ್ಕಕ್ಕೆ ದೊರೆಯದೆ, ಚೀನದ ಪ್ರತಿಯೊಂದು ಹಳ್ಳಿ, ಪಟ್ಟಣ, ನಗರಗಳಿಗೂ ಬಾಂಬಿನ ಮಳೆಯನ್ನು ಜಪಾನೀಯರು ಸುರಿಸಿದುದರಿಂದಾಗಿ, ಸತ್ತ ನಾಗರಿಕರ ಸಂಖ್ಯೆ ಅಪಾರವೆಂದೂ ತಿಳಿದುಬಂದಿದೆ.

ಚೀನೀಯರ ಸೇನೆಯಲ್ಲಿ ಸತ್ತ ಹಾಗೂ ಗಾಯಗೊಂಡವರ ಸಂಖ್ಯೆ ಸುಮಾರು ೨ ಮಿಲಿಯಕ್ಕೆ ಮಿಗಬಹುದೆಂದು ಅಂದಾಜು. ಜಪಾನೀ ಸೇನೆಯಲ್ಲಿ ಮಡಿದವರ ಸಂಖ್ಯೆ ಸುಮಾರು ೨ ಮಿಲಿಯ, ವಿಪರೀತವಾಗಿ ಗಾಯಗೊಂಡು ಅಪ್ರಯೋಜಕರಾಗಿ ಮಾಸ್ಕೋ[illegible] ಸಂಖ್ಯೆ ಸುಮಾರು ೫ ಲಕ್ಷ.

ಮಾದಕ ದ್ರವ್ಯಗಳ [illegible]ಯೋಗದ ಹೆಚ್ಚಳ ಹೊಲಿಗೇರಿಗಳ ಸ್ಥಾಪನೆ, ಜುಗಾರಿ ಮಂಡಗಳು ಹಾಗೂ ಮಕ್ಕಳ ಮಾರಾಟದ ಮಂಡಿಗಳ ಹೆಚ್ಚಳವೇ, ಜಪಾನೀಯರು ಚೀನದಲ್ಲಿ ಸ್ಥಾಪಿಸುತ್ತಿರುವ ಆ ಹೊಸ ನೀತಿಯಾಗಿದೆ. ಈ ಮೂಲಕ ಚೀನೀಯರನ್ನು ಕೀಳಾಗಿ ಮಾರ್ಪಡಿಸಿ, ತಾವು ರಾಷ್ಟ್ರವನ್ನು ಸೂರೆಗೊಳ್ಳಬೇಕೆಂಬುದೇ ಜಪಾನಿನ ಬಯಕೆ. ಜಪಾನೀಯರ ಶಸ್ತ್ರಾಸ್ತ್ರಗಳ ಶಕ್ತಿ ಅಪಾರವಾದ್ದು ಭೀಕರವಿದ್ದರೂ, ತಮ್ಮ ಜನಾಂಗಕ್ಕೆ ಆಸ್ಯದ ಸಕಲ ಜನಾಂಗಗಳೂ ತಲೆಬಾಗಬೇಕೆಂಬ ಇವರ ಹೇಳಿಕೆಗೆ ಚೀನಾ ಇನ್ನೂ ಬಾಗಲಿಲ್ಲ; ಬದಲು ಬಲವಾಗಿ ಇದಿರಿಸುತ್ತಿದೆ.

ಸ್ತ್ರೀ ಗೆಸ್ಟಾಪೊ ಏಜಂಟರು

ಜರ್ಮನಿಯ ಅಸಮಾನ ಕ್ರೂರ ಗೆಸ್ಟಾಪೊ ಗೂಢಚಾರರ ನಾಯಕನಾದ ಹಿಮ್ಲರ್, ತನ್ನ ಗೂಢಚಾರ ದಳದ ಬಲವನ್ನು ಅವ್ಯಾಹತವಾಗಿ ಹೆಚ್ಚಿಸಿಕೊಳ್ಳುತ್ತಿದ್ದಾನೆ. ಗಂಡಸರೆಲ್ಲ ಹಿಟ್ಲರನು ಗೆದ್ದ ರಾಷ್ಟ್ರಗಳಿಗೆ ಸಾಗಬೇಕಾದುದರಿಂದ್ದ, ಇದೀಗ ಜರ್ಮನ್ ರಾಷ್ಟ್ರದೊಳಗೆ ಕೆಲಸ ನಿರ್ವಹಿಸಲು ಬೇಕಾದ ಮಂದಿಯನ್ನು ಸಿದ್ಧಪಡಿಸಬೇಕಾಗಿದೆ. ಆದರೆ, ಯುದ್ಧದ ದೆಸೆಯಿಂದ ಗಂಡಸರ ಅಭಾವವಾದುದರಿಂದ, ಈತ ಹತ್ತು ಸಾವಿರ ಹೆಂಗಸರಿಗೆ ಇದೀಗ ತರಬೇತಿ ಕೊಟ್ಟು ಅವರನ್ನು ಸಿದ್ಧಗೊಳಿಸಿದ್ದಾನೆ. ಇವರು ದೇಶದ ಗಂಡಸು ಗೂಢಚಾರರನ್ನು ಗೆದ್ದ ರಾಷ್ಟ್ರಗಳಿಗೆ ಕಳುಹಿಸುವರು.

ಪೋಲೆಂಡ್, ಜೆಕೊಸ್ಲೊವಾಕಿಯ, ಡೆನ್‌ಮಾರ್ಕ್ ಮತ್ತು ನಾರ್ವೆಗಳಲ್ಲಿ ಸುಮಾರು ೫೦ ಸಾವಿರ ಗೆಸ್ಟಾಪೊ ಗೂಢಚಾರರು ಕಾರ್ಯ ನಡೆಸುತ್ತಿದ್ದಾರೆ. ಫ್ರಾನ್ಸ್ ಹಾಗೂ ಇತರ ಕಡೆಗಳಿಗೆ—ಇನ್ನು, ಇದುವರೆಗೆ ಜರ್ಮನ್ ದೇಶದೊಳಗೇ ಇದ್ದ ಗೂಢಚಾರರನ್ನು ಕಳುಹಿಸಿಕೊಡಲಾಗುವುದು.

ಈ ಸ್ತ್ರೀ ಗೆಸ್ಟಾಪೊ ದಳದ ನಾಯಕಿ ಡೊರೊತಿ ಅಗ್ರೇಲ. ಈಕೆ ಮೊದಲು ಜರ್ಮನ್ ನರ್ತಕಿಯೂ, ಸಿನೆಮಾ ನಟಿಯೂ ಆಗಿದ್ದಳು. ಅಲ್ಲದೆ ಹಿಟ್ಲರನ ಸ್ನೇಹಿತೆ. ಈಕೆಯ ಕ್ರೂರತೆ ಹೆಸರಾದುದು, ಶಕ್ತಿ ಕೇರ್ತಿಯುತವಾದುದು. ಹಿಂದೊಮ್ಮೆ ನಟನೊಬ್ಬನ ದವಡೆಗೆ ಏರಿಸಿಯೇ ಈಕೆ ಅವನನ್ನು ಒಂದು ತಿಂಗಳು ಆಸ್ಪತ್ರೆಯಲ್ಲಿ ಇರಿಸಿದ್ದ ಸಾಹಸಿ!

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆಗಳು

I. ಇಂಗ್ಲೀಷ್

1. ದಿ ಮೈಸೂರ್ ಟ್ರೈಬ್ಸ್ ಎಂಡ್ ಕಾಸ್ಟ್ಸ್—ಕೀರ್ತಿಶೇಷ ಶ್ರೀ. ಎಚ್. ವಿ. ನಂಜುಂಡಯ್ಯ, ಎಂ.ಎ., ಎಂ.ಎಲ್., ಸಿ.ಐ.ಇ.ರವರು ಮತ್ತು ರಾವ್ ಬಹದ್ದೂರ್ ಎಲ್. ಕೆ. ಅನಂತಕೃಷ್ಣ ಅಯ್ಯರ್, ಇವರ ಇಂಡೆಕ್ಸ್ ಸಹಿತ. ನಾಲ್ಕು ಭಾಗಗಳಲ್ಲಿ. ಭಾಗ 1 . 15--0--0
   ಇತರ ಭಾಗಗಳು (ಇಂಡೆಕ್ಸ್ ಉಚಿತ) ಪ್ರತಿಯೊಂದಕ್ಕೆ . . . 12--8--0
2. ಪ್ರಮಾಣ ಸಮುಚ್ಚಯ—ಆಚಾರ್ಯ ದಿನ್ನಗ. ಭಾಗ 1. ಶ್ರೀ. ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್, ಎಂ. ಎ , ಇವರಿಂದ 3--0--0
3. ದಿ ಮನ್ರೋ ಸಿಸ್ಟೆಮ್ ಓಫ್ ಬ್ರಿಟಿಷ್ ಸ್ಟೇಟ್ಸ್‌ಮೇನ್‌ಶಿಪ್ ಇನ್ ಇಂಡಿಯಾ—ಡಾ. ಕೆ. ಎನ್. ವೆಂಕಟಸುಬ್ಬಾ ಶಾಸ್ತ್ರಿ, ಎಂ.ಎ., ಪಿಎಚ್.ಡಿ., ಅವರಿಂದ . . . 3--0--0

II. ಕನ್ನಡ

1. ಕನ್ನಡ ಭಾಷೆಯ ಇತಿಹಾಸ–ಶ್ರೀ. ಆರ್. ನರಸಿಂಹಾಚಾರ್, ಎಂ.ಎ.,ಬಿ.ಎಲ್.ರವರಿಂದ 1--0--0

(ಬಿ) ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಮಾಲೆ

1. ಹರಿಶ್ಚಂದ್ರ ಕಾವ್ಯ ಸಂಗ್ರಹ 0–12--0
2. ಕಾದಂಬರಿ ಸಂಗ್ರಹ 0–12--0
3. ಪ್ರಭುಲಿಂಗಲೀಲೆಯ ಸಂಗ್ರಹ 0–12--0
4. ಸೊಕ್ರೆಟೀಸನ ಕೊನೆಯ ದಿನಗಳು—ಲೇಖಕರು: ಶ್ರೀ. ಎ. ಎನ್. ಮೂರ್ತಿರಾವ್, ಎಂ.ಎ.
   ಸಾದಾ ಪ್ರತಿ 0–12--0. ಕೆಲಿಕೊ 1--0--0
5. ಶ್ರೀ. ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ—ಶ್ರೀ. ಕೆ. ವಿ. ಪುಟ್ಟಪ್ಪ — ಸಾದಾ 0–12--0
   ಕೆಲಿಕೊ 1--4--0
6. ರವೀಂದ್ರನಾಥ ಠಾಕೂರರ ಜೀವನ ಮತ್ತು ಕಾರ್ಯಗಳು—ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ. – – ಸಾದಾ 0--12--0. ಕೆಲಿಕೊ 1--4--0
7. ಆರೋಗ್ಯ ಮತ್ತು ಅದರ ಜ್ಞಾನ ಮತ್ತು ಸಾಧನ—ಡಾ. ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್.ಎಸ್.ಸಿ.—ಅವರಿಂದ. ರಟ್ಟು 0--12--0. ಕೆಲಿಕೊ 1--4--0
8. ಪಂಪರಾಮಾಯಣ ಸಂಗ್ರಹ—ಪಂಡಿತ ಟಿ. ಶ್ರೀನಿವಾಸ ರಾಘವಾಚಾರ್ ಮತ್ತು ಶ್ರೀ. ಡಿ. ಎಲ್. ನರಸಿಂಹಾಚಾರ್ಯರಿಂದ. – – ರಟ್ಟು 0--12--0. ಕೆಲಿಕೊ 1--0--0
9. ಹಣ ಪ್ರಪಂಚ–ಶ್ರೀ. ವಿ. ಸೀತಾರಾಮಯ್ಯನವರಿಂದ. ರಟ್ಟು 0--12--0. ಕೆಲಿಕೊ 1--4--0
10. ಸಂಸ್ಕೃತ ನಾಟಕ—ಶ್ರೀ. ಎ. ಆರ್. ಕೃಷ್ಣಶಾಸ್ತ್ರಿ, ಎಂ.ಎ , ಅವರಿಂದ. – ರಟ್ಟು 0-12--0
    ಕೆಲಿಕೊ 1--4--0
11. ಜೀವ ವಿಜ್ಞಾನ—ಶ್ರೀ. ಬಿ. ವೆಂಕಟನಾರಣಪ್ಪ, ಎಂ.ಎ., ಅವರಿಂದ. – ರಟ್ಟು 0–12--0
    ಕೆಲಿಕೊ 1--4--0
12. ಹಿಂದೂ ದರ್ಶನಸಾರ—ಶ್ರೀ. ಲಕ್ಷ್ಮೀಪುರಂ ಶ್ರೀನಿವಾಸಾಚಾರ್‌ರಿಂದ. – ರಟ್ಟು 0–12--0
    ಕೆಲಿಕೊ 1--4--0

ಕಾಶ್ಮೀರದಲ್ಲಿ ಘೋಷಾ ವಿರೋಧ ಸಂಘ.

ಕಾಶ್ಮೀರದ ಸಂಚಾರವನ್ನು ಮುಗಿಸಿ ಪಂಡಿತ ಜವಹರಲಾಲ ನೆಹರುಗಳು ಹಿಂತಿರುಗುವಾಗ ಅಲ್ಲಿನ ಸ್ತ್ರೀಯರಿಗೆ ತಮ್ಮ ಸಂದೇಶವನ್ನು ಈಯುತ್ತಾ, "ಅಡಗಿಕೊಂಡಿರುವ ಕಾಲ ಕಳೆದು ಹೋಯಿತು. ಗಂಡಸರೊಡನೆ ಮುನ್ನಡೆದು ನೀವೆಷ್ಟು ಸಾಮರ್ಥ್ಯವಂತರೆಂದು ಜಗತ್ತಿಗೆ ತೋರಿಕೊಡಿರಿ" ಎಂದುದರ ಪರಿಣಾಮವಾಗಿ, ಕುಮಾರಿ ಮಹಮ್ಮೂದ ಅಹಮ್ಮದ್ ಆಲಿ, ಬಿ ಎ.,ಬಿ.ಟಿ. ಎಂಬಾಕೆ ಘೋಷಾಪದ್ಧತಿಯನ್ನು ವಿರೋಧಿಸುವ ಹಾಗೂ ಪ್ರಗತಿಪಥದಲ್ಲಿ ಸ್ತ್ರೀಯರನ್ನು ನಡೆಸುವ ಸಲುವಾಗಿ, ಸಂಘವೊಂದನ್ನು ಸ್ಥಾಪಿಸಿದ್ದಾಳೆ. ಇದರ ಸದಸ್ಯರ ಸಂಖ್ಯೆ ಹೆಚ್ಚುತ್ತಾ ಇದೆ. ಈಗ ಕುಮಾರಿ ಅಹಮ್ಮದ್ ಆಲಿಯೇ ಇದರ ಅಧ್ಯಕ್ಷೆ.

ಚಕ್ರವರ್ತಿಗಳು ಮೆಗ್ನೆಟಿಕ್ ಮೈನ್ ನೋಡುತಿದ್ದಾರೆ.

ಅರನೇ ಜಾರ್ಜ್ ಚಕ್ರವರ್ತಿಗಳು ೧೯೩೮ರಲ್ಲಿ ತಯಾರಾದ ಬ್ರಿಟನ್ನಿನಲ್ಲಿ ಮೊದಲು ತೆಗೆಯಲ್ಪಟ್ಟ ಮೈನನ್ನು ನೋಡುತಿದ್ದಾರೆ. ಸಂಧಾನದ ವಿಚಾರವಾಗಿ ಮ್ಯೂನಿಚ್‌ನಲ್ಲಿ ಮಾತುಬೆಳೆಯಿಸುತಿದ್ದಾಗಲೂ ಜರ್ಮನರು ಈ ಘಾತುಕ ಅಸ್ತ್ರಗಳನ್ನು ತಯಾರಿಸುತಿದ್ದರೆಂದು ವ್ಯಕ್ತವಾಗದೇ?

ಹಿಟ್ಲರ್—ಲೀಗ್ ಸಂಬಂಧ

ಗೋರಖ್‌ಪುರ ಜಿಲ್ಲಾ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಮಹಮ್ಮದ್ ಫರೂಖ್, ಯಂ. ಎಲ್.ಎ. ಯವರು, ಸುಮಾರು ಒಂದು ವರ್ಷಗಳ ಹಿಂದೆ ಭಾರತದ ಕುರಿತಾದ ಹಿಟ್ಲರನ ಭಾಷಣವೊಂದನ್ನು ಕೇಳಿ, ಉಬ್ಬಿ, ಆತನನ್ನು ಶ್ಲಾಘಿಸಿ ಪತ್ರವೊಂದನ್ನು ಬರೆದರೆಂದು ಸುದ್ದಿ. ಅಂದಿನಿಂದ ಇವರು ಹಿಟ್ಲರನ ಸ್ನೇಹಿತರಿರಬೇಕೆಂಬ ಸಂಶಯ ಬಂದು ಮೊನ್ನೆ ಮೊನ್ನೆ ಇವರ ಮನೆಯ ಝಡ್ತಿ ನಡೆಸಲಾಯಿತು. ಆದರೆ ಪ್ರಯೋಜನಕಾರಿಯಾದ ನಾಜಿ ಪತ್ರಗಳಾವುವೂ ಸಿಗಲಿಲ್ಲ.

ಹೆಂಡತಿಯೊಡನೆ ಆಡಿದ ಆಟ ಪ್ರಾಣಕ್ಕೆ ಕಾಟ ತರುವಂತಾಯಿತು

ಲಕ್ನೌವಿನ ಒಬ್ಬನು ತನ್ನ ಹೆಂಡತಿಯಿಂದ ೯ ರೂಪಾಯಿಗಳನ್ನು ಕೊಂಡು, ಆಕೆ ೭ ರೂಪಾಯಿಗಳನ್ನೇ ಕೊಟ್ಟಿದ್ದಳೆಂದು ಪರಿಹಾಸ್ಯ ಮಾಡುವುದಕ್ಕಾಗಿ, ೨ ರೂಪಾಯಿಗಳನ್ನು ಬಾಯೊಳಗೆ ಹಾಕಿಕೊಂಡು, "೭ ರೂಪಾಯಿ ಇದೆ" ಎಂದ. ಆದರೆ, ಹೆಂಡತಿ ಇವನಿಗಿಂತಲೂ ಹೆಚ್ಚಿನ ಚತುರಳಾದುದರಿಂದ, ಆತ ರೂಪಾಯಿಗಳನ್ನು ನುಂಗಬಹುದೆಂದು ಅವನ ಗಂಟಲನ್ನು ಹಿಡಿದಳು. ಪರಿಹಾಸ್ಯ ಅಳಿಯಿತು. ರೂಪಾಯಿಗಳು ಅವನ ಗಂಟಲಲ್ಲಿ ಸಿಕ್ಕಿಬಿದ್ದು ಪ್ರಾಣ ಹೋಗುವಂತಾಗಲು, ಆಸ್ಪತ್ರೆಗೆ ಸಾಗಿಸಲ್ಪಟ್ಟ. ಹೆಂಡತಿ ವೈಧವ್ಯದ ಬರವನ್ನು ಎದಿರುನೋಡುತ್ತಿದ್ದಳು. ಆಸ್ಪತ್ರೆಯಲ್ಲಿ ಹೇಗೋ ಬದುಕಿದ. ಡಾಕ್ಟರರು ರೂಪಾಯಿಯನ್ನು ಕಷ್ಟದಿಂದ ಹೊರತೆಗೆದರು.

ನಾಜಿ ಜರ್ಮನಿಯಲ್ಲಿ
ಪ್ರಣಯ, ಪ್ರೇಮ, ವಿವಾಹಗಳ ಸ್ಥಾನ
ಸ್ತ್ರೀಯರು ಹೆರುವುದು ಮುಖ್ಯ; ವಿವಾಹ ಪ್ರಧಾನವಲ್ಲ
ಸ್ತ್ರೀಪುರುಷ ಶಿಕ್ಷಣದ ಪರಮಾವಧಿ

ರಷ್ಯದ ಹೊರತಾಗಿ ಜಗತ್ತಿನ ಮತ್ತಾವ ರಾಷ್ಟ್ರದಲ್ಲೂ, ನಾರಿಯರ ಜೀವನ ಕ್ರಮವು ಜರ್ಮನಿಯಲ್ಲಿನಷ್ಟು ವ್ಯತ್ಯಾಸ ಹೊಂದಿಲ್ಲವೆಂದು ಹೇಳಬಹುದಾಗಿದೆ. ಪ್ರತಿಯೊಂದೂ, ಇತರ ವಿಚಾರದಲ್ಲಿನಂತೆ, ವಿವಾಹ, ಸಂಸಾರಗಳಲ್ಲೂ ತಮ್ಮದೇ ಆದ ಪದ್ಧತಿ ನಾಜಿಗಳಲ್ಲಿದೆ.

ಹಿಟ್ಲರನ ಜರ್ಮನಿಯಲ್ಲಿ ಗಂಡು—ಹೆಣ್ಣು ಮಕ್ಕಳು ಹೆತ್ತವರಿಗೆ ಸೇರಿದವರಲ್ಲ; ಬದಲು ರಾಷ್ಟ್ರಕ್ಕೆ ಸೇರಿದವರು; ಲೆದಕ್ಕಾಗಿ ಅವರು ಬಾಳ ಬೇಕು. ನಾಜಿ ನೀತಿಯ ಪ್ರಕಾರ, ಇಂದಿನ ಜರ್ಮನ್ ನಾರಿಯರ ಪ್ರಾಮುಖ್ಯವಾದ ಕರ್ತವ್ಯಗಳು ಎರಡು ಮಾತ್ರ;—ಮಕ್ಕಳು ಮತ್ತು ರಾಷ್ಟ್ರ. ಈ ವಿಚಾರದಲ್ಲಿಯೇ ಜರ್ಮನಿಯಲಂ ವಿಲಿಯ ಸ್ತ್ರೀಯರ ಜೀವನವಿಂದು ಆರಂಭವೂ ಅಂತ್ಯವೂ ಆಗುತ್ತಿದೆ. "ಜಗತ್ತಿನಲ್ಲೆಲ್ಲಾ ಅತ್ಯಂತ ಉತ್ತಮ ತಂದೆಯಂದಿರನ್ನು ನಾನು ಇಂದಿನ ನನ್ನ ಸೇನೆಯಲ್ಲಿ ತಯಾರಿಸಿಕೊಂಡಿದ್ದೇನೆ" ಎಂದು ಹಿಟ್ಲರನೇ ಒಮ್ಮೆ ಸಾರಿದ್ದ.

ಅಧಿಕಾರಕ್ಕೆ ಬಂದಾಗಿನಿಂದ ನಾಜಿಗಳು ಆರಂಭಿಸಿ, ಅವ್ಯಾಹತವಾಗಿ ನಡೆಸಿಕೊಂಡು ಬಂದ ಒಂದು ಕೂಗೆಂದರೆ "ಹೆಚ್ಚು ಮಕ್ಕಳು ಬೇಕು" ಎಂಬುದು. ವಿವಾಹವಾಗಿಯಾಗಲೀ ವಿವಾಹವಾಗದೆಯಾಗಲೀ ಹಿಟ್ಲರನ ಜರ್ಮನಿಯಲ್ಲಿ ಸ್ತ್ರೀಯರು ಮಕ್ಕಳನ್ನು ಹೆರುವವರ ಮೇಲ್ಮೆಯ ಕುರಿತಾಗಿ ನಾಜಿ ಪ್ರಚಾರಖಾತೆ ಪ್ರಚಾರ ನಡೆಸಿದೆ. ಅವಿವಾಹಿತ ಸ್ತ್ರೀಯರಿಗೆ ಜನಿಸಿದ ಮಕ್ಕಳಿಗೆ ಸಮಾನ ಮಾನ್ಯತೆಯನ್ನು ಇತ್ತಿದೆ.

ಇಂದಿನ ಜರ್ಮನಿಯಲ್ಲಿ ಮಕ್ಕಳನ್ನು ಹೆರಬೇಕೆಂದಿದ್ದರೆ, ವಿವಾಹವಾಗಲೇ ಬೇಕಾದ ಅಗತ್ಯವೇ ಇಲ್ಲ. ಇಚ್ಛಿಸದಿದ್ದರೂ ಪ್ರಣಯಿಗಳು ಮಕ್ಕಳನ್ನು ಪಡೆಯಲೇ ಬೇಕು. ವಿವಾಹವಾಗದಿದ್ದರೂ, ತರುಣಿಯರು ಹೆರಬೇಕು. ಒಂದೇ ಒಂದು ತಡೆ ಎಂದರೆ, ಈ ಮಕ್ಕಳು ಜರ್ಮನರ ಮಕ್ಕಳೇ ಆಗಿರಬೇಕು. ವಿವಾಹದ ರೂಢಿಗೆ ಬಲಿಬೀಳುವುದಕ್ಕಿಂತಲೂ ಮೇಲಿನ ಪದ್ಧತಿ ಮಕ್ಕಳನ್ನು ರಾಷ್ಟ್ರಕ್ಕೆ ಒದಗಿಸುವದು ಎಂದು ಸದಾ ತರುಣರಿಗೆ ತಿಳಿಸಲಾಗುತ್ತಿದೆ. ಪ್ರತಿಯೊಬ್ಬ ತರುಣಿಯ ಜೀವನದ ಮೇಲ್ಮೆಯು ಆಕೆ ಹೆತ್ತೊಡನೆ ಉಂಟಾಗುವುದೆಂದು ತಿಳಿಸಲಾಗುತ್ತಿದೆ.

ಸಂತತಿ ಪ್ರತಿಬಂಧಕಕ್ಕೆ ಜರ್ಮನಿಯಲ್ಲಿ ಸ್ಥಾನವಿಲ್ಲ. ಅದನ್ನು ಅಭ್ಯಾಸಿಸುವವರ ನೆಲೆ ಸೆರೆಯಲ್ಲಿ. ಆಲ್ಲದೆ ಹುಡುಗಿಯರು ಹೆರುವಂತೆ ಮಾಡುವದಕ್ಕಾಗಿ, ವಿವಾಹದ ಸಾಲವನ್ನು ಸರಕಾರ ಕೊಡುವುದು. ಬ್ರಹ್ಮಚಾರಿಗಳ ಮೇಲೆ ಹೊರಲಾರದ ತೆರಿಗೆ ಹೊರಿಸಲಾಗಿದೆ.

ನಾಜಿ ತತ್ವವನ್ನು ಪ್ರತಿಯೊಬ್ಬ ತರುಣಿಯಲ್ಲೂ ಬಿತ್ತುವುದಕ್ಕಾಗಿ, ತರುಣಿಯರ ದಳವೊಂದು ಸ್ಥಾಪಿಸಲ್ಪಟ್ಟಿದೆ. ೧೦ನೇ ವರ್ಷಕ್ಕೆ ಮೇಲ್ಪಟ್ಟ ಪ್ರತಿಯೊಬ್ಬ ಹೆಣ್ಣೂ, ಇದನ್ನು ಸೇರಲೇ ಬೇಕೆಂಬ ಕಡ್ಡಾಯವಿದೆ. ಈ ದಳದ ಹೆಚ್ಚಿನ ಧ್ಯೇಯ, ಹುಡುಗಿಯರ ದೇಹದಾರ್ಢ್ಯತೆಯನ್ನು ಹೆಚ್ಚಿಸುವುದು. ಈಜಾಟ, ವ್ಯಾಯಾಮ, ಆಟಗಳಿಂದ ಅವರ ದೇಹದ ಬೆಳವಣಿಗೆಗೆ ಸಹಕಾರಿಯಾಗುವುದು.

ಈ ದಳದ ಶಿಕ್ಷಣ ಕೇಂದ್ರಗಳಲ್ಲಿ ಹೆಣ್ಣು ಮಕ್ಕಳಿಗೆ ಮಿಲಿಟರಿ ಶಿಕ್ಷಣ, ವ್ಯಾಯಾಮಗಳನ್ನಿತ್ತು, ಅವರ ದೇಹವನ್ನು ಬೆಳೆಸಿ ಮುಂದೆ ಲೇಬರ್ ಕೇಂದ್ರಗಳಿಗೆ ಕಳುಹಿಸಲಾಗುವುದು. ಇಲ್ಲಿ, ಈ ತರುಣಿಯರು ತಮ್ಮ ಮುಂದಿನ ಜೀವನದಲ್ಲಿ ತಾವು ಮಾಡಲಿರಬೇಕಾದ ಕೆಲಸಗಳನ್ನು ಕಲಿಯುವರು. ಭೋಗ ವಿಲಾಸದ ಆನಂದ, ಮೇಲ್ಮೆ, ಸುಖಗಳ ಕುರಿತಾಗಿ ಸದಾ ಭಾಷಣಗಳನ್ನು ಕೇಳಿ, ಚಲನ ಚಿತ್ರಗಳನ್ನೂ ನೋಡಿ, ಇವರು ತಮ್ಮ ಇಚ್ಛಾಪೂರ್ತಿಗೆ ಹೊರಡುವರು. ತರುಣರೊಡನೆ ಬೆರೆಯುವ ಸಂದರ್ಭವನ್ನೂ ಇವರಿಗೆ ಇಲ್ಲಿ ಒದಗಿಸಿ ಕೊಡಲಾಗುವುದು. ಪರಿಣಾಮವಾಗಿ ಕೇಂದ್ರದಲ್ಲಿನ ಶೇಕಡಾ ಲಂಕ್ಕೂ ಮಿಕ್ಕಿದ ಹುಡುಗಿಯರು ಗರ್ಭವತಿಯರಾಗುವರೆಂದು ತಿಳಿದುಬಂದಿದೆ.

ಈ ರೀತಿಯ ಶಿಕ್ಷಣದಿಂದಾಗಿ ಹೆಚ್ಚಿನವರು ಗರ್ಭವತಿಯರಾದೊಡನೆಯೂ, ಕೆಲ್ಲವರು ಮುಂಚಿತವಾಗಿಯೂ ವಿವಾಹವಾಗಿ ಸಂಸಾರ ಸಾಗಿಸಲು ಮುಂದಾಗುವರು. ಅಂತೂ ಹೆರದವಳಿಗಿಂತ ವಿವಾಹವಾಗದೆ ಹೆತ್ತವಳ ಸ್ಥಾನಮಾನಗಳು ಹಲವು ಮಡಿ ಹೆಚ್ಚಿನವು.

ಜರ್ಮನಿಯ ಸ್ತ್ರೀಯರಿಗೂ ಒಬ್ಬಳು "ಹಿಟ್ಲರಿಣಿ" ಇದ್ದಾಳೆ. ಈಕೆಯ ಹೆಸರು ಪ್ರೋಶೋಲ್ಜ್ ಕ್ಲಿಂಕ್. ನಾಲ್ಕು ಮಕ್ಕಳ ತಾಯಿಯಾದ ಈಕೆ ಸರ್ವತ್ರ ಜರ್ಮನಿಯ ಸಕಲ ಸ್ತ್ರೀ ದಳಗಳ ನಾಯಕಿ. ಸ್ತ್ರೀಯರ ಹಿಟ್ಲರ್!.

ಜರ್ಮನಿಯಲ್ಲಿ—ಅವಿವಾಹಿತರಾಗಿ ಹೆರಲಿಳಸುವವರಿಗಾಗಿ ಎಲ್ಲೆಲ್ಲೂ ಪ್ರಸೂತ ಗೃಹಗಳು ತೆರೆಯಲ್ಪಟ್ಟವೆ. ವಿವಾಹಿತ ಸ್ತ್ರೀಯರ ಹೆರಿಗೆಯ ವಿಚಾರವೂ ಸರಕಾರಕ್ಕೆ ಸೇರಿದೆ. ಆದುದರಿಂದ ಹೆರಿಗೆಯ ಆಸ್ಪತ್ರೆಗಳು ನಿರಪಾಯವಾದ ಹೆರಿಗೆ ನಡೆಸುವವು.

ಹೆರುವ ಕಾಲ ಹಾಟದ ಸ್ತ್ರೀಯರ ದುಃಸ್ಥಿತಿ ಹೆಚ್ಚು. ಇವರು ತಮ್ಮ ರಾಷ್ಟ್ರದ ಕಡೆಗಿನ ಕರ್ತವ್ಯವನ್ನು ಪೂರೈಸಿರುವದರಿಂದ, ಪ್ರಾಯ ಸಂದ ಕಾಲದಲ್ಲಿ ಕಾರ್ಖಾನೆಗಳಲ್ಲಿ ದುಡಿದು, ರಾಷ್ಟ್ರದ ಮೇಲ್ಮೆಯನ್ನು ಸಾಧಿಸಬೇಕಾಗಿದೆ. ಮಕ್ಕಳನ್ನು ಹೆತ್ತ ಇವರೇ, ಆ ಮಕ್ಕಳ ನಾಶಕ್ಕೆರುವ ಮದ್ದುಗುಂಡುಗಳನ್ನು ತಯಾರಿಸುವ ಕೆಲಸ ನಡೆಸಬೇಕಾಗಿದೆ. ದೇಶದ ಮೇಲಿನ ಹೆಚ್ಚಿನ ಮನ[illegible] ಗಂಡಸರು, ಹೆರುವ ಕಾಲದಾಟದ ತಮ್ಮ ಮಡದಿಯರನ್ನು ಬಿಟ್ಟು, ಬೇರೆ ವಿವಾಹವಾಗಿ ತಂದೆಯಂದಿರಾಗುವ ಹೆಚ್ಚಿನ ಹವ್ಯಾಸಕ್ಕೆ ಇಂದು ಒಳಗಾದುದರಿಂದ, ಪ್ರಾಯ ಸಂದ ಸ್ತ್ರೀಯರ ಪರಿಸ್ಥಿತಿ ಕಠಿನವಾಗ ಹತ್ತಿದೆ.

ವಿವಾಹ, ಸಂಸಾರ ಮುಂತಾದ ವಿಚಾರಗಳಲ್ಲಿ ಉಂಟಾದ ಇಂದಿನ ಈ ಅಸಮಾನ ಪರಿವರ್ತನೆಯಿಂದಾಗಿ, ಇಂದಿನ ಜರ್ಮನಿಯಲ್ಲಿ ಪ್ರೇಮವು ಮಕ್ಕಳ ಮೂಲಕ ದಂಪತಿಗಳನ್ನು ಬಂಧಿಸುವ ಬಂಧನಗಳಾಗಿಲ್ಲ; ಹೆತ್ತವರು ಸರಕಾರಕ್ಕಾಗಿ ಸಂತತಿ ಬೆಳೆಸುವ ಯಂತ್ರಗಳಾಗಿದ್ದಾರೆ.

ಅಂತೂ ಇಂದಿನ ಜರ್ಮನಿಯಲ್ಲಿ, ಸ್ತ್ರೀಯರು ತಮ್ಮ ಜೀವನವನ್ನು [illegible]ಗಳಾಗಿ, ಇಚ್ಛಾಪೂರ್ತಿಯ ಗೊಂಬೆಗಳಾಗಿ ಮಾರ್ಪಡಿಸಿ, ಮಕ್ಕಳ—ಗಂಡಂದಿರ ವಿಯೋಗಗಳಿಂದ, ನೊಂದಿದ್ದಾರೆ.

KAYAKALPA MODAK
ಕಾಯಕಲ್ಪ ಮೋದಕ

ಆಯುರ್ವೇದಿಕ್ ಡ್ರಗ್ ರೀಸರ್ಚ್ ಇನ್ಸ್-ಟಿಟ್ಯೂಟ್ ಇವರ ಶರೀರಕ್ಕೆ ದಾರ್ಢ್ಯ ವ ಪುಷ್ಟತೆ ಉಂಟುಮಾಡಿ, ಆಬಾಲವೃದ್ಧರಿಗೆ ರೋಗರಹಿತರಾಗಿ, ದೀರ್ಘಾಯುವನ್ನು ಕೊಡುವ ಚರಕೋಕ್ತ ದಿವ್ಯ ವನಸ್ಪತಿಗಳಿಂದ ಕೂಡಿರುವ ವಿಶೇಷ ಮೋದಕ. ಬಾಟ್ಲ 1ರ ರೂಪಾಯಿ 3-8-0 (ಪೇಕಿಂಗ್ ವ ಟಪ್ಪಾಲು ಹಾಸಲು ಮಾಫಿ).

Sole Distributors: THE
Indian Drug & General Agencies,
23, Stingers Street G. T. MADRAS.


ಬಲ್ಲಪ್ಪ ಮತ್ತು ಒಲ್ಲಪ್ಪ
ಏಕೆ, ಕುಗ್ಗಿದ ಹಾಗೆ ಕಾಣಿಸುವಿ
ಮನಸ್ಸನ್ನು ಜಂದು ಗೂಡಿಸಲಾರೆ ಈ ಸಂಜ್ಯೆಗಳಿಂದ ತಲೆ ಗಿರ್ರನೆ ತಿರುಗುತ್ತಿದೆ. ನೀನು ಮಾತ್ರ ಶಾಂತನಾಗಿ ಇರುವಿ
ನನ್ನಬುದ್ಧಿಯು ಸ್ವಚ್ಛನಾಗಿ ಚುರುಕಾಗಿರುವುದರಿಂದ ನನ್ನ ಕೆಲಸವು ನನಗೆ ದಿಗ್ಭಮೆಹಿಡಿಸುವುದಿಲ್ಲ. ನಾನು ಪ್ರತಿ ಬೆಳಿಗ್ಗೆ
ಈನೋಸ್
"ಫ್ರೂಟ್ ಸಾಲ್ಟ್"
ತೆಗೆದುಕ್ಕೊಳ್ಳುವುದರಿಂದ ದಿನವೆಲ್ಲಾ ಚುರುಕಾಗಿರುತ್ತೇನೆ

ಪ್ರತಿ ದಿನ ಎದ್ದ ಮೇಲೆ ತಿಳಿಯಾದ ಒಂದು ಲೋಟ ಈನೋಸ್ 'ಫ್ರೂಟ್ ಸಾಲ್ಟ್'ನ್ನು ಸೇವಿಸಿದರೆ ಆಹಾರ ವ್ಯತ್ತಿಗಳ ಅಜಾಗರೂಕತೆಯಿಂದ ಉಂಟಾಗುವ ತಲೆನೋವು, ಪೈತ್ಯ, ಅಜೀರ್ಣ, ಹೃದಯತಾಪ, ಮಲಬದ್ಧತೆ ಮುಂತಾದ ಶಾರೀರಕ ಅವ್ಯವಸ್ಥೆಗಳಿಗೆ ಆಸ್ಪದವಿಲ್ಲದಂತೆ ಮಾಡಿ ಬುದ್ಧಿಯನ್ನು ಚುರುಕಾಗಿಯೂ ಸ್ವಚ್ಛವಾಗಿಯೂ ಇರುವಂತೆ ಮಾಡುವುದು. ಶರೀರವು ಆರೋಗ್ಯವಾಗುವುದರಿಂದ ಬುದ್ಧಿಯೂ ಚುರುಕಾಗಿರುವುದು

ಈನೊಸಿನ ಉಲ್ಲಾಸನವನ್ನು ಸೀಸೆ ತೆರೆದ ಮೇಲೆ ಕಾಪಾಡುವುದಕ್ಕೋಸ್ಕರ ವಾಯು ಸಂಚಾರಕ್ಕೆ ಅವಕಾಶ ಕೊಡುವಂತಿರುವ ಬಿರಟೆಯುಳ್ಳ ಸೀಸೆಗಳಲ್ಲಿಯೇ ಮಾರಲ್ಪಡುವುದು. ಚಿಕ್ಕ ಆಕಾರದ ಸೀಸೆಗೆ ಬೆಲೆ ಆರು ಆಣೆ ಮಾತ್ರ-ಈನೊಸಿಗೆ ಬೆಲೆ ಕಡಿಮೆ.

ಜೆ೨೨

ನಗುವಿನ ಗೆಲುವು

ಈ ಸೌಂದರ್ಯದ ಸೊಬಗು ನಿಮಗೆಲ್ಲಿ ಲಭಿಸುವುದು? ವೀರ್ಯಶಕ್ತಿಯಿಂದಲ್ಲದೆ ಮತ್ತೆಲ್ಲಿಯದು? ತಿಂದ ಆಹಾರಪದಾರ್ಥಗಳನ್ನು ಜೀರ್ಣಿಸಿಕೊಳ್ಳಬೇಕಾದರೂ ನರಗಳ ಶಕ್ತಿ ಅತ್ಯಾವಶ್ಯಕ. ಅಂಥಾ ಚೇತನವನ್ನು ಕೊಟ್ಟು ಆರೋಗ್ಯವನ್ನು ಪೋಷಿಸುವುದರಲ್ಲಿ 'ಲಸ್ಟರ್' ಟಾನಿಕ್ ಅದ್ವಿತೀಯವಾದದ್ದು. ಇದನ್ನುಪಯೋಗಿಸುವುದರ ಮೂಲಕ ವಾತ, ಪಿತ್ತ, ಅಜೀರ್ಣ, ಮಲಬದ್ಧತೆ, ಗೂಲ್ಮ, ಉಬ್ಬಸ, ಜ್ವರಗಡ್ಡೆ, ಎದೆಬಡಿತ, ನಿಶ್ಯಕ್ತಿ, ರಕ್ತದೋಷದಿಂದುಂಟಾದ ಚರ್ಮವ್ಯಾಧಿ, ಅತ್ಯುಷ್ಣತೆ, ಮೆದುಳಿನ ಅಶಕ್ತತೆ, ಇಂದ್ರಿಯ ಶಿಥಿಲತೆ, ನಾಶವಾಗಿ ಶರೀರಕ್ಕೆ ಕಾಂತಿ ಬರುವುದು. ಔಷಧದ ಗುಣವನ್ನು ನಾವು ಹೆಚ್ಚಿಗೆ ಶ್ಲಾಘಿಸಬೇಕಾದ ಆವಶ್ಯಕವಿಲ್ಲ. ಅದರ ಪ್ರತಿಭೆಯನ್ನು ತನ್ನಷ್ಟಕ್ಕೆ ತಾನೆ ತೋರ್ಪಡಿಸುವುದು. ದೊಡ್ಡ ಸೀಸೆ ರೂ. ೩-೮-೦ ಮಿಡಿಯಂ ರೂ. ೨—೦—೦. ಚಿಕ್ಕ ಸೀಸೆ ರೂ. ೧--೧—೦

ಲಸ್ಟರ್

ಲಸ್ಟರ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ.
ಡಿಪೋ: ಚಿಕ್ಕಪೇಟೆ, ಬೆಂಗಳೂರು ಸಿಟಿ.
ಮೈಸೂರು ಏಜೆಂಟ್ಸ್:—ಶ್ರೀನಿವಾಸ ಸ್ಟೋರ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್.
Sole Agents:—Basel Mission Press, Mangalore.
ಸಬ್ ಏಜೆಂಟ್ಸ್:—Messrs. ಉಡುಪಿ ಮಿಷನ್ ಷಾಪ್, ಸಂತೆಕಟ್ಟೆ, ಉಡುಪಿ.
Messrs. ಭಕ್ತಾ ಅಂಡ್ ಬ್ರದರ್ಸ್, ಕಾಸರಗೋಡು.
ವಿ. ವಿ. ಶೆಣೈ, ಕಾರ್ಕಳ.
ಬಿ. ಗೋವಿಂದ ಪಾಂಡುರಂಗ ಭಂಡಾರಿ, ಪುತ್ತೂರು.

"ದೇಶಭಕ್ತ" ★ ಉಜ್ವಲ ರಾಷ್ಟ್ರೀಯ ಕನ್ನಡ ವಾರ ಪತ್ರಿಕೆ.

ಕನ್ನಡ ನಾಡಿನ ವೀರ ಸತ್ಯಾಗ್ರಹಿ ತ್ಯಾಗಿ ದೇಶಭಕ್ತ ದಿವಂಗತ
ಕಾರ್ನಾಡ್ ಸದಾಶಿವರಾಯರ
ಸ್ಮರಣಾರ್ಥವಾಗಿ ಇದೇ ಆಗೋಸ್ತ್ ತಾ. ೧ನೇ ಗುರುವಾರದಿಂದ ಪ್ರಕಟವಾಗಲಿದೆ.

ವಾರ್ಷಿಕ ಚಂದಾ—ಅಂಚೆ ಸಹಿತ ರೂ. ೩—೪—೧. ಬಿಡಿ ಸ್ಟಂಪಿಕ್ಕೆ ಒಂದಾಣೆ.
ಕನ್ನಡ ನಾಡಿನ ಮೂಲೆ ಮೂಲೆಯಿಂದಲೂ ಏಜಂಟರೂ, ಪಾತ್ಮೀದಾರರೂ ಬೇಕಾಗಿದ್ದಾರೆ.
ವಿವರಗಳಿಗೆ ಕೂಡಲೇ ಬರೆಯಿರಿ.
ಮೆನೇಜರ್—"ದೇಶಭಕ್ತ", ಫೆಲಿಕ್ಸ್ ಪೈ ಬಜಾರ್, ಮಂಗಳೂರು.

ಮೈಸೂರು ಸಂಸ್ಥಾನದ ಸುದ್ದಿಗಳು

(ಸ್ವಂತ ಸುದ್ದಿಗಾರರಿಂದ) ಬೆಂಗಳೂರು

ಶಾಲೆಯ ನೂತನ ಬಡಾವಣೆ ಆರಂಭ
ದಿವಾನರ ಭಾಷಣ

"ಜೀವನದ ಮತ್ತು ಸುವ್ಯವಸ್ಥಿತ ಸಮಾಜದ ಧ್ಯೇಯವಾದರೂ ಏನು? ಪ್ರತಿಯೊಬ್ಬ ವ್ಯಕ್ತಿಯ ಸುಖ ಸಾಧನೆ ಮತ್ತು ಪ್ರಜೆಗಳಲ್ಲಿ ಪ್ರತಿಯೊಬ್ಬರ ಶ್ರೇಯಃಸಾಧನೆ ಏನು? ಇವು ನೆರವೇರಬೇಕಾದರೆ ಪ್ರಜೆಗಳಲ್ಲಿ ಸಮಸ್ತರೂ ಸಚ್ಚಾರಿತ್ರ್ಯವನ್ನು ವೃದ್ಧಿಪಡಿಸಿಕೊಂಡು ಬುದ್ಧಿ ಬಲವನ್ನು ಹೆಚ್ಚಿಸಿಕೊಳ್ಳುವುದೇ ರಾಜ ಮಾರ್ಗ. ವಿದ್ಯಾಭ್ಯಾಸ ಕ್ರಮದಲ್ಲಿ ಈ ಅಂಗಗಳಿಗೆ ಮೊದಲು ಗಮನ ಕೊಡಬೇಕು. ಈ ಧ್ಯೇಯಗಳು ನೆರವೇರುವಂತೆ, ಶಿಕ್ಷಣ ಕೊಡುವುದೇ ಪ್ರತಿಯೊಬ್ಬ ಉಪಾಧ್ಯಾಯನಿಗೂ ಪ್ರಥಮ ಕರ್ತವ್ಯವಾಗಿರಬೇಕು" ಎಂಬುದಾಗಿ ಮೈಸೂರು ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು, ಬೆಂಗಳೂರು ನಗರದ ಪೇತೀಯ ವಿದ್ಯಾ ಶಾಲೆಯ ನೂತನ ನಿರ್ಮಿತ ಕಟ್ಟಡದ ಪ್ರವೇಶ ಮಹೋತ್ಸವವನ್ನು ನೆರವೇರಿಸಿದಾಗ ಹೇಳಿದರು.

ಮೈಸೂರು ನ್ಯಾಶನಲ್ ಎಜ್ಯುಕೇಷನ್ ಸೊಸೈಟಿಯ ಅಧ್ಯಕ್ಷರಾದ ಶ್ರೀ. ಟಿ. ಭುಜಂಗ ರಾಯರು ಸ್ವಾಗತ ಭಾಷಣ ಮಾಡಿದರು. ಗೌರವ ಕಾರ್ಯದರ್ಶಿಯವರಾದ ಶ್ರೀ. ಎ. ತಾಂಡೋಣ ರಾಯರು ಕಾರ್ಯಕಲಾಪಗಳ ವರದಿಯನ್ನು ಓದಿದರು.

ದಿವಾನ್‌ರವರು ನೂತನ ಕಟ್ಟಡದ ಆರಂಭೋತ್ಸವನ್ನು ನೆರವೇರಿಸಿದರು. ಪೇತೀಯ ವಿದ್ಯಾಶಾಲೆ ಎಂಬ ಹೆಸರಿನಲ್ಲಿ ಅಡಗಿರುವ ಮನೋಭಾವವನ್ನು ವಿವರಿಸಿದರು. ಪ್ರತಿಯೊಬ್ಬ ವಿದ್ಯಾರ್ಥಿಯು ತಾನೇ ಜನಾಂಗ ಎಂದು ಭಾವಿಸಿಕೊಂಡು, ತಾನೇ ಮೈಸೂರಿನ ಪ್ರಜೆ, ಭಾರತೀಯ ಜನಾಂಗದವನು ಆಗಿರುವುದಕ್ಕಾಗಿ ಹೆಮ್ಮೆ ಪಡಬೇಕು ಎಂದರು.

ಲೋಕ ಸೇವಾಸಕ್ತ ರಾವ್ ಬಹದ್ದೂರ್ ಬಿ. ಕೆ. ಗರುಡಾಚಾರ್ಯರು, ವಂದನಾ ಸಮರ್ಪಣೆ ಮಾಡಿದರು.

ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ

ಮೈಸೂರು ಶಾಸನ ಸಭೆಯು ಮುಂದುವರಿಯಿತು. ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು ಅಧ್ಯಕ್ಷತೆ ವಹಿಸಿದ್ದರು. ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಬೇಕೆಂಬ ಆಶಯವನ್ನು ಸರಕಾರದ ಗಮನಕ್ಕೆ ತರಲಾಯಿತು. ಸರಕಾರದವರು ಯಾವ ಉತ್ತರವನ್ನೂ ಕೊಡಲಿಲ್ಲ.

ಈ ಸಭೆಯಲ್ಲಿ ಸರಕಾರದ ಪಾನ ನಿಷೇಧ ನೀತಿಯನ್ನು ದ್ವಿತೀಯ ಸಚಿವರು ಸ್ಪಷ್ಟಪಡಿಸಿದರು.

೭,೮೦,೦೦೦ ರೂಪಾಯಿಗಳನ್ನು ಅಬ್ಕಾರಿ ಶಾಖೆಗೆ ಕೊಡಬೇಕೆಂದು ದ್ವಿತೀಯ ಸಚಿವರು ಪ್ರಾರ್ಥಿಸಿದರು ಸದಸ್ಯರಾದ ಶ್ರೀ. ಚಂದ್ರ ಶೇಖರಯ್ಯನವರು ಒಂದು ಕತ್ತರಿ ಪ್ರಯೋಗ ನಿರ್ಣಯವನ್ನು ತಂದು ಪಾನನಿರೋಧವು ಯಶಸ್ವಿಯಾಗದೆ ಇರುವುದಕ್ಕೆ ಕಾರಣಗಳನ್ನು ವಿವರಿಸಿದರು.

ಸರಕಾರದ ಪರದ್ವಿತೀಯ ಸಚಿವರು ಉತ್ತರವೀಯುತ್ತ ಕ್ಲೋಸ್ ಪೇಟೆಯಲ್ಲಿ ಕೈಕೊಂಡಿರುವ ಪಾನನಿರೋಧ ನೀತಿಯ ಫಲಿತಾಂಶವು ೧೯೩೯-೪೦ರಲ್ಲಿ ಉತ್ತಮವಾಗಿದೆ. ಈ ವರ್ಷ ಇನ್ನೂ ಕೆಲವು ಅಂಗಡಿಗಳನ್ನು ಮುಚ್ಚಿಸಲಾಗುವುದು. ಪಾನ ನಿರೋಧ ಸಮಿತಿಗಳು ಮೊದಲಿನಂತೆ ಉತ್ಸಾಹದಿಂದ ಕೆಲಸಮಾಡುತ್ತಿಲ್ಲ. ಸರಕಾರದವರು ಈ ಪಾನನಿರೋಧ ಕ್ರಮವನ್ನು ಬಿಡುವುದಿಲ್ಲ ಎಂದರು.

ಶ್ರೀ. ಮೋಕ್ಷಗುಂಡಂ ಕೃಷ್ಣಮೂರ್ತಿ ಕೊಲೆ ಮೊಖದ್ದಮೆ

ಸೆಷನ್ಸ್ ವಿಚಾರಣೆಯಾರಂಭ

(ಸ್ವಂತ ಸುದ್ದಿಗಾರರಿಂದ) ಬೆಂಗಳೂರು, ಜುಲಾಯಿ ೧೮

ಶ್ರೀ. ಮೋಕ್ಷಗುಂಡಂ ಕೃಷ್ಣಮೂರ್ತಿಯವರ ಕೊಲೆ ಮೊಕದ್ದಮೆಯ ಸೆಷನ್ಸ್ ವಿಚಾರಣೆಯು ಸ್ಪೆಶಲ್ ನ್ಯಾಯಾಧೀಶರಾದ ಶ್ರೀ. ಎ. ಸುಂದರ ರಾಜಾರಾಯರ ಸಮ್ಮುಖದಲ್ಲಿ ಪ್ರಾರಂಭವಾಗಿದೆ. ಅಪರಾಧಿಗಳು:—ಕೆ. ಎಂ. ನಾರಾಯಣ ರೆಡ್ಡಿ, ರಾಮು, ಮುನಿಗ ಮತ್ತು ಎಸ್. ಕೆ. ವೆಂಕಟರಂಗಯ್ಯಂಗಾರ್.

ಅಪರಾಧಿಗಳ ಮೇಲೆ ಕೊಲೆ, ಅಪಹಾರ, ಮತ್ತು ಫೋರ್ಜರಿ ಆಪಾದನೆಗಳನ್ನು ಹೊರಿಸಿರುವುದರಿಂದ ಮೊದಲಿರಡು ಆಪಾದನೆಗಳನ್ನೂ, ಫೋರ್ಜರಿ ಆಪಾದನೆಗಳನ್ನೂ ವಿಭಾಗಿಸಿ ವಿಚಾರಣೆ ನಡೆಸಬೇಕೆಂದು ಪಬ್ಲಿಕ್ ಪ್ರಾಸಿಕ್ಯೂಟರರು ಕೋರಿದರು.

ಚಾವಿ ಗುರುತಿನ
ಗುಲಾಬಿ ನೀರು

ಶುಭ ದಿನಗಳಲ್ಲೂ, ಉತ್ಕೃಷ್ಟ ಮಿಠಾಯಿಗಳ ತಯಾರಿಯಲ್ಲೂ ಧಾರಾಳವಾಗಿ ಉಪಯೋಗಿಸಲ್ಪಡುತ್ತಿದೆ. ಪ್ರತಿಯೊಬ್ಬ ಮರ್ಯಾದಸ್ತ ಕಿರಾಣಿ ಮತ್ತು ಅಂಗಡಿಗಾರನಿಂದಲೂ ಶೇಖರಿಸಿಡಲ್ಪಟ್ಟಿದೆ.

ತಯಾರಕರು:
A. S. ATTARVALA & SONS
ABDULREHMAN ST.
BOMBAY, 3.

PANDIT BANK,
MANGALORE.
ಪಂಡಿತ್ ಬೇಂಕ್,
ಕೋರ್ಟು ರಸ್ತೆ, ಮಂಗಳೂರು.

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ಮತ್ತು ಕಾಯಂ ಠೇವಣಾತಿ ಯಾನೆ ಡಿಪೊಜಿಟ್‌ಗಳನ್ನು ಪಡಕೊಳ್ಳುವದೂ, ಚಿನ್ನಾಭರಣ ಮಗೈರೆಗಳ ಈಡಿನ ಮೇಲೆ ಹಣ ಎಡ್ವಾನ್ಸ್ ಮಾಡುವದೂ, ಸೇಫ್ ಡಿಪೊಜಿಟ್ ಪಡೆಯುವದೂ ಮತ್ತೆ ಯಾವತ್ತೂ ಬ್ಯಾಂಕಿಂಗ್ ಕೆಲಸಗಳನ್ನು ಬಹಳ ಸುಲಭವಾದ ಬಡ್ಡಿ ಮತ್ತು ಶರತುಗಳೊಡನೆ ಮಾಡೋಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯ್ಬೆಲಿಟಿಯದು ಅಲ್ಲವಾದುದರಿಂದ ಡಿಪೊಜಿಟರಿಗೆ ಹೆಚ್ಚಿನ ಭದ್ರತೆ ಉಂಟು.

ಚಿನ್ನಾಭರಣಗಳ ಈಡಿನ ಮೇಲೆ ಬಹಳ ಸುಲಭವಾದ ಬಡ್ಡಿ ದರಗಳಲ್ಲಿ ಹಣ ಎಡ್ವಾನ್ಸ್ ಮಾಡೋಣಾಗುತ್ತದೆ.

ಚಾಲ್ತಿ ಠೇವಣಾತಿ:

ಪ್ರತಿದಿನದ ತಿಲ್ಕಿನ ಮೇಲೆ	ಶೇಕಡಾ 1½ %
ಸೇವಿಂಗ್ಸ್ ಬ್ಯಾಂಕ್:	ಶೇಕಡಾ 3 %

ನಿರಖು ಠೇವಣಾತಿ:

6 ತಿಂಗಳುಗಳಿಗೆ	ಶೇಕಡಾ 4 %
1 ವರ್ಷಕ್ಕೆ	ಶೇಕಡಾ 4½ %

PANDIT [illegible]IVA RAO, B.A., LL.B.,
PROPRIETOR.
PANDIT SANJIVA RAO, B.A.
AGENT.

50 ವರ್ಷಗಳಿಂದ ಜಗತ್ಪ್ರಸಿದ್ಧ
ಮದನಮಂಜರಿ
ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತು ವಿಕಾರ ಮೊದಲಾದವುಗಳನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ ಕ್ರಯ: ಡಬ್ಬಿ 1ಕ್ಕೆ 1 ರೂ.

ರಮಣ ವಿಲಾಸಿನೀ

ಕಾಮಶಕ್ತಿ ಹೆಚ್ಚಿಸಿ ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟುಮಾಡುವ ನಿರ್ಬಾಧಿರ ಔಷಧ. ಕ್ರಯ: ಡಬ್ಬಿ 1ಕ್ಕೆ 1 ರೂ.

ಮದನಮಂಜರಿ ಫಾರ್ಮಸಿ,
184, ಚೈನಾ ಬಜಾರ್, ಮದ್ರಾಸ್.

Jaya Laxmi Bank, Ltd., Mangalore.
ಜಯಲಕ್ಷ್ಮೀ ಬೇಂಕ್, ಲಿಮಿಟೆಡ್, ಮಂಗಳೂರು.
(ಸ್ಥಾಪಿಸಲ್ಪಟ್ಟದ್ದು—1923)

ಶಾಖೆಗಳು: ಪುತ್ತೂರು, ಕಾಸರಗೋಡು, ಚಿಕ್ಕಮಗಳೂರು, ಮೂಡಿಗೆರೆ ಮತ್ತು ಕಣ್ಣಾನೂರು.

ಅಧಿಕೃತ ಮೂಲಧನ . . .	ರೂ. 1,00,000
ಅರ್ಪಿಸಲಾದ ಮತ್ತು ಚೆಂದಾಹಾಕಿದ ಮೂಲಧನ	ರೂ. 1,00,000
ತೆತ್ತ ಮೂಲಧನ	ರೂ. 92,705
ಕ್ಷೇಮ ಮತ್ತಿತರ ನಿಧಿಗಳು . .	ರೂ. 1,10,979

ಕಾಯಂ ಠೇವಣಾತಿಗಳು.

3 ತಿಂಗಳ ಠೇವಣಾತಿಗಳಿಗೆ—ಸೇ. 3%; 6 ತಿಂಗಳ ಠೇವಣಾತಿಗಳಿಗೆ—ಸೇ. 3½%;
12 ತಿಂಗಳ ಠೇವಣಾತಿಗಳಿಗೆ—4%.

ಮಾಸಿಕ, ಸೇವಿಂಗ್ಸ್ ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ಮೇಲೆ, ಸಾಲವನ್ನು ಕೊಡುವುದು.

M. Ganesh Rao
ಸೆಕ್ರೆಟರಿ.

ಅಶಕ್ತ ಮಕ್ಕಳು
ಡೋಂಗರೇ
ಬಾಲಾಮೃತವನ್ನು
ಕೊಡುವದರಿಂದ
ಸಶಕ್ತರೂ,
ಚೆಲುವರೂ,
ಸಂತೋಷ ಚಿತ್ತರೂ
ಆಗುವರು

A SURE CURE FOR COLDS AND RHEUMATIC PAINS



ತಲೆನೋವು, ಶೀತ, ವಾತ, ಉಳುಕು ಮತ್ತು ವಾತದ ಬೇನೆಗಳಿಂದ ವಾಸಿಹೊಂದಲು ಈ ಸುಗಂಧ, ಬೇನೆಹಾರಿ ಮುಲಾಮನ್ನು ಹಚ್ಚಿರಿ. ಸಿಪ್ರಸ್ ಮುಲಾಮಿನ ವಿಷಹಾರಕ ಗಂಧವು ಶೀತದಿಂದ ಕಟ್ಟಿಹೋದ ನಾಸಿಕ ದ್ವಾರವನ್ನು ಶೀಘ್ರದಲ್ಲಿ ಸರಿಪಡಿಸಿ ಉಪಶಮನವೀವುದು.

ಎಲ್ಲಾ ಕೆಮಿಸ್ಟರಲ್ಲೂ ದೊರೆಯುವುದು. ಬಾಟ್ಲಿಯೊಂದರ ಬೆಲೆ ರೂ. 1. ಅಂಚಿಗಾಗಿ ಎರಡಾಣೆ ಅಂಚಿ ಚೀಟಿ ಕಳುಹಿಸಿದಲ್ಲಿ ಪುಕ್ಕಟೆ ಮಾದರಿ ಸೀಸೆ ಕಳುಹಲಾದೀತು.

ಶೀತವನ್ನು ಅಲಕ್ಷಿಸದಿರಿ. ಶೀಘ್ರ ಉಪಶಮನಕ್ಕೆ ಸಿಪ್ರಸ್ ಮುಲಾಮನ್ನು ಎದೆ ಮತ್ತು ಗಂಟಲುಗಳಿಗೆ ತಿಕ್ಕಿಕೊಳ್ಳಿರಿ.

ODMAN'S
CYPRESS SALVE.
(Pain Balm) REGD
ಅಂಗ್ಲೋ ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂ.,
೭, ಜುಮ್ಮಾ ಮಸೀದಿ, ಬೊಂಬಾಯಿ, 2.

ಯುದ್ಧ ವೆಚ್ಚ

ಇಂದಿನ ಯುದ್ಧವು ಅಸಮಾನ ವೆಚ್ಚದ್ದು. ಬ್ರಿಟನ್ನಿಗೆ ಇಂದು ದಿನವೊಂದಕ್ಕೆ ಸುಮಾರು ೬೦ ಲಕ್ಷ ಪವನುಗಳು ಖರ್ಚಾಗುತ್ತವೆ. ಜರ್ಮನಿಗೆ ಇದರ ಇಮ್ಮಡಿ ವ್ಯಯವಾಗಬಹುದೆಂದು ಅಂದಾಜು. ೧೯೧೪ರಲ್ಲಿ ಬ್ರಿಟನ್ನಿನ ಸಾಲ ೬೫೦ ಮಿಲಿಯ ಪವನುಗಳು. ೧೯೨೦ರಲ್ಲಿ ಇದು ೭೫೨ ಮಿಲಿಯ ಪವನುಗಳಿಗೆ ಏರಿತ್ತು. ಹಿಂದಿನ ನಾಲ್ಕು ವರ್ಷಗಳ ಘೋರ ಯುದ್ಧ ೧೫೦ ವರ್ಷಗಳ ಒಟ್ಟು ಕೂಡಿಸಿದ ಸಾಲವನ್ನು ೧೦ ಸಾವಿರ ಪಾಲಷ್ಟು ಏರಿಸಿತು. ಇಂದಿನ ಸಾಲ ೧೯೨೦ರ ಇಮ್ಮಡಿ ಆಥವಾ ಮುಮ್ಮಡಿ ಇರಲೂ ಬಹುದು.

ಜರ್ಮನರಲ್ಲಿ ಯುದ್ಧೋತ್ಸಾಹವಿಲ್ಲ

ವಿಜಯ ದೊರೆತರೂ ಹರುಷ, ಆನಂದಗಳು ದೊರೆತಿಲ್ಲ!

ಸ್ವೀಡನ್ನಿನ 'ಸೆ' ಎಂಬ ಪತ್ರಿಕೆಯ ಜರ್ಮನಿಯ ಅಂತರಂಗದ ಕುರಿತಾದ ಒಬ್ಬ ಲೇಖಕರು ಜರ್ಮನಿಯು ಪ್ಯಾರಿಸನ್ನು ವಶಪಡಿಸಿಕೊಂಡಾಗ, ಫ್ರಾನ್ಸು ಶರಣಾಗತವಾದಾಗ, ಜರ್ಮನಿಯಲ್ಲೇ ಇದ್ದರು. ಜರ್ಮನಿಯ ವಿಜಯದಿಂದ ಜರ್ಮನ್ ಜನತೆಯಲ್ಲಿ ವಿಜಯೋತ್ಸಾಹದ ಯಾವ ಕುರುಹೂ ಕಂಡುಬರಲಿಲ್ಲವೆಂದು ಅವರ ಹೇಳಿಕೆ.

"ಜರ್ಮನಿಯೊಳಗೆ ಪ್ರಚಾರಖಾತೆಯು ಬ್ರಿಟಷ್ ಪ್ರಚಾರಖಾತೆಗಿಂತ ಇಮ್ಮಡಿ ಮಿಗಿಲಾಗಿದೆ. ಯುದ್ಧದ ಭೀಕರತೆಯನ್ನು ತೋರುವ ಚಲನ ಚಿತ್ರಗಳೇ, ಎಲ್ಲೆಲ್ಲೂ ತುಂಬಿಹೋಗಿವೆ. ಜರ್ಮನ್ ಶಸ್ತ್ರಾಸ್ತ್ರ ಶಕ್ತಿಯ ಪ್ರದರ್ಶನದಿಂದ ಜರ್ಮನರಲ್ಲಿ ಧೈರ್ಯ ಹೆಚ್ಚುವ ಬದಲು ಭೀತಿ ಬೆಳೆದಿದೆ. ಚಲನಚಿತ್ರ ಪ್ರದರ್ಶನದ ನಂತರ ಯಾವ ಆನಂದದ ಕುರುಹೂ ಕಂಡುಬರುತ್ತಿಲ್ಲ. ಇಂದಿನ ಜೀವನದಲ್ಲಿ ಮಂದಿ ಜಿಗುಪ್ಸೆಗೊಂಡಿದ್ದಾರೆ. ವಿವಿಧ ಕಟ್ಟುಕಟ್ಟಳೆ, ತರಬೇತಿ, ಶಿಕ್ಷಣಗಳಿಂದ ದೂರವಾಗಿ ಸಾಮಾನ್ಯ ಜೀವನ ಸಾಗಿಸಲು ಅವರ ಮನ ಹಾತೊರೆಯುತ್ತಿದೆ" ಎಂದು ಈ ಪತ್ರಿಕೆಯ ಲೇಖ ಹೇಳಿದೆ.

ಫ್ರಾನ್ಸಿನಿಂದ ಜರ್ಮನಿಗೇನು ಲಾಭ?

ಲಾಭದ ಆಶೆ ಅಳಿದೇ ಹೋಯಿತು

ಬೇಕಾದದ್ದು ಬರಲಿಲ್ಲ

ಫ್ರಾನ್ಸನ್ನು ತನ್ನದಾಗಿ ಮಾಡಿಕೊಂಡುದರಿಂದಾಗಿ, ಜರ್ಮನಿಗೆ ಅದಾವ ಗಣನೀಯ ಉಪಕಾರವೂ ಆಗಿಲ್ಲವೆಂದು ಬ್ರಿಟನ್ನಿನ ಪತ್ರಿಕೆಗಳು ಸಾರಿವೆ. ಫ್ರಾನ್ಸು ಪರರಾಷ್ಟ್ರಗಳಿಂದ ತರಿಸಿಕೊಳ್ಳುವ ಧಾನ್ಯಗಳ ಹಾಗೂ ಆಹಾರ ಸಾಮಗ್ರಿಗಳ ಮೇಲೆಯೇ ಹೊಂದಿಕೊಂಡಿರುವ ಒಂದು ರಾಷ್ಟ್ರ. ಅಲ್ಲದೆ ಮಾಂಸವೂ ಬೇಕಾದಷ್ಟು ಇಲ್ಲಿಲ್ಲ.

೧೯೩೬—೩೯ರಲ್ಲಿ ಫ್ರಾನ್ಸು, ತನ್ನ ಖರ್ಚಿಗಾಗಿ ತರಿಸಿಕೊಂಡ ಧಾನ್ಯಗಳು ೯ ಲಕ್ಷ ಮೆಟ್ರಿಕ್ ಟನ್ನುಗಳು, ಆಹಾರಸಾಮಗ್ರಿಗಳಿಗಾಗಿ ಧಾನ್ಯಗಳು ೧೭ ಲಕ್ಷ ಮೆಟ್ರಿಕ್ ಟನ್ನುಗಳು, ಎಣ್ಣೆ ಬೀಜಗಳು ೧೨ ಲಕ್ಷ ಮೆಟ್ರಿಕ್ ಟನ್‌ಗಳು, ಮಾಂಸ ೪೨ ಸಾವಿರ ಮೆ. ಟನ್‌ಗಳು ಹಾಗೂ ಹಣ್ಣು ೫೫೦ ಸಾವಿರ ಮೆ. ಟನ್‌ಗಳು.

ಫ್ರಾನ್ಸಿನಲ್ಲಿ ಶೇಖರಿಸಿ ಇರಿಸಲಾದ ಪೆಟ್ರೋಲ್ ಮತ್ತು ಎಣ್ಣೆಗಳೆಷ್ಟೆಂದು ಅಂದಾಜು ಮಾಡಲು ಸಾಧ್ಯವಿಲ್ಲ. ಆದರೆ, ಯುದ್ಧ ನಡೆಯುತ್ತಿರುವಾಗಲೂ ಇಲ್ಲಿ ಜನರಿಗೆ ಬೇಕಾದಷ್ಟು ಪೆಟ್ರೋಲ್ ದೊರೆಯುತ್ತಿದ್ದುದನ್ನು ಕಂಡರೆ, ಫ್ರಾನ್ಸಿನಲ್ಲಿ ಶೇಖರಿಸಲ್ಪಟ್ಟಿದ್ದ ಪೆಟ್ರೋಲ್ ಅಸಮಾನವೆಂದು ಊಹಿಸಬಹುದಾಗಿದೆ. ಆದರೆ ಬ್ರಿಟಿಷರು ಈ ಪೆಟ್ರೋಲುಗಳಲ್ಲಿ ಹೆಚ್ಚಿನ ಅಂಶ, ವಿಮಾನದಾಳಿಗೇ ಖರ್ಚಾಗಿರಬಹುದೆಂಬ ಆತ್ಮಸಂತೋಷವನ್ನು ಹೊಂದಿದ್ದಾರೆ.

ಫ್ರೆಂಚ್ ಕಬ್ಬಿಣ ಹಾಗೂ ಉಕ್ಕಿನ ಕೈಗಾರಿಕೆಯೂ, ಪರರಾಷ್ಟ್ರಗಳಿಂದ ಬರುವ ಕಲ್ಲಿದ್ದಲು, ಮೆಂಗನೀಸ್ ಮುಂತಾದವುಗಳ ಮೇಲೆ ಹೊಂದಿಕೊಂಡಿದೆ ಫ್ರೆಂಚ್ ಕಲ್ಲಿದ್ದಲ ಗನಿಗಳು ನೀರಿನಿಂದ ನಾಶಪಡಿಸಲ್ಪಟ್ಟಿರಬಹುದೆಂದು ಬ್ರಿಟಿಷರು ನಂಬಿದ್ದಾರೆ.

ಇನ್ನು ಬಟ್ಟೆಬರೆಗಳಿಗೆ ಬೇಕಾದ ಹೆಚ್ಚಿನ ವಸ್ತುಗಳನ್ನೂ ಫ್ರಾನ್ಸು ಹೊರ ದೇಶಗಳಿಂದಲೇ ತರಿಸಿಕೊಳ್ಳುತ್ತಿತ್ತು. ಅದು ವರ್ಷಕ್ಕೆ ತರಿಸಿಕೊಳ್ಳುತ್ತಿದ್ದ ಹತ್ತಿ ಸುಮಾರು ೩ ಲಕ್ಷ ಮೆ. ಟನ್‌ಗಳು; ಉಣ್ಣೆ ೨ ಲಕ್ಷ ಮೆ. ಟನ್‌ಗಳು. ಅಂತೂ ಫ್ರಾನ್ಸನ್ನು ಹಿಡಿದುದರಿಂದ ಜರ್ಮನಿಗೆ ಹೆಚ್ಚಿನ ಪ್ರಯೋಜನವೇನೂ ಆಗಿಲ್ಲವೆಂದೂ, ಎಣಿಸಿದಷ್ಟು ಲಾಭ ದೊರೆತಿಲ್ಲವೆಂದೂ ಬ್ರಿಟಿಷರ ಹೇಳಿಕೆ.

ನೋಟೀಸು

ಎಲ್ಲಾ ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ ಮಂಗಳೂರು ಶಹರ ಬೋಳಾರ ಹಳೇ ಕೋಟೆ ಶ್ರೀ ಮಾರ್ಯಮ್ಮ ದೇವಸ್ಥಾನದ ಮೊಕ್ತೇಸರರ ಪೈಕಿ ಕ್ಷತ್ರಿ ವೀಳ್ಯಗಾರರ ಜಾತಿಯ ಅಣ್ಣಪ್ಪಯ್ಯ ಸೇರ್ವೆಗಾರರು ಒಂದು, ಹೊಯ್ಗೆ ನಿರೇಶ್ವಾಲ್ಯ ಈ ಎರಡು ಗ್ರಾಮಗಳ ಕರೇ ಮೊಕ್ತೇಸರನಾಗಿದ್ದ ತುಕ್ರ ಮರಕಾಲರು ಒಂದು ಕೂಡಾ ಎರಡು ಜನರು ಇತ್ತಲಾಗೆ ಮೃತಪಟ್ಟು ಹೋದರಿಂದ ಸದ್ರಿಯವರ ಸ್ಥಾನಗಳಿಗೆ ಸದ್ರಿ ಜಾತಿಯವರ ಪೈಕಿ ಇಬ್ಬರು ಮೊಕ್ತೇಸರರನ್ನು ಇನ್ನೊಂದು ಮಿಟಂಗಿಗೆ ನೇಮಕ ಮಾಡ ಬೇಕಾಗಿ, ಕಳೆದ ತಾ. 23—4—1940ರ ಮೊಕ್ತೇಸರರ ಮಿಟಂಗಿನಲ್ಲಿ ನಿರ್ಣಯಿಸಿಯದೆ. ಆದ್ದರಿಂದ ಜಪ್ಪು, ಬೋಳಾರ, ಹೊಯ್ಗೆ, ನೀರೇಶ್ವಾಲ್ಯ, ಅತ್ತಾವರ ಈ ಐದು ಗ್ರಾಮಗಳ ನಿವಾಸಿಕರ ಪೈಕಿ ಮೋಕ್ತೇಸರಿಕೆಗೆ ಇಚ್ಛೆಯುಳ್ಳ ಕ್ಷತ್ರಿ ವೀಳ್ಯಗಾರರ ಜಾತಿಯವರು ಮತ್ತು, ಹೊಯ್ಗೆ, ನೀರೆಶ್ವಾಲ್ಯ ಈ ಎರಡು ಗ್ರಾಮಗಳ ನಿವಾಸಿಕರ ಪೈಕಿ ಕರೆ ಮೊಕ್ತೇಸರಿಕೆಗೆ ಮೊಗವೀರ ಜಾತಿಯವರು ತಾ. 15—7—'40ರ ವಳಗೆ ನಮಗೆ ಅರ್ಜಿ ಬರಕೊಂಡು ತಾ. 16—7—'40ನೇ ದಿವಸ ಅಪರಾಹ್ನ ಮೂರು ಘಂಟೆ ಸಮಯಕ್ಕೆ ದೇವಸ್ಥಾನದಲ್ಲಿ ಹಾಜರಾಗತಕ್ಕದ್ದು.

• **B. Thimmappa Shetty,**

ಆಡಳಿತೆದಾರ ಪ. ಟ್ರಿಜರರ್.

ಸ್ಟೆಲಿನ್‌ನ ಜೀವನ

ರಷ್ಯದ ಸರ್ವಾಧಿಕಾರಿ, ೧೭೦ ಮಿಲಿಯ ಪ್ರಜೆಗಳ ನಾಯಕ, ಜಗತ್ತಿನ ಏಕಮಾತ್ರ ಸುಖ—ಸಂತೃಪ್ತಿಗಳ ರಾಷ್ಟ್ರದ ಅದೃಷ್ಟವಾದ ಸ್ಟೆಲಿನ್ ಇವನ ಜೀವನಕ್ರಮವೇ ಜಗತ್ತಿಗೆ ಆದರ್ಶವಾಗಿದೆ ಎಂದು ಹೊಗಳುವವರು ಹಲವರಿದ್ದಾರೆ. ಆತನ ತಿಂಗಳ ವೇತನ ಬರೇ ೧೦೦೦ ರೋಬಲ್‌ಗಳು ಅಥವಾ ಸುಮಾರು ೧೪೦ ರೂಪಾಯಿಗಳು. ಅಮೇರಿಕೆಯಲ್ಲಿ ನಿರ್ಗತಿಕರಾಗಿ ಸಹಾಯ ಪಡೆವ ಅನಾಥರಾದರೂ ಇದಕ್ಕಿಂತ ಹೆಚ್ಚಿಗೆ ಪಡೆಯುತ್ತಿದ್ದಾರೆ.

ಆದರೆ, ಸ್ಟೆಲಿನ್ ಈ ವೇತನದಿಂದ ಅಸಾಧ್ಯ ಕಾರ್ಯವನ್ನು ನಿರ್ವಹಿಸುತ್ತಾನೆ. ತನ್ನ ಆಹಾರ, ಉಡಿಗೆ ತೊಡಿಗೆಗಳಿಗಾಗಿ ಈ ಹಣ ವ್ಯಯವಾಗುವುದಾದರೂ, ಇತರ ಸಕಲ ವೆಚ್ಚವನ್ನೂ ಸರಕಾರವೇ ನಿರ್ವಹಿಸುವುದು. ಇವನ ಹೆಸರಲ್ಲಿ ಕಟ್ಟಲಾದ ನಾಲ್ಕಾರು ಅರಮನೆಗಳು ರಷ್ಯದಲ್ಲಿವೆ; ಜಗತ್ತಿನ ಅತ್ಯಾಧುನಿಕ ಶೋಧಗಳೂ, ಅಚ್ಚರಿಯ ಸಾಮಗ್ರಿಗಳೂ ಇಲ್ಲಿವೆ. ಇವು ಇತರರಿಗೆ ತೋರುವದಕ್ಕಾಗಿ — ತನ್ನ ಸ್ಥಾನದ ಮೇಲ್ಮೆಗಾಗಿ ಆದರೆ ಸ್ಟೆಲಿನ್ ಇಂದಿಗೂ ಬಡ ಕೂಲಿಯ ಜೀವನ ಸಾಗಿಸುತ್ತಿದ್ದಾನೆ.



ಡಾ. ಜೋಗೇಶ ಚಂದ್ರ ಘೋಷ್,

ಆಯುರ್ವೇದ ಶಾಸ್ತ್ರಿ,

ಎಂ.ಎ., ಎಫ್.ಸಿ.ಎಸ್.(ಲಂಡನ್), ಎಂ.ಸಿ.ಎಸ್.(ಅಮೇರಿಕ),

ಮೊದಲು ಭಗಲ್ಪುರ ಕಾಲೇಜಿನ ಕೆಮಿಸ್ಟ್ರಿ ಪ್ರೊಫೆಸರು.

ಮಂಗಳೂರು ಏಜಂಟರು:— ಶಾ ಕಂಪೆನಿ, ಸುಗಂಧ ದ್ರವ್ಯ ಮತ್ತು ಔಷಧಿ ವ್ಯಾಪಾರಿಗಳು, ಮಂಗಳೂರು.

ಕೆಟಲಾಗು, ಸಲಹೆ, ಔಷಧಯೋಗಗಳು ಉಚಿತ.

ಮದ್ರಾಸು ಕೇಂದ್ರ:— 17-A, ಬ್ರಾಡ್‌ವೇ, ಮದ್ರಾಸು.

ಸ್ವೀಕಾರ

ವಿಮಾವಾಣಿಜ್ಯ

ಖನೆಯ ಜನ್ಮೋತ್ಸವ ಸಂಚಿಕೆ. ಸಂಪಾದಕ ವ್ಯವಸ್ಥಾಪಕರು ಶ್ರೀ. ಜೆ. ವಿ. ದೊಡ್ಡ ವೀರಪ್ಪನವರು. ವಿಮೆ, ಬ್ಯಾಂಕಿಂಗ್ ಹಾಗೂ ವಾಣಿಜ್ಯಗಳ ಕುರಿತಾದ ಏಕಮಾತ್ರ ಕನ್ನಡ ಮಾಸಿಕವಾದಿದರ ಖನೇ ಸಚಿತ್ರ ಜನ್ಮದಿನೋತ್ಸವ ಸಂಚಿಕೆಯು ಹಿಂದಿನ ವರ್ಷಗಳಂತೆ ಈ ಬಾರಿಯೂ ಉತ್ತಮ ರೀತಿಯಿಂದ ಪ್ರಕಟಿಸಲ್ಪಟ್ಟಿದೆ. ವಿಮಾ-ವಾಣಿಜ್ಯಗಳ ಮೇಲ್ಮೆಗಾಗಿ, ನಾಡಿನಲ್ಲಿ ಸ್ಥಾಪಿಸಿ ತಡೆಯಿಲ್ಲದೆ ಇದನ್ನು ನಡೆಸಿಕೊಂಡುಬಂದ ಸಂಪಾದಕರು ಶ್ಲಾಘನೀಯರೂ, ಪ್ರೋತ್ಸಾಹಯೋಗ್ಯರೂ ಆಗಿರುವದರಿಂದ ನಾಡಿನ ಸಕಲ ಸಂಸ್ಥೆಗಳೂ, ಜನತೆಯೂ ಈ ಪತ್ರಿಕೆಯೊಡನೆ ಸಹಕರಿಸಿ, ವಿಮಾ—ವಾಣಿಜ್ಯದ ಮೇಲ್ಮೆಯನ್ನು ಈ ಪತ್ರಿಕೆ ಯುಕ್ತರೀತಿಯಿಂದ ಸಾಗಿಸುವಂತೆ ಸಾಗದಿರರೆಂದು ಹಾರೈಕೆ.

ಬ್ರಿಟನಿನ ಮೇಲೆ ವಿಮಾನದಾಳಿ

ಶತ್ರು ವಿಮಾನಗಳು ಕಾಲಿವೆಯ ತೀರದಲ್ಲಿ ಓಡಾಡಿದುವು. ಪೋರ್ಟ್‌ಲ್ಯಾಂಡಿನಲ್ಲಿ ಒಂದು ನಾವೆಗೆ ಪೆಟ್ಟಾಗಿದೆ; ಒಂದೆರಡು ಸಣ್ಣ ಪುಟ್ಟ ದೋಣಿಗಳು ಮುಳುಗಿಸಲ್ಪಟ್ಟಿವೆ. ಕೆಲವು ಕಟ್ಟಡಗಳಿಗೂ ಸಿವಿಲಿಯನರಿಗೂ ಗಾಸಿಯಾಗಿವೆ. ಹೀಗೇ ದಕ್ಷಿಣ ಪಶ್ಚಿಮ ಪ್ರಾಂತಗಳಲ್ಲಿಯೂ ಶತ್ರುವಿಮಾನಗಳು ಬಾಂಬು ಸುರಿಸಿದರೂ ಹೆಚ್ಚಿನ ನಷ್ಟವಾಗಿಲ್ಲ. ಇಲ್ಲಿ ೭ ಜರ್ಮನ್ ವಿಮಾನಗಳನ್ನು ಕೆಳಗಿಳಿಸಲಾಗಿದೆ

ಹಿರಿಯರು ಕಾದಿದೆಡೆಗೆ

ಕಳೆದ ಮಹಾ ಯುದ್ಧದಲಿ ನಾಶಪಡಿಸಲ್ಪಟ್ಟ ಕಡೆಯಲ್ಲಿ, ಇವರ ಹಿರಿಯರು ಕಾದಿದೆಡೆಗೆ, ಈ ವೆಲ್ ಕಾವಲಿಗ ಗಂಡಾಳುಗಳು ಸಾಗುತ್ತಿದ್ದಾರೆ.

ಮೈಸೂರು
ಸಾಬೂನು
ಇಪ್ಪತ್ತು ವರ್ಷದ ತಯಾರಿಕೆ ಅನುಭವ
ನೈಮರ್ಲ್ಯವು
ಒಳ್ಳೆ
ಅಭ್ಯಾಸದ ಪರಿಣಾಮ
ನಿಮ್ಮ ಮೈ ಮತ್ತು ಬಟ್ಟೆಗಳನ್ನು
ಶುಚಿ ಮಾಡಲು
ಮೈಸೂರು
ಸಾಬೂನುಗಳು ಕಾದಿವೆ.
ಮೈಸೂರು ಸಾಬೂನುಗಳು ಸರಕಾರದ
ಆಡಳಿತದಲ್ಲಿ ಇಪ್ಪತ್ತು ವರ್ಷಗಳಿಂದಲೂ
ಬೆಂಗಳೂರಿನಲ್ಲೇ ತಯಾರಾಗುತ್ತಿವೆ.

ಮೈಸೂರು
ಸ್ಯಾಂಡಲ್ ಸೋಪ್

ವೆಂಕಟಗಿರಿ ಮಹಾತ್ಮೆ
೫೯೯ ಪಡ್ಯಗಳಿರುವ ೧೫ ಅಧ್ಯಾಯಗಳು.
ದಪ್ಪವಾದ ಕಾಗದ.
ವೆಂಕಟೇಶನು ಗಿರಿಯಲ್ಲಿ ನಡೆಸಿದ ಆದ್ಭುತ ಕಾರ್ಯಗಳು ವಾಚಕರಿಗೆ ಮನಃಖುಚಿತವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ.
ಮುದ್ದಾದ
ಮುದ್ರಣ.
ಬೆಲೆ
ರೂಪಾಯಿ
೧—೮—೦.
ಟಪ್ಪಾಲು
ಹಾಸಲು
ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮುಕೃಷ್ಣಯ್ಯನವರಿಂದ ಭಾವಿನಿಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುನಿತ್ಯದ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಆಕ್ಟಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1-8-0. ಟಪ್ಪಾಲು ಹಾಸಲು ಬೇರೆ.
ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ದಕ್ಷಿಣ ಕನ್ನಡ ಜಿಲ್ಲೆಯ ಯುದ್ಧ ಕಮಿಟಿಯವರ ವಿನಂತಿ ಪತ್ರವು

ಪ್ರಥಮತಾ ನೀವು ಶಾಂತತೆಯಿಂದಲೂ ಧೈರ್ಯದಿಂದಲೂ ಇರಬೇಕಾಗಿ ನಿಮ್ಮೊಡನೆ ಕೇಳಿಕೊಳ್ಳುತ್ತೇವೆ. ಬ್ರಿಟಿಷರ ನೌಕಾ ಸೇನೆಯ, ಹಾಗೂ ಬ್ರಿಟನ್ನಿನ ಮತ್ತು ಬ್ರಿಟಿಷ್ ಸಾಮ್ರಾಜ್ಯದ ರಕ್ಷಣಾನುಕೂಲತೆಗಳ ಸಹಾಯದಿಂದ, ಕಟ್ಟ ಕಡೆಗೆ ಯುದ್ಧದಲ್ಲಿ ನಾವೇ ಜಯಿಸುವೆವೆಂದು ಧೈರ್ಯವಾಗಿರುವುದಕ್ಕೆ ಬೇಕಾದಷ್ಟು ಕಾರಣಗಳಿವೆ. ಜನರ ವಿಶ್ವಾಸವನ್ನು ಕಡಿವೆ ಮಾಡುವ ಯಾವ ಸಂಗತಿಯನ್ನೇ ಆಗಲಿ ಹೇಳಲೂ ಕೂಡದು, ಮಾಡಲೂ ಕೂಡದು. ಮಿತ್ರರಾಷ್ಟ್ರದವರಿಗೆ ಜಯವಾಗುವ ಸಂಭವವು ಕಡಿವೆಯೆಂಬೀ ಮೊದಲಾದ ಬುದ್ಧಿಯಿಲ್ಲದ, ಹಾನಿಕರವಾದ ಹಾಗೂ ತುಚ್ಛವಾದ ಮಾತುಕತೆಗಳನ್ನು ಧಿಕ್ಕರಿಸಿ ಸಂಪೂರ್ಣವಾಗಿ ನಿಲ್ಲಿಸಿಬಿಡತಕ್ಕುದು. ಶೇವಣಾತಿಯ ಹಣವನ್ನು "ವಾಪಾಸು" ಪಡೆಯುವುದಕ್ಕಾಗಿ ಪೋಸ್ಟಾಫೀಸುಗಳಿಗೂ ಬ್ಯಾಂಕುಗಳಿಗೂ ಓಡುವುದೇ ಮುಂತಾದ ಕೃತ್ಯಗಳು ಜನರ ವಿಶ್ವಾಸವನ್ನು ಕೆಡಿಸುವುದಲ್ಲದೆ ಹಾಗೆ ಮಾಡುವ ಜನರಿಗೆ ಅವು ಹಾನಿಯನ್ನುಂಟು ಮಾಡುವುವು ಎಂಬುದನ್ನು ನಾವು ಚೆನ್ನಾಗಿ ತಿಳಿಯಬೇಕಾಗಿದೆ. ಅಂಥವರು ತಮ್ಮ ಹಣದ ಬಡ್ಡಿಯನ್ನು ಕಳೆದುಕೊಳ್ಳುವುದು ಮಾತ್ರವಲ್ಲದೆ, ತಮ್ಮ ಹಣವನ್ನು ಕಾಪಾಡಿಕೊಳ್ಳುವ ತೊಂದರೆಗೂ ಗುರಿಯಾಗುವರು. ಪೋಸ್ಟಾಫೀಸುಗಳಲ್ಲಿಯೂ ಬ್ಯಾಂಕುಗಳಲ್ಲಿಯೂ ನೀವು ಇರಿಸಿದ ಹಣವು ಎಂದಿನಂತೆಯೇ ಭದ್ರವಾಗಿರುವುದು. ಪೋಸ್ಟಾಫೀಸುಗಳಲ್ಲಿಯೂ ಬ್ಯಾಂಕುಗಳಲ್ಲಿಯೂ ನೀವು ಶೇವಣಾತಿಯಾಗಿಟ್ಟ ಹಣವನ್ನು ಸರಕಾರದವರು ಕೈವಶಪಡಿಸಿಕೊಳ್ಳುವುದರಲ್ಲಿದ್ದಾರೆ ಎಂಬ ಸುಳ್ಳು ಸುದ್ದಿಯನ್ನು ನೀವು ಎಂದೂ ನಂಬಬಾರದಾಗಿ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಅದರಂತೆಯೇ ಎಲ್ಲಾ "ಕರೆನ್ಸಿ" ನೋಟುಗಳನ್ನು ನಾಣ್ಯಗಳಿಗೋಸ್ಕರ ವಟಾಯಿಸಲಿಕ್ಕೆ ಪ್ರಯತ್ನಿಸುವುದೂ ಮೂರ್ಖತನವಾಗಿದೆ. ನಿಮಗೊದಗುವ ಎಲ್ಲಾ ಅಗತ್ಯ ಸಂದರ್ಭಗಳಲ್ಲಿ ನೋಟಿನ ಬದಲಿಗೆ ನಾಣ್ಯವಾರುಗಳನ್ನು ಸಬ್ ಟ್ರೆಜರಿಗಳಿಂದಲೂ ಬ್ಯಾಂಕುಗಳಿಂದಲೂ ನೀವು ಪಡೆಯಬಹುದಾಗಿದೆ. ಅಂಥ ನ್ಯಾಯವಾದ ಅಗತ್ಯ ಸಂದರ್ಭಗಳಲ್ಲಲ್ಲದೆ, ನೋಟುಗಳನ್ನು ನಾಣ್ಯಗಳಿಗಾಗಿ ವಟಾಯಿಸುವುದು ನಿಮ್ಮ ಹಣದ ಭದ್ರತೆಗೂ ವೈಯ್ಯೋಣಕ್ಕೂ ತೊಂದರೆಯನ್ನು ಮಾತ್ರ ತಂದೊಡ್ಡುವುದು. ಎಲ್ಲಾ ವಹಿವಾಟುಗಳಲ್ಲಿಯೂ ನಿಮ್ಮ ನೋಟುಗಳಿಗೆ ಸಂಪೂರ್ಣವಾದ ಬೆಲೆಯಿದೆಯೆಂಬುದನ್ನೂ, ಅಂತಹ ನೋಟುಗಳನ್ನು ಸರಿಯಾದ ಬೆಲೆಗೆ ತೆಗೆದುಕೊಳ್ಳುವುದಕ್ಕೆ ಯಾವನಾದರೂ ನಿರಾಕರಿಸಿದ್ದಲ್ಲಿ, ಇಲ್ಲವೆ ನೋಟುಗಳಿಗಾಗಿ ಕಮ್ಮಿ ದರದಲ್ಲಿ ನಾಣ್ಯಗಳನ್ನು ಮಾರುವುದಕ್ಕೆ ಪ್ರಯತ್ನಿಸಿದಲ್ಲಿ, ಅಂಥವನು ದಂಡನೆಯ ತಕ್ಷೀರು. ನಡೆಸಿದ ತಪ್ಪಿಗೆ ಒಳಗಾಗುವನೆಂಬುದನ್ನೂ, ದಯವಿಟ್ಟು ನೆನಪಿನಲ್ಲಿಟ್ಟುಕೊಳ್ಳಿರಿ.

ಬರೇ ಧೈರ್ಯ ಮಾತ್ರ ಉಳ್ಳವರಾಗಿ, ನಡೆಯುತ್ತಿರುವ ವಿದ್ಯಮಾನಗಳನ್ನು ಸುಮ್ಮನೆ ನೋಡುತ್ತ ನಾವು ಕೈಕಟ್ಟ ಕುಳಿತುಕೊಂಡರೆ ಸಾಲದು. ಬ್ರಿಟಿಷ್ ಸಾಮ್ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಇರುವ ರಾಷ್ಟ್ರೀಯ ಅನುಕೂಲತೆಗಳನ್ನು ಎಲ್ಲರೂ ಬೇಗನೆ ಸಂಪೂರ್ಣವಾಗಿ ಯುದ್ಧಕ್ಕೆ ಸಿದ್ಧಗೊಳಿಸುವರು ಎಂಬ ಗ್ರಹಿಕೆಯ ಮೇಲೆ ಮಾತ್ರ ಈ ಭರವಸೆಯ ಧೈರ್ಯವು ಹೊಂದಿಕೊಂಡಿರುತ್ತದೆಯೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಬ್ರಿಟನ್ನು ನ್ಯಾಯವಾದ ಪಕ್ಷದಲ್ಲಿ—ಎಂದರೆ ಸಂಸ್ಕೃತಿಯ ಮತ್ತು ನಾಗರಿಕತೆಯ ಪಕ್ಷದಲ್ಲಿ, "ಹಿಟ್ಲರಿಸಂ" (Hitlerism) ಅಂದರೆ ಹಿಟ್ಲರನ ತತ್ವಗಳಿಗೆ ವಿರುದ್ಧವಾಗಿ ಹೋರಾಡುತ್ತಿದೆ. "ಹಿಟ್ಲರಿಸಂ" ಎಂದರೆ ಪ್ರತಿಯೊಬ್ಬ ಮನುಷ್ಯನಿಗಿರುವ, ಪ್ರತಿಯೊಂದು ರಾಷ್ಟ್ರಕ್ಕಿರುವ ಸ್ವಾತಂತ್ರ್ಯದ ನಾಶವು; ಪ್ರತಿಯೊಬ್ಬ ಮನುಷ್ಯನ ಸುಖಜೀವನದ ಹಾನಿಯು. ಅಲ್ಲದೆ ಅತಿಕ್ರೂರವಾದ ಮತ್ತು ಭೀಕರವಾದ ಆಳುವಿಕೆಯು. "ಹಿಟ್ಲರಿಸಂ"ಗೆ ಜಯವಾಗುವುದೆಂದರೆ,—ನಮ್ಮ ಪಾಲಿಗೆ ಅಂಥ ಹಾನಿಕರವಾದ ಜೀವನಕ್ರಮವು ಕಟ್ಟಟ್ಟ ಗಂಟು! ಅದರಿಂದ, ನಾವು ಈಗ ಅನುಭವಿಸುತ್ತಿರುವ ಸ್ವಾತಂತ್ರ್ಯ ಸುಖೋಪಾಯಗಳನ್ನು ಕಳೆದುಕೊಳ್ಳುವೆವೆಂದರ್ಥವು. ಈ ಯುದ್ಧವು "ಹಿಟ್ಲರಿಸಮ್ಮ"ನ್ನು ಇಲ್ಲದಂತೆ ಮಾಡುವುದಕ್ಕಾಗಿಯೇ ಇದೆ ಎಂಬ ಸಂಗತಿ ತಾನಾಗಿಯೇ, ನಾವು ಇದರಲ್ಲಿ ಸಂಪೂರ್ಣ ಭಾಗವಹಿಸಬೇಕೆಂಬುದಕ್ಕೆ ಮುಖ್ಯ ಕಾರಣವು; ನಾವು ಬ್ರಿಟನ್ನಿನವರಿಗೆ ಮಿತ್ರರಾಗಿದ್ದೇವೆಂಬುದು ಯುದ್ಧದಲ್ಲಿ ನಾವು ಪೂರ್ಣ ಸಹಭಾಗಿಗಳಾಗಬೇಕೆಂಬುದಕ್ಕೆ ಮತ್ತೊಂದು ಕಾರಣವು; ಬ್ರಿಟನ್ನು ಜಯಿಸದಿದ್ದಲ್ಲಿ—ಬ್ರಿಟನ್ನು ಮಾತ್ರವೇ ಅಲ್ಲ ನಾವು ಕೂಡಾ ಸರ್ವವನ್ನೂ ಕಳೆದುಕೊಳ್ಳಬೇಕಾಗುವುದೆಂಬುದು, ಯುದ್ಧಕ್ಕೆ ನಾವು ಎಲ್ಲಾ ವಿಧದಿಂದಲೂ ಸಹಾಯ ಮಾಡಬೇಕೆಂಬುದಕ್ಕೆ ಬಲವಾದ ಕಾರಣವು. ಇತ್ತೀಚೆಗೆ ಯುದ್ಧರಂಗದಲ್ಲಿ ಮುಂದೊತ್ತಿ ಬರುತ್ತಿರುವ ವಿದ್ಯಮಾನಗಳು, ಈಗಾಗಲೇ ಯುದ್ಧದ ಸಂಭವಗಳು ನಮ್ಮ ದೇಶದಿಂದ ಬಹುದೂರದಲ್ಲಿಲ್ಲ ಎಂಬುದನ್ನು ಸೂಚಿಸುತ್ತಿವೆ. ಆದುದರಿಂದ, ನಮ್ಮ ಜನರನ್ನೂ ಸಾಮಗ್ರಿಗಳನ್ನೂ ಆದಷ್ಟು ಬೇಗನೇ ಮತ್ತು ಸಂಪೂರ್ಣವಾಗಿ ಯುದ್ಧಕ್ಕಾಗಿ ಒಟ್ಟು ಕೂಡಿಸಿ ಸಿದ್ಧಗೊಳಿಸುವುದರಲ್ಲಿ ನಾವು ಸಹಾಯ ಮಾಡಲೇ ಬೇಕಾಗಿದೆ. ನಮ್ಮ ಸೈನ್ಯವನ್ನು ಹೆಚ್ಚಿಸುವ ವಿಲೆವಾರಿಗಳು ಆಗುತ್ತಾ ಇವೆ. ಅವಶ್ಯಬಿದ್ದ ಎಡೆಗಳಲ್ಲಿ ಬ್ರಿಟನ್ನಿಗೆ ಸಹಾಯಕ್ಕೆ ಒದಗಲು ಸಾಕಾದಷ್ಟು ಯೋಗ್ಯಪ್ರಮಾಣದ್ದು ಮಾತ್ರವಲ್ಲದೆ ನಮ್ಮ ಸ್ವದೇಶರಕ್ಷಣೆಗೂ ಕೂಡಾ ಸಾಕಾಗುವ ಮಟ್ಟಿನ ಸೈನ್ಯವನ್ನು ಏರ್ಪಡಿಸುವುದರಲ್ಲಿ ನಾವು ಸಹಾಯವನ್ನು ಮಾಡಲೇಬೇಕು. ಆದುದರಿಂದ, ಸೈನ್ಯಕ್ಕೆ ಹೊಸಬರನ್ನು ಸೇರಿಸಿಕೊಳ್ಳುವ ಸಮಯ ಸಾಧ್ಯವಿದ್ದಷ್ಟು ಹೆಚ್ಚು ಮಂದಿ ಸೈನ್ಯಕ್ಕೆ ಸೇರುವ ಹಾಗೆ ನೀವು ಸಹಾಯ ಮಾಡಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇವೆ. ಈಗಣ ಕಾಲದ ಸೈನ್ಯಕ್ಕೆ ಹೆಚ್ಚು ಸಾಧನಗಳೂ ಸಾಮಾಗ್ರಿಗಳೂ ಬೇಕಾಗಿ ಬರುತ್ತದೆ. ಅಂತಹ ಸಾಧನ ಸಾಮಗ್ರಿಗಳ ತಯಾರಿಕೆಗೆ ಬೇಕಾದಷ್ಟು ದ್ರವ್ಯ[illegible]ಲತೆಯನ್ನು ನೀವು ಮಾಡಬೇಕಾಗಿ ನಿಮ್ಮೊಡನೆ ಕೇಳಿಕೊಳ್ಳುತ್ತೇವೆ. "ಯುದ್ಧ ಸಹಾಯನಿಧಿ"(War Funds)ಗಳಿಗೆ ವಂತಿಗೆ ಕೊಡಬೇಕಾಗಿಯೂ ನಿಮ್ಮೊಡನೆ ಕೇಳಿಕೊಳ್ಳುತ್ತೇವೆ. ಅದು ನಿಮ್ಮಿಂದ ಸಾಧ್ಯವಾಗದ ಪಕ್ಷದಲ್ಲಿ, ವಾರ್ ಬಾಂಡುಗಳನ್ನೂ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನೂ ಕೊಂಡುಕೊಳ್ಳುವುದರ ಮೂಲಕ ನಿಮ್ಮ ಹಣವನ್ನು ಬಡ್ಡಿಗೆ ಕೊಡಬೇಕಾಗಿ ಅಪೇಕ್ಷಿಸುತ್ತೇವೆ; ಅವು ನಿಮ್ಮ ಹಣಕ್ಕೆ ಭದ್ರವಾದ ಶೇವಣಾತಿಯ ಏರ್ಪಾಡುಗಳಾಗಿದ್ದು, ನಿನುಗೆ ಬಡ್ಡಿಯನ್ನು ತರುವುದಲ್ಲದೆ ಯುದ್ಧಕ್ಕೆ ಹಣವನ್ನೊದಗಿಸಿಕೊಡುವುದರಲ್ಲಿಯೂ ಸಹಾಯ ಮಾಡುವುವು.

ಕೊನೆಯಲ್ಲಿ,—ನೀವು ಧೈರ್ಯದಿಂದಿದ್ದು ನಿಮ್ಮ ಸುತ್ತುಮುತ್ತಲಿನವರಿಗೂ ಧೈರ್ಯವನ್ನು ಕೊಡುವವರಾಗಿಯೂ, ಯುದ್ಧದಲ್ಲಿ ಜಯಸಿಕ್ಕಬೇಕೆಂಬ ನಿರ್ಧಾರವನ್ನು ಮಾಡಿ, ಆ ನಿರ್ಧಾರವನ್ನೇ ದೃಢವಾಗಿ ಮುಂದುವರಿಸುವವರಾಗಿಯೂ, ಮೇಲೆ ಹೇಳಿದ ರೀತಿಯಲ್ಲಿ ಅಂತಹ ಧೈರ್ಯನಿರ್ಧಾರಗಳನ್ನು ಕಾರ್ಯರೂಪದಲ್ಲಿ ತೋರಿಸುವವರಾಗಿಯೂ, ನಮ್ಮೊಡನೆ ಸಹಕರಿಸಬೇಕೆಂದು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇವೆ.

ಯಂ. ವಿ. ಸುಬ್ರಹ್ಮಣ್ಯನ್,
ಕಲೆಕ್ಟರ್ ಮತ್ತು ಜಿಲ್ಲಾ ಯುದ್ಧ ಕಮಿಟಿಯ ಅಧ್ಯಕ್ಷರು

ಇಂದಿಗೆ ಭಾರತ ಬಾಳುವೆ ಪಾವನವಾಯಿತು!

[೩ನೇ ಪುಟದಿಂದ]

"ಆದರೆ ಅದು, ವಸ್ತುಗಳ ಗುಣಧರ್ಮಕ್ಕನುಗುಣವಾಗಿ, ಒಳ್ಳೆಯದನ್ನು ಮಾಡುತ್ತಿಲ್ಲವೆಂದು ತಿಳಿದು ಬಂದೊಡನೆಯೇ, ಸಾಮ್ರಾಜ್ಯ ಶಾಹಿತ್ವವನ್ನು ಅಹಿಂಸಾ ವಿಧಾನದಿಂದ ನಾನು ಇದಿರಿಸಿದೆ, ಇದಿರಿಸುತ್ತಿದ್ದೇನೆ.

"ನನ್ನ ರಾಷ್ಟ್ರದ ಕೊನೆಯ ಅದೃಷ್ಟ ಅದೇನಾದರೂ, ನಿಮ್ಮ ಮೇಲಿನ ನನ್ನ ಪ್ರೇಮ ಉಳಿಯುವುದು; ಅದು ಕುಗ್ಗದೆ ನಿಲ್ಲುವುದು. ನನ್ನ ಅಹಿಂಸೆಗೆ ವಿಶ್ವಪ್ರೇಮವು ಬೇಕು; ಅದರಲ್ಲಿ ನಿಮ್ಮ ಭಾಗ ಅಲ್ಪವೇನೂ ಅಲ್ಲ. ಅಂತಹ ಪ್ರೇಮವೇ ಇಂದು ನಿಮ್ಮನ್ನು ಪ್ರಾರ್ಥಿಸುವಂತೆ ನನ್ನನ್ನು ಪ್ರೇರೇಪಿಸಿದೆ.

"ನನ್ನ ಪ್ರತಿಯೊಂದು ನುಡಿಗೂ ಪರಮಾತ್ಮನು ಶಕ್ತಿಯನ್ನೀಯಲಿ. ಆತನ ಹೆಸರಲ್ಲಿ ನಾನಿದನ್ನು ಬರೆಯಲು ಮೊದಲು ಮಾಡಿದೆ; ಮತ್ತೆ ಆತನ ಹೆಸರಲ್ಲೇ ಇದನ್ನು ಮುಗಿಸುವೆ. ಈ ನನ್ನ ಪ್ರಾರ್ಥನೆಗೆ ಕಿವಿಗೊಡುವ ಬುದ್ಧಿಯನ್ನೂ, ಧೈರ್ಯವನ್ನೂ ದೇವರು ನಿಮ್ಮ ರಾಜಕಾರಣಿಗಳಿಗೆ ಕೊಡಲಿ!

"ನನ್ನ ಪ್ರಾರ್ಥನೆಯ ಧ್ಯೇಯ ಸಾಧನೆಯು ಉಪಯೋಗವಾಗಬಹುದೆಂದು ಮಾನ್ಯ ವೈಸರಾಯರು ಕಂಡು ನನ್ನಿಂದ ಸಹಾಯವಾಗಬಹುದೆಂದೆಣಿಸಿದರೆ ನನ್ನ ಸೇವೆಯನ್ನರ್ಪಿಸಲು ಸಿದ್ಧವೆಂದೂ ನಾನಂದಿದ್ದೆ."*

ಜಂತನಾಶಕ ಪುಡಿ
ಜಂತುಗಳು ಹೊಟ್ಟೆಯೊಳಗೆ ಬೆಳೆದರೆ ಯಾವ ತರದ ಪೋಷಕ ತಿಂಡಿಗಳು ತಿಂದರೂ ಶರೀರಕ್ಕೆ ಉಪಯೋಗವಿರದು. ಅಲ್ಲದೆ ಸಣ್ಣ ಹುಡುಗರಿಗೆ ಈ ಹುಳುವಿನಿಂದ ತುಂಬಾ ಕೆಡಕಾಗಿರುವದು. ನಮ್ಮ ಜಂತಿನ ಪುಡಿಯಿಂದ ಹೊಟ್ಟೆಯೊಳಗಿನ ಚಿಕ್ಕ ದೊಡ್ಡ ಹುಳಗಳು ಸಲಿಸಾಗಿ ಮಲದೊಡನೆ ಖಿದ್ದು ಹೋಗುವದು. ಇದಕ್ಕೆ ಹರಳೆಣ್ಣೆ ತೆಕ್ಕೊಳ್ಳುವದು ಬೇಡ. ಪೆಕೆಟು 1ಕ್ಕೆ 0-1-0.

ಮೆಜಿಕ್ ಕ್ಯೂರ್
ಈ [illegible]ದ್ಧವಾದ ಔಷಧಿಯು, ಅರ್ಧ ತಲೆನೋವು, ವಾಯು ಹೊಟ್ಟೆನೋವು, ಚಳಿಜ್ವರ, ಹಲ್ಲುನೋವು, ನೆಗಡಿ, ಕೆಮ್ಮು, ಇನ್‌ಫ್ಲುಯೆಂಜ ಮುಂತಾದವುಗಳ ಮೇಲೆ ಗುಣಕಾರಿಯಾಗಿದೆ. ಪೆಕೆಟು 1ಕ್ಕೆ 0-1-6.
ತಯಾರಿಸುವವರು:
SHIVAJI CHEMICAL WORKS,
BELGAUM.
ವಿಕ್ರೀತ ಮಾಡುವವರು:
ಶ್ರೀ. ಹರಿದಾಸ್ ಭಂಡಾರಿಗಳು ಮತ್ತು ಷಾ ಕಂಪೆನಿ, ಮಂಗಳೂರು.

ಸಾವಕಾರ
ಶ್ರೀನಿವಾಸ ರಂಗ ಪೈ
ವಜ್ರಗಳು
ಸಾವಕಾರ ಮಹಾಪ್[illegible]
ಮಂಗಳೂರು

Please write to us for your needs in
RUBBER STAMPS
Monogram Seals, Peon Badges, Sign Boards, Marble Boards,
Fac-simile Stamps, Embossing, Etc.
CROWN RUBBER STAMP CO.,
A17, BALMATTA ROAD, (Estd. 1926) MANGALORE.
(Among the list of Mysore Govt.'s approved Firms.)
Certified by the Agent of India, Ceylon.
Embossing Machines A Speciality.